
ಸಂಪುಟ 20 ಸಂಚಿಕೆ 34
ಆಗಸ್ಟ್ 22, 1999 ಬೆಲೆ ರೂ. 3.00

ದುಡಿವ ಜನರ ಪ್ರಾಣಮಿತ್ರ


ಐಕ್ಯರಂಗ



ಸಾಮರಸ್ಯದ ಗಿರಿಯಲ್ಯಾಕೆ ಖಾವಿಪಡೆಗಳ ಗೂಂಡಾಗಿರಿ



ಬಾಗಿಲನು ತೆರೆದು ಸೇವೆಯನು ಕೊಡು ಹರಿಯೇ!



“ರೈತ-ವಿರೋಧಿ ಬಿಜೆಪಿಗೆ ಮತ್ತೆ ಅಧಿಕಾರ ಸಿಗಬಾರದು”

ಪಟೇಲರ ತ್ರಿಶಂಕು ಸ್ಥಿತಿ

ಎನ್.ಡಿ.ಎ.ಯಲ್ಲಿ ಬಿಜೆಪಿ ಶಕ್ತಿಯನ್ನು ಗೌಣಗೊಳಿಸುತ್ತೇವೆಂದೆಲ್ಲಾ ಬಡಾಯಿ ಕೊಚ್ಚಿಕೊಂಡು ಹೋದ ಜನತಾದಳ(ಸಂಯುಕ್ತ)ದ ಜೆ.ಎಚ್.ಪಟೇಲರ ಬಣವು ಬಿ.ಜೆ.ಪಿ.ಯ ಬಾಗಿಲು ಕಾಯುತ್ತಾ ತ್ರಿಶಂಕು ಸ್ಥಿತಿಯಲ್ಲಿ ಒದ್ದಾಡುತ್ತಿರುವುದು ಶೋಚನೀಯ.

ಬೆಂಗಳೂರು ನಗರದಲ್ಲಿ ಇದೇ ಆಗಸ್ಟ್ 7 ರಂದು ರ್‍ಯಾಲಿಯಲ್ಲಿ ಬಿಜೆಪಿ ಪಕ್ಷವು ಕೋಮುವಾದಿಯಲ್ಲ ಎಂದು ತೇಪೆ ಹಚ್ಚಲು ಯತ್ನಿಸಿದರು. ಖಂಡನೀಯವಾಗಿದೆ. ಸ್ವತಃ ಫಾರೂಕ್ ಅಬ್ದುಲ್ಲಾ ಬಿಜೆಪಿಯನ್ನು ಜಾತ್ಯಾತೀತ ಎಂದು ಸಮರ್ಥಿಸಲು ಹೊರಗಿರುವುದು ಅತ್ಯಂತ ಸಂದರ್ಭಸಾಧಕತನ ಮಾತ್ರವಲ್ಲ ಭಾರತದ ಹಾಗೂ ಕಾಶ್ಮೀರದ ಇತಿಹಾಸದ ಅರಿವಿಲ್ಲ ಎಂಬುದು ಸಾಬೀತಾಯಿತು. ಈ ಚುನಾವಣೆಗಳು ಘೋಷಿತವಾಗುತ್ತಿರುವಂತೆಯೇ ಬಿಜೆಪಿ ಹಾಗೂ ಸಂಘ ಪರಿವಾರವು ವಿವಿಧ ಹೆಸರುಗಳಲ್ಲಿ ದೇಶ, ರಾಜ್ಯದೆಲ್ಲಡೆ ತನ್ನ ಕರಾಳ ಕೋಮುವಾದಿ ಪ್ರಚಾರವನ್ನು ಆಕ್ರಮಣಕಾರಿಯಾಗಿ ಆರಂಭಿಸಿದೆ. ಬೆಂಗಳೂರು ನಗರದಲ್ಲಿ ದೇಶದ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಲು ನಿರಾಕರಿಸಿದ ಸಂಘಪರಿವಾರವು ಸ್ವಾತಂತ್ರ್ಯೋತ್ಸವದ ಹೆಸರಿನಲ್ಲಿ ಪಾಕಿಸ್ತಾನ,ಬಾಂಗ್ಲದೇಶ,

ಸಂಪಾದಕೀಯ

ಬರ್ಮಾ, ಭೂತಾನ್, ನೇಪಾಳ, ಶ್ರೀಲಂಕಾಗಳನ್ನೊಳಗೊಂಡ ಅಖಂಡ ಭಾರತ ನಿರ್ಮಾಣಕ್ಕಾಗಿ ಕಾರ್ಯಕ್ರಮ ಯೋಜಿಸಿದೆ,, ತಿದಿಯೊತ್ತತೊಡಗಿದೆ. ಇದು ಬಿಜೆಪಿ ಸಂಘ ಪರಿವಾರ ತನ್ನ ಕೋಮುವಾದಿ ಅಜೆಂಡಾದ ಒಂದು ಅಂಶವನ್ನು ಬಿಟ್ಟುಕೊಟ್ಟಿಲ್ಲವೆಂಬುದಕ್ಕೆ ಇದು ಸಾಕ್ಷಿ.

ಇಂತಹ ಬಿಜೆಪಿ ಬದಲಾಗಿದೆ, ಕೋಮುವಾದಿಯಲ್ಲ ಎಂದು ಸರ್ಟಿಫಿಕೇಟ್ ನೀಡುವ ಜಾರ್ಜ್, ಹೆಗಡೆ, ಪಟೇಲ್ ಹಾಗೂ ಫರೂಕ್ ಅಬ್ದುಲ್ಲಾರಂತಹ ನಾಯಕರು ಕೋಮು ವಿಷ ಜ್ವಾಲೆಗೆ ಗಾಳಿ ಹಾಕುವ ಭಂಟರಾಗಿದ್ದಾರೆ. ಇಂತಹವರ ಬಣ್ಣವನ್ನು ಅರಿಯಬೇಕು.

ಕೋಮುವಾದೀ ಶಕ್ತಿಗಳ ಅಪಾಯ ಇಷ್ಟೊಂದು ಗಂಭೀರವಾಗಿರುವಾಗ, ನಾಣಯ್ಯ ನೇತೃತ್ವದ ಸಚಿವರ ಗುಂಪು ಬಿಜೆಪಿಯ ಜೊತೆ ಸೇರುವುದನ್ನು ನಿರಾಕರಿಸಿರುವುದು ಸ್ವಾಗತಾರ್ಹ. ಆದರೆ ಸಚಿವರು ಮತ್ತಿತರ ದಳದ ಮುಖಂಡರು ತಮ್ಮ ತಾಟಸ್ಥ್ಯದ ನಿಲುವಿನಿಂದ ಹೊರಬಂದು ಕೋಮುವಾದಿಗಳ ವಿರುದ್ಧ ಧರ್ಮನಿರಪೇಕ್ಷಿತ ಶಕ್ತಿಗಳ ಬಲವರ್ಧನೆಗಾಗಿ ಸಕ್ರಿಯವಾಗಿ ಹೋರಾಟ ನಡೆಸಲು ಮುಂದಾಗಬೇಕು.

ವಿಧಾನ ಸಭೆಯನ್ನು ಮಾತ್ರ ವಿಸರ್ಜಿಸಿ, ಸರ್ಕಾರವನ್ನು ಅನೈತಿಕವಾಗಿ ಉಳಿಸಿಕೊಂಡಿರುವ ಪಟೇಲರ 'ಮಂತ್ರಿಮಂಡಲದಿಂದ' ಸಚಿವರುಗಳ ದಂಡೇ ರಾಜಿನಾಮೆ ನೀಡಿ ಹೊರ ನಡೆಯುತ್ತಿದೆ. ಆದರೂ ಪಟೇಲರು ರಾಜೀನಾಮೆ ನೀಡದೇ ಭಂಡತನದಿಂದ ಮುಂದುವರೆದಿದ್ದಾರೆ. ಇಂತಹ ನಿಷ್ಕ್ರಿಯ ಅನೈತಿಕ ಸರ್ಕಾರ ಬೇಕಿಲ್ಲ.



'ಜನವಾಹಿನಿ'ಯಲ್ಲಿ ಪಿ.ಮಹಮ್ಮದ್‌ರವರ ವ್ಯಂಗ್ಯ

ಮಹಾರಾಷ್ಟ್ರದಲ್ಲಿ ಕ್ರಿಶ್ಚಿಯನ್ ಮುಖಂಡರ ಬಂಧನದ ಪ್ರಯತ್ನ

ಅಹ್ಮದ್‌ನಗರದ ಕೆಲವು ಶಿವಸೇನಾ ಕಾರ್ಯಕರ್ತರ ದೂರುಗಳ ಆಧಾರದಲ್ಲಿ ರಾಷ್ಟ್ರೀಯ ಅಲ್ಪಸಂಖ್ಯಾತ ಆಯೋಗದ ಸದಸ್ಯರಾದ ಡಾ. ಜೇಮ್ಸ್ ಮೇಸೆ ಹಾಗೂ ನಾಸಿಕ್‌ನ ಬಿಷಪ್ ರೆವರೆಂಡ್ ಜಾರ್ಜ್ ನೈನನ್‌ರನ್ನು ಬಂಧಿಸಲು ಮಹಾರಾಷ್ಟ್ರದ ಬಿಜೆಪಿ-ಶಿವಸೇನಾ ಸರಕಾರ ವಾರಂಟ್ ಹೊರಡಿಸಿದೆ. ಇದೊಂದು ದುಷ್ಟಪ್ರಯತ್ನ; ಇದು ಗಂಭೀರ ರಾಜಕೀಯ ಪರಿಣಾಮ ಬೀರಲಿದ್ದು ಮತ್ತೊಮ್ಮೆ ಬಿಜೆಪಿ-ಶಿವಸೇನಾ ಕೂಟದ ಅಲ್ಪಸಂಖ್ಯಾತ-ವಿರೋಧಿ, ಪ್ರಜಾಪ್ರಭುತ್ವ-ವಿರೋಧಿ ಆಕ್ರಾಮಕ ಸ್ವರೂಪವನ್ನು ಬಹಿರಂಗಗೊಳಿಸಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಖಂಡಿಸಿದೆ.

ರಾಷ್ಟ್ರೀಯ ಅಲ್ಪಸಂಖ್ಯಾತ ಆಯೋಗದ ಅಧ್ಯಕ್ಷ ಡಾ. ತಾಹೀರ್ ಮೊಹಮ್ಮದ್‌ರವರೇ ಪ್ರಧಾನಮಂತ್ರಿಗಳಿಗೆ, ಗೃಹಮಂತ್ರಿಗಳಿಗೆ ಈ ಪ್ರಯತ್ನವನ್ನು ವಿರೋಧಿಸಿ ಪ್ರತಿಭಟನಾ ಪತ್ರ ಕಳಿಸಿದ್ದಾರೆ. ರಾಷ್ಟ್ರೀಯ ಅಲ್ಪಸಂಖ್ಯಾತ ಆಯೋಗದ ಸದಸ್ಯರೇ ಇಂತಹ ಹಗೆ ಸಾಧಕ ಕೃತ್ಯಗಳನ್ನು ಎದುರಿಸಬೇಕಾಗಿ ಬಂದಿದ್ದರೆ, ಇನ್ನು ಅಲ್ಪಸಂಖ್ಯಾತ ಕೋಮುಗಳ ಜನಸಾಮಾನ್ಯರ ಪರಿಸ್ಥಿತಿಯೇನು ಈ ಆಡಳಿತದ ಅಡಿಯಲ್ಲಿ? ಇದು ದೇಶದ ಪ್ರಜಾಪ್ರಭುತ್ವವಾದಿಗಳ ಮುಂದಿರುವ ಪ್ರಶ್ನೆ.

ನಿಮ್ಮ ಪ್ರಶ್ನೆ ? ನಮ್ಮ ಉತ್ತರ

ಜಾತ್ಯತೀತ ಪಕ್ಷಗಳು ಎಂದು ಹಲವಾರು ಪಕ್ಷಗಳ ಬಗ್ಗೆ ಐಕ್ಯರಂಗದಲ್ಲಿ ವಿವರಿಸಿರುವುದನ್ನು ನೋಡಿದ್ದೇವೆ. ಆದರೆ ಆ ರೀತಿಯಾಗಿ ಗುರುತಿಸಲ್ಪಡುವ ಪಕ್ಷಗಳು ಕಾಂಗ್ರೆಸ್ ಸೇರಿದಂತೆ ನೇರವಾದ ಜಾತೀಯ ರಾಜಕೀಯವನ್ನೇ ಮಾಡುತ್ತಿದ್ದಾರೆ. ಚುನಾವಣೆಗಳಲ್ಲಿ ಸ್ಪರ್ಧಿಸುವ ಅಭ್ಯರ್ಥಿಗಳನ್ನು ಆರಿಸುವಾಗ, ಮತಗಳನ್ನು ಪಡೆಯುವಾಗ, ಜನತೆಗೆ ಅನುಕೂಲಗಳನ್ನು ಕಲ್ಪಿಸಿಕೊಡುವಾಗ, ಮಂತ್ರಿ ಮೊದಲಾದ ಪದವಿಗಳಿಗೆ ಆರಿಸಿಕೊಳ್ಳುವಾಗ ಮತ್ತು ಅಧಿಕಾರಿವರ್ಗದ ನಡುವೆಯೂ ವಿಪರೀತ ಜಾತೀಯ ಮನೋಭಾವದಿಂದ ವರ್ತಿಸುವ ಇವರುಗಳನ್ನು ಜಾತ್ಯಾತೀತರು ಎಂದು ಬಣ್ಣಿಸುವುದು ಎಷ್ಟು ಸರಿ? ಮತ್ತು ಅವರೊಡನೆ ಚುನಾವಣೆ ಮೈತ್ರಿ ಮಾಡಿಕೊಳ್ಳುವುದು ತಪ್ಪಲ್ಲವೆ?

- ಬಿ.ರಾಜಶೇಖರ ಮೂರ್ತಿ

ಕನ್ನಡದಲ್ಲಿ ಜಾತ್ಯತೀತತೆ ಎಂಬ ಪದವನ್ನು ಇಂಗ್ಲೀಷ್‌ನ ಸೆಕ್ಯುಲರಿಸಂ (secularism) ಎಂಬ ಪದಕ್ಕೆ ಬದಲಾಗಿ ಬಹಳ ಕಾಲದಿಂದ ಬಳಸಲಾಗುತ್ತಿದೆ. ಆದರೆ ಸೆಕ್ಯುಲರಿಸಂ ಎಂಬ ತತ್ವವನ್ನು ಈ ಪದ ಸರಿಯಾಗಿ ಬಿಂಬಿಸುವುದಿಲ್ಲ. ಅದಕ್ಕೆ ನೆರೆಹೊರೆ ರಾಜ್ಯಗಳಲ್ಲಿ ಭಾಷೆಗಳಲ್ಲಿ ಮತಾತೀತ ಅಥವಾ ಮತೇತ್ತರ ಎಂಬ ಪದವನ್ನು ಬಳಸಲಾಗುತ್ತಿದೆ. ಆದರೆ ಕನ್ನಡದಲ್ಲಿ ಸಾಮಾನ್ಯವಾಗಿ ಜಾತಿ, ಮತ, ಕೋಮು ಇವೆಲ್ಲವುಗಳನ್ನು ಒಂದಕ್ಕೊಂದು ಸಮಾನಾಂತರವಾಗಿ ಬಳಸುವ ರೂಢಿ ಇರುವುದರಿಂದ ಇವೆಲ್ಲಾ ಪದಗಳು ಗೊಂದಲವನ್ನು ಉಂಟುಮಾಡುತ್ತವೆ.

ಸೆಕ್ಯುಲರಿಸಂ ಎಂಬ ತತ್ವದ ಸರಿಯಾದ ವಿವರಣೆ ಹೀಗಿದೆ. ಸಾರ್ವಜನಿಕ ವ್ಯವಹಾರಗಳಲ್ಲಿ ಅಂದರೆ ಆಡಳಿತ, ಶಿಕ್ಷಣ, ರಾಜಕೀಯ, ಆರ್ಥಿಕ, ಸಾಂಸ್ಕೃತಿಕ ಮೊದಲಾದ ವ್ಯವಹಾರಗಳಲ್ಲಿ ಧರ್ಮವನ್ನು ಬೆರೆಸಬಾರದು ಮತ್ತು ಧಾರ್ಮಿಕ ಭೇದವನ್ನು ಗಣಿಸಬಾರದು ಎಂದು ಅರ್ಥ. ಇದನ್ನು ಇನ್ನೂ ಸರಳವಾಗಿ ವಿವರಿಸುವುದಾದರೆ ಅಂಗಡಿಯಲ್ಲಿ ಕೊಂಡು-ಕೊಳ್ಳುವ ವ್ಯವಹಾರ, ಮಾರುವವನ ಅಥವಾ ಕೊಳ್ಳುವವನ ಧರ್ಮದ ಮೇಲೆ ಅವಲಂಬನೆಯಾಗಿರುವುದಿಲ್ಲ. ಆದುದರಿಂದ ಅದು ಸೆಕ್ಯುಲರ್ ಪ್ರಪಂಚಕ್ಕೆ ಸೇರಿದ ವ್ಯವಹಾರ. ಅದೇ ರೀತಿ ಸಾಹಿತ್ಯ ಕಲೆ, ಕ್ರೀಡೆ, ಶಿಕ್ಷಣ, ಆರೋಗ್ಯ, ರಾಜಕೀಯದಲ್ಲಿ ಕೂಡ ಇಂತಹ ಧರ್ಮಕ್ಕೆ ಸೇರಿದವನು ಎಂಬುದರ ಆಧಾರದ ಮೇಲೆ ಯಾರನ್ನಾಗಲಿ ಆರಿಸುವುದು, ಮೆಚ್ಚುವುದು ಅವಲಂಬಿಸಬೇಕು ಎಂದು ಅರ್ಥ. ಹೀಗಾಗಿ ಮತ, ಮತೀಯ ಎನ್ನುವುದನ್ನು ಸಾಮಾನ್ಯವಾಗಿ ಬಳಸುವಂತೆ ಹಿಂದೂ, ಮುಸ್ಲಿಂ, ಸಿಕ್, ಪಾರ್ಸಿ, ಕ್ರಿಶ್ಚಿಯನ್, ಜೈನ್, ಬೌದ್ಧ, ಯಹೂದ್ಯ ಮೊದಲಾದ ವಿವಿಧ ಧಾರ್ಮಿಕ ಕಟ್ಟುಪಾಡುಗಳಿಗೆ ಮಾತ್ರ ಬಳಸಿದರೆ ಆಗ ಸೆಕ್ಯುಲರಿಸಂ ಎಂಬುದು ಮತಾತೀತ ಅಥವಾ ಮತೇತರ ಆಗುತ್ತದೆ. ಕೆಲವೊಮ್ಮೆ ಸೆಕ್ಯುಲರಿಸಂನ ಅರ್ಥವನ್ನು ಬಿಂಬಿಸಲು ಧರ್ಮನಿರಪೇಕ್ಷ ಎಂಬ ಪದವನ್ನು ಕೂಡ ಬಳಸುತ್ತಾರೆ. ಇದು ಉಚ್ಚರಿಸುವುದಕ್ಕೆ ಹಾಗೂ ಅರ್ಥ ಮಾಡಿಕೊಳ್ಳುವುದಕ್ಕೆ ದುಡಿಯುವ ಜನಕ್ಕೆ ಕಷ್ಟವಾಗುವುದರಿಂದ ಈ ಪದ ಹೆಚ್ಚಾಗಿ ಬಳಕೆಯಲ್ಲಿಲ್ಲ. ಆದುದರಿಂದ ಜಾತ್ಯತೀತತೆ ಎಂದು ಪತ್ರಿಕೆಗಳಲ್ಲಿ ಭಾಷಣಗಳಲ್ಲಿ ಬಳಸುವಾಗೆಲ್ಲಾ ಅದನ್ನು ಮೇಲೆ ಹೇಳಿದಂತೆ ರಾಜಕೀಯದಲ್ಲಿ ಹಾಗೂ ಇತರ ಸಾರ್ವಜನಿಕ ವ್ಯವಹಾರಗಳಲ್ಲಿ ಧಾರ್ಮಿಕ ನಂಬಿಕೆಗಳನ್ನು ಬೆರೆಸಬಾರದು. ಧಾರ್ಮಿಕ ಪ್ರಚಾರಗಳನ್ನು ಮಾಡಬಾರದು ಎಂಬ ಅರ್ಥದಲ್ಲಿಯೇ ತಿಳಿದುಕೊಳ್ಳಬೇಕು.

ಕೆಲವೊಮ್ಮೆ ಧರ್ಮವನ್ನು ರಾಜಕೀಯದಲ್ಲಿ ಬೆರೆಸಬಾರದು ಎಂದರೆ ಹಾಗಾದರೆ ರಾಜಕೀಯದಲ್ಲಿ ಅಧರ್ಮ ಮಾತ್ರ ಇರಬೇಕೆ ಎಂದು ಪ್ರಚಾರ ಮಾಡುವ ಮೂಲಕ ಅಪಾರ್ಥವನ್ನು ಕಲ್ಪಿಸುತ್ತಾರೆ. ಸಾಮಾನ್ಯವಾಗಿ ಭಾರತದಲ್ಲಿ ಧರ್ಮ, ಎಂಬ ಪದಕ್ಕೆ ಹಿಂದೂ, ಮುಸ್ಲಿಂ ಮೊದಲಾದ ಧಾರ್ಮಿಕ ನಂಬಿಕೆಗಳು, ಕಟ್ಟುಪಾಡುಗಳನ್ನು ಅನುಸರಿಸುವುದು ಎಂದೂ ಮತ್ತು ಹಾಗೆಯೇ ಧರ್ಮದಿಂದ ನಡೆದುಕೊಳ್ಳಬೇಕು. ಧರ್ಮರಾಯನಂತೆ ಇರಬೇಕು, ಧರ್ಮೇ ರಕ್ಷತಿ ರಕ್ಷಿತಃ (ಧರ್ಮವನ್ನು ರಕ್ಷಿಸುವವರನ್ನು ಧರ್ಮರಕ್ಷಿಸುತ್ತದೆ) ಎಂಬ ಅರ್ಥದಲ್ಲಿ ಅಂದರೆ ಒಳ್ಳೆಯ ನಡವಳಿಕೆ, ಸದಾಚಾರ ಅನ್ಯಾಯವನ್ನು ಮಾಡದಿರುವುದು ಎನ್ನುವ ಅರ್ಥದಲ್ಲಿ ಕೂಡ ಈ ಧರ್ಮ ಎಂಬ ಪದ ಬಳಕೆಯಾಗುತ್ತದೆ. ಆದುದರಿಂದ ಗೊಂದಲಗಳು ಮೂಡುತ್ತವೆ. ಆದ್ದರಿಂದ ಮತಾತೀತ, ಮತೇತರ ಎಂಬ ಪದವನ್ನೇ ಬಳಸುವುದು ಮತ್ತು ಮತ ಎಂಬುದನ್ನು ಕೆಲವೊಮ್ಮೆ ಜಾತಿ ಎಂಬ ಪದಕ್ಕೆ ಬದಲಾಗಿ ಬಳಸುವುದನ್ನು ತಪ್ಪಿಸುವುದು ಸೂಕ್ತ- ಉಳಿದಂತೆ ಬೇರೆ ಪದಗಳನ್ನು ಬಳಸುವಾಗೆಲ್ಲಾ ಅದಕ್ಕೆ ವಿವರಣೆಯನ್ನು ನೀಡಿ ಸೆಕ್ಯುಲರಿಸಂ ಎಂಬ ಪದಕ್ಕೆ ಇರುವ ಅರ್ಥವನ್ನು ಗ್ರಹಿಸುವಂತೆ ಮಾಡುವುದು ಅವಶ್ಯಕ.

ಹೀಗಾಗಿ ಜಾತ್ಯಾತೀತತೆ ಎಂದರೆ ಜಾತಿಗಳಿಗೆ ಅತೀತನಾಗಿರುವುದು ಎಂದು ಅರ್ಥವಲ್ಲ. ಧಾರ್ಮಿಕ ನಂಬಿಕೆ ಕಟ್ಟುಪಾಡುಗಳನ್ನು ಸಾರ್ವಜನಿಕ ವ್ಯವಹಾರಗಳ ಜೊತೆ ಬೆರೆಸದಿರುವುದು ಎಂದು ಅರ್ಥ. ಜಾತೀಯತೆಯ ತತ್ವವೇ ಬೇರೆ ಹಾಗೂ ಜಾತ್ಯಾತೀತ ತತ್ವವೇ ಬೇರೆ. ಹಾಗೆಂದ ಮಾತ್ರಕ್ಕೆ ಜಾತೀಯತೆಯನ್ನು ಆಚರಿಸುವುದನ್ನು ನಾವು ಮಾನ್ಯ ಮಾಡುತ್ತೇವೆ, ಅಥವಾ ನಿರ್ಲಕ್ಷಿಸುತ್ತೇವೆ ಎಂದು ಅರ್ಥವಲ್ಲ. ಜಾತೀಯತೆ ಜಾತಿಭೇದ ಮಾಡುವುದು ಕೂಡ ಖಂಡನೀಯವಾದದ್ದೆ. ಆದರೆ ಧರ್ಮ ಎಂಬುದಕ್ಕೆ ನಂಬಿಕೆಗಳ ಕಟ್ಟುಪಾಡುಗಳ ವ್ಯವಸ್ಥೆ ಒಂದು ಸಿದ್ಧಾಂತದ ಆಧಾರ ಇರುವಂತೆ ಒಂದು ಜಾತಿಗೆ ಈ ಆಧಾರ ಇರುವುದಿಲ್ಲ. ಮತ್ತು ಜಾತಿ ಎಂಬುದು ಅಧಿಕಾರವನ್ನು ಹಿಡಿಯ ಬಹುದಾದಷ್ಟು ಇಡೀ ದೇಶದ ಪ್ರಭುತ್ವವನ್ನು ಹಿಡಿಯಬಹುದಾದಷ್ಟು ಪ್ರಾಬಲ್ಯ ಹೊಂದಿಲ್ಲದಿರುವುದರಿಂದ ಕೋಮುವಾದ ದಷ್ಟು ಅಪಾಯಕಾರಿಯಲ್ಲ. ಹೀಗಾಗಿ ಕೋಮುವಾದದ ವಿರುದ್ಧವಾಗಿ ಸೆಕ್ಯುಲಾರಿಸಂ ಅಥವಾ ಮತಾತೀತತೆಯ ಪರವಾಗಿ ಹೋರಾಡುವುದು ಇಂದು ಪ್ರಧಾನವಾಗಿದೆ. ಅದರೊಂದಿಗೆ ಜಾತೀಯತೆಯ ಹಾಗೂ ಜಾತಿಭೇದದ ವಿರುದ್ಧವಾಗಿಯೂ ಹೋರಾಡಬೇಕಾಗುತ್ತದೆ.

'ಬಿಜೆಪಿ ದರ್ಶನ', 'ಬಿಜೆಪಿವಾಣಿ'ಯ ವಿರುದ್ಧ ದೇಶಾದ್ಯಂತ ಪ್ರತಿಭಟನೆ

ಹಿಂದೆ ಇಂದಿರಾವಾಣಿ, ರಾಜೀವವಾಣಿ, ಇಂದಿರಾದರ್ಶನ, ರಾಜೀವ ದರ್ಶನವಾದಂತೆ ಭಾರತದ ಆಕಾಶವಾಣಿ ಹಾಗೂ ದೂರದರ್ಶನ ಈಗ ಬಿಜೆಪಿವಾಣಿ, ಬಿಜೆಪಿ ದರ್ಶನವಾಗುತ್ತಿರುವುದನ್ನು ಖಂಡಿಸಿ ಆಗಸ್ಟ್ 7 ರಂದು ದೇಶಾದ್ಯಂತ ಆಕಾಶವಾಣಿ, ದೂರದರ್ಶನ ಕೇಂದ್ರಗಳ ಎದುರು ಭಾರೀ ಮತಪ್ರದರ್ಶನ ನಡೆಯಿತು. ಕರ್ನಾಟಕದಲ್ಲಿ ಬೆಂಗಳೂರು, ಧಾರವಾಡ ಮತ್ತಿತರ ಕಡೆ ಪ್ರತಿಭಟನೆಗಳು ನಡೆದ ಸುದ್ದಿಗಳು ಬಂದಿವೆ. ದಿಲ್ಲಿಯಲ್ಲಿ ಮತಪ್ರದರ್ಶನಕಾರರು ಪೋಲೀಸ್‌ರೊಡನೆ ಸೆಣಸಬೇಕಾಗಿಬಂತು.

ಸಾರ್ವಜನಿಕ ಮಾಧ್ಯಮವನ್ನು ಆಳುವ ಪಕ್ಷದ ತುತ್ತೂರಿಯಾಗಿ ಮಾಡುವ ಪ್ರಯತ್ನದಲ್ಲಿ ಆಗಸ್ಟ್ 15 ರಿಂದ ದೂರದರ್ಶನದ 24 ಗಂಟೆಗಳ ಸುದ್ದಿ ಚಾನೆಲ್ ಆರಂಭಿಸಲಾಗುತ್ತಿದೆ. ಚುನಾವಣೆಯ ಸಂದರ್ಭದಲ್ಲಿ ಈ ಆರಂಭ ಸಂದೇಹಾಸ್ಪದವಾದಂತದ್ದು. ಆಳುವ ಪಕ್ಷಗಳಿಗೆ ಪ್ರಯೋಜನ ತರುವಂತದ್ದು, ಆದ್ದರಿಂದ ಇದರ ಆರಂಭವನ್ನು ಚುನಾವಣೆಯ ನಂತರದವರೆಗೆ ಮುಂದೂಡುವಂತೆ ಮಧ್ಯಪ್ರವೇಶಿಸಬೇಕು ಎಂದು ಸಿಪಿಐ(ಎಂ) ಹಾಗೂ ಸಿಪಿಐ ಚುನಾವಣಾ ಆಯೋಗವನ್ನು ವಿನಂತಿಸಿವೆ.

ಈ 'ದೂರದರ್ಶನ' ಪ್ರಸಾರ ಮಾಡುತ್ತಿರುವ ಪ್ರತಿಗಂಟೆಯ ಸುದ್ದಿಯ ಆರಂಭದಲ್ಲಿನ ಚಿತ್ರಮಾಲೆಯಲ್ಲಿ ವಾಜಪೇಯಿ, ಅಡ್ವಾಣಿ, ಪ್ರಮೋದ್ ಮಹಾಜನ್ ಮಾತ್ರವಲ್ಲ ವೆಂಕಯ್ಯನಾಯ್ಡು ಕೂಡಾ ಕಾಣಿಸಿಕೊಳ್ಳುತ್ತಿರುತ್ತಾರೆ. ವಾಜಪೇಯಿಯವರು ಪ್ರಧಾನ ಮಂತ್ರಿಯಾಗಿರಬಹುದು ಆದರೆ ಅವರು ಮತ್ತೆ ಪ್ರಧಾನಮಂತ್ರಿಯಾಗ ಬಯಸುವ ಅಭ್ಯರ್ಥಿ ಕೂಡ. ಈ ಪ್ರಸಾರದಲ್ಲಿ ಏನಿರಬೇಕು ಎಂಬುದಕ್ಕೆ ನಿರ್ದೇಶನಗಳು ವಾರ್ತಾ-ಪ್ರಸಾರ ಮಂತ್ರಿಗಳ ಅಧಿಕೃತ ನಿವಾಸದಿಂದಲೇ ಬರುತ್ತಿವೆ ಎಂಬುದು ಪತ್ರಿಕೆಗಳಲ್ಲಿ ಪ್ರಕಟವಾಗಿರುವ ಎಲ್ಲರಿಗೂ ತಿಳಿದಿರುವ ಸಂಗತಿ. 24 ಗಂಟೆಗಳ ಸುದ್ದಿ ಚಾನೆಲ್ ಕೂಡಾ ವಾರ್ತಾ-ಪ್ರಸಾರ ಮಂತ್ರಿ ನೇಮಿಸಿದ ವ್ಯಕ್ತಿಗಳ ಉಸ್ತುವಾರಿಯಲ್ಲೇ ನಡೆಯಲಿದ್ದು ನೇರವಾಗಿ ಬಿಜೆಪಿ ಚುನಾವಣಾ ಪ್ರಚಾರದ ಮಾಧ್ಯಮವಾಗುವ ಸಂಭವವಿದೆ.

ಈಗಿನ ಮಾಹಿತಿ ಹೆಚ್ಚಳದ ಹಿನ್ನೆಲೆಯಲ್ಲಿ 24 ಗಂಟೆಗಳ ಚಾನೆಲ್ ಒಂದು ಅಗತ್ಯವೆನಿಸಿದರೂ ಅದನ್ನು ಚುನಾವಣಾ ಸಮಯದಲ್ಲಿ ಆರಂಭಿಸುವುದು ಸಂದೇಹಕ್ಕೆ ಎಡೆಕೊಡುತ್ತದೆ. ಆದ್ದರಿಂದ ಈಗ 24 ಗಂಟೆಗಳ ಸುದ್ದಿಚಾನೆಲ್‌ನ ಆರಂಭಕ್ಕೆ ಹಾಗೂ ಈಗಿನ ಸುದ್ದಿ ಪ್ರಸಾರಗಳು ಬಿಜೆಪಿ ಪರವಾಗದಂತೆ ತಡೆ ಒಡ್ಡಬೇಕು ಎಂದು ಸಿಪಿಐ(ಎಂ) ಹಾಗೂ ಸಿಪಿಐ ಪ್ರಧಾನಕಾರ್ಯದರ್ಶಿಗಳು ಚುನಾವಣಾ ಆಯೋಗಕ್ಕೆ ಮನವಿ ಮಾಡಿದ್ದಾರೆ.

ದಿಲ್ಲಿಯಲ್ಲಿ ಪೋಲೀಸರೊಂದಿಗೆ ಸೆಣೆಸುತ್ತಿರುವ ಪ್ರತಿಭಟನಾಕಾರರು



ಬಾಗಿಲನು ತೆರೆದು ಸೇವೆಯನು ಕೊಡೊ ಹರಿಯೆ


ಕೃಪೆ: ಪಿ.ಮಹಮ್ಮದ್

ಜಿ.ಎನ್.ನಾಗರಾಜ್

"ಬಾಗಿಲನು ತೆರೆದು ಸೇವೆಯನು ಕೊಡೊ ಹರಿಯೆ,
ಕೂಗಿದರೂ ದನಿಕೇಳಲಿಲ್ಲವೇ ನರಹರಿಯೆ"

ಕರ್ನಾಟಕದ ರಾಜಧಾನಿ ಬೆಂಗಳೂರಿನಲ್ಲಿ ಹಾಗೂ ಹಲವು ಜಿಲ್ಲಾ ಕೇಂದ್ರಗಳಲ್ಲಿ ಮುಖ್ಯವಾಗಿ ಪಟೇಲರ ರಾಜಕಾರಣ ತವರು ಮನೆಯಾದ ಶಿವಮೊಗ್ಗ ದಾವಣಗೆರೆಗಳಲ್ಲಿ ಜಾತ್ಯಾತೀತ ಜನತಾದಳದ ಟ್ರ್ಯಾಕ್ಟರ್ ರಭಸದಿಂದ ಚಲಿಸುತ್ತಾ ಜನತಾದಳದ ಮೂಲ ಕಾರ್ಯಕರ್ತರನ್ನು ಹಾಗೂ ತಾಲ್ಲೂಕು, ಜಿಲ್ಲಾ ನಾಯಕರನ್ನು ಸೆಳೆದುಕೊಳ್ಳುತ್ತಿರುವಾಗ ಜೆ.ಎಚ್.ಪಟೇಲರು ಎಲ್ಲಿದ್ದಾರೆ ಏನು ಮಾಡುತ್ತಿದ್ದಾರೆ ಎಂದು ಹುಡುಕಾಡಿದರೆ, ಕರ್ನಾಟಕವನ್ನು ಬಿಟ್ಟು ದೂರದ ದೆಹಲಿಯಲ್ಲಿಂದ ದುರ್ಬಲ ಧ್ವನಿಯೊಂದು ಕ್ಷೀಣವಾಗಿ ಕೇಳಿಸುತ್ತಿದೆ." ಸುಮಾರು ಒಂದು ತಿಂಗಳು ಕಾಲ ಪೂರ್ಣವಾಗಿ ಬೆಂಗಳೂರಿನಿಂದ ದೆಹಲಿಯವರೆಗೆ ಮತ್ತೆ ದೆಹಲಿಯಿಂದ ಬೆಂಗಳೂರಿನವರೆಗೆ ತಮ್ಮ ಸಂಗಡಿಗಭಜನಾ ಮಂಡಳಿಯ ಸದಸ್ಯರ ಜೊತೆಗೆ ಭಜನೆ ಮಾಡಿಸುಸ್ತಾದರೂ ಬಿಡದೆ "ಬಾಗಿಲನು ತೆರೆದು ಸೇವೆಯನು ಕೊಡೊ ಹರಿಯೆ, ಕೂಗಿದರೂ ಧ್ವನಿ ಕೇಳಲಿಲ್ಲವೆ ನರಹರಿಯೆ" ಎಂದು ಭಜನೆ ಮಾಡುತ್ತಿದ್ದಾರೆ. ಪತ್ರಿಕೆಗಳಲ್ಲಿ ಈ ಭಜನಾ ಮೇಳದ ಸುದ್ದಿಗಳು ಅದರ ತಲೆಬರಹಗಳೂ ಇವರ ಅವಸ್ಥೆಯನ್ನು ತರಹೇವಾರಿಯಾಗಿ ಬಣ್ಣಿಸುತ್ತಿವೆ. ಇಡೀ ಕರ್ನಾಟಕದ ಜನತೆ ಇವರಿಗೆ ಬಂದ ಪಾಡು ನೋಡಿ ನಗುತ್ತಿದ್ದಾರೆ.

ಬಿಜೆಪಿಯನ್ನು ಹಿಂದಿನ ದಿನ ಕ್ಯಾನ್ಸರ್ ಎಂದು ಕರೆದು ಮರುದಿನ ಹಗಲು ಕಂಡ ಬಾವಿಗೆ ಬೀಳಲು ಹೋದ ಜೆ.ಎಚ್. ಪಟೇಲರಿಗೆ ಈಗ ಬಿಜೆಪಿಯ ನಿಜಸ್ವರೂಪದ ದರ್ಶನವಾಗುತ್ತಿದೆ. ಕುಣಿಕುಣಿದು ಅವರ ಜೊತೆಹೋದ ಸಚಿವರಿಗೆ ಮಾತ್ರವೇ ಅಲ್ಲ ಒಂದು ವರ್ಷಕ್ಕೂ ಹೆಚ್ಚು ಕಾಲ ಬಿಜೆಪಿಯ ಎಲ್ಲಾ ಕೃತ್ಯಗಳನ್ನು, ಸ್ಟೈನ್ಸ್ ಎಂಬ ಪರೋಪಕಾರಿ ಪಾದ್ರಿಯನ್ನು ಹಗಲೇ ಸುಟ್ಟಿದ್ದನ್ನೂ ಸಮರ್ಥಿಸಿಕೊಂಡ ಜಾರ್ಜ್ ಹೆಗ್ಗಡೆಗಳಿಗೂ ಈಗ ಜೊತೆಸೇರಿದ್ದ ಪ್ರಾಣಿಯ ಸ್ವರೂಪವನ್ನು ಮತ್ತೆ ಕಂಡು ಕೊಳ್ಳುವಂತಾಗಿದೆ. 1977 ರಲ್ಲಿ ಜನತಾ ಪಕ್ಷವನ್ನೊಡೆದು ಅದರ ಸರಕಾರವನ್ನು ಬೀಳಿಸಿದ ಆರೆಸ್ಸೆಸ್‌ನ (ಆರೆಸ್ಸೆಸ್ ಹಾಗೂ ಜನತಾ ಪಕ್ಷ ಎರಡರಲ್ಲಿಯೂ ಸದಸ್ಯನಾಗಿದ್ದು ಸಂಘದ ಹುಕುಂ ಮೇಲೆಯೆ ಕೆಲಸ ಮಾಡುತ್ತಾ ಜನತಾ ಪಕ್ಷದ ಹಿತಗಳಿಗೆ ವಿರುದ್ಧವಾಗಿ ಕೇಂದ್ರದ ಹಲವು ಮಂತ್ರಿ ಶಾಖೆಗಳು, ಉ. ಪ್ರದೇಶ ಮೊದಲಾದ ರಾಜ್ಯಗಳ ಆಡಳಿತಗಳನ್ನು ಕೋಮುವಾದೀಕರಣ, ಸಂಘೀಕರಣಗೊಳಿಸುತ್ತಿದ್ದ ಆರೆಸ್ಸೆಸ್ ಎಂಬ ಹೆಬ್ಬಾವಿನ ಬಾಯಿಂದ ಬಿಡಿಸಿಕೊಳ್ಳುವ ಪ್ರಯತ್ನದಲ್ಲಿ ಜನತಾಪಕ್ಷ ಎರಡಾಗಿ ಅಂದಿನ ಮೊರಾರ್ಜಿ ದೇಸಾಯಿ ಸರ್ಕಾರ ಬಿದ್ದು ಹೋಯಿತು.) ನಿಜಸ್ವರೂಪವನ್ನು ಕಂಡಿದ್ದ ಹೆಗ್ಗಡೆ ಹಾಗೂ ಜಾರ್ಜ್‌ಗಳು ಅಂದು ಕಲಿಯದ ಪಾಠವನ್ನು ಇಂದು ಮತ್ತೆ ಕಲಿಯಬೇಕಾಗಿದೆ.

ಬಿಜೆಪಿ ಕೋಮುವಾದಿ ಪಕ್ಷವೇ ಅಲ್ಲ ಎಂದವರು ಬಿಜೆಪಿಯ ಮೇಲೆ ಆರೆಸ್ಸೆಸ್ ನ ಹಿಡಿತ ಎಷ್ಟು ಬಲ ವಾದದ್ದು ಎಂದು ಇಂದು ತಿಳಿದು ಕೊಂಡಿರಬೇಕು. ನಾವು ಸೇರುತ್ತಿರುವುದು ರಾಷ್ಟ್ರೀಯ ಪ್ರಜಾಸತ್ತಾತ್ಮಕ ಮೈತ್ರಿ ಕೂಟಕ್ಕೆ (ಎನ್.ಡಿ.ಎ.ಗೆ) ಆ ಕೂಟದಲ್ಲಿ ತಮ್ಮಂತೆಯೇ ಬಿಜೆಪಿನೂ ಒಂದು ಸದಸ್ಯ ಪಕ್ಷವಷ್ಟೇ ಅದಕ್ಕಿರುವಷ್ಟೇ ಅಧಿಕಾರ ನಮಗೂ ಇದೆ ಎಂದೆಲ್ಲಾ ಸಮರ್ಥಿಸಿಕೊಳ್ಳುತ್ತಿದ್ದ ಜೆ.ಎಚ್.ಪಟೇಲರಿಗೆ ಎನ್.ಡಿ.ಎ.ದ ಮೇಲಿನ ಒಡೆತನ ಯಾರದು ಎಂದು ಈಗಲಾದರೂ ಅರಿವಾಗಿದೆಯೆ?. ಎನ್.ಡಿ.ಎ.ದ ಒಡೆತನ ಬಿಜೆಪಿಯದ್ದು ಬಿಜೆಪಿಯ ಮೂಲಕ ಆರೆಸ್ಸೆಸ್ ಅಥವಾ 'ಸಂಘ', ಇದು ಇಂದು ದೇಶವನ್ನಾಳುತ್ತಿರುವ ಶಕ್ತಿಗಳ ನಿಜಸ್ವರೂಪ. ಎನ್.ಡಿ.ಎ.ಗೆ ಯಾರನ್ನೂ ಸೇರಿಕೊಳ್ಳಬೇಕು ಎಂಬುದು ಎಲ್ಲಿ ತಿರ್ಮಾನವಾಗಬೇಕು? ಎನ್.ಡಿ.ಎ ಸಭೆಯಲ್ಲಿ ಆದರೆ ಜುಲೈ 31 ರಂದು ಸೇರಿದ್ದ ಈ ಸಭೆಯಲ್ಲಿ ಎಲ್ಲವೂ ತಿರ್ಮಾನವಾಗಿ ಬಿಡುತ್ತದೆ ಎಂದು ಜಾರ್ಜ್ ಹೆಗ್ಗಡೆಗಳೂ ಪಟೇಲರ ಬಣವೂ ತಿಳಿದುಕೊಂಡಿತು. ಆದರೆ ಆದದ್ದೇನು? ಈ ವಿಷಯವೇ ಅಲ್ಲಿ ಚರ್ಚೆಗೆ ಬರಲಿಲ್ಲ. ಇದು ಎನ್.ಡಿ.ಎ ಗೆ ಸಂಬಂಧಿಸಿದ ವಿಷಯವಲ್ಲ. ಕೇವಲ ಬಿಜೆಪಿಗೆ ಸಂಬಂಧಿ ವಿಷಯ ಎಂದು ಹಿಂದಿನ ದಿನವೇ ತೀರ್ಮಾನವಾಗಿ ಹೋಯಿತು. ಜಾರ್ಜ್, ಹೆಗ್ಗಡೆಯವರೇ ಘೋಷಿಸುವಂತಾಯಿತು. ಇದು ಈಗಲೂ ಪಟೇಲ್ ಹೆಗ್ಗಡೆ-ಜಾರ್ಜ್ ರಂತಹ ಎಡಬಿಡಂಗಿಗಳಿಗೆ , "ಕೂಡಿದವರಿಗೆ ಕೋಡಗವೂ ಮುದ್ದೆ" ಎಂಬಂತೆ ಹೊಸ ಮೈತ್ರಿಯ ಮೋಹದಲ್ಲಿ ಮುಚ್ಚಿದ ಅರಿವು ತೆರೆಯದೇ ಹೋದರೆ ಜನತೆಗಾದರೂ ಇದು ಅರಿವಾಗಬೇಕು.

1977 ರಿಂದ ಮೊನ್ನೆಮೊನ್ನೆಯವರೆಗೂ ರಾಜಕೀಯವಾಗಿ ಅಸ್ಪೃಶ್ಯವಾಗಿದ್ದ ಬಿಜೆಪಿ, 1996 ರಲ್ಲಿ ದೇಶದಲ್ಲಿ ಪ್ರಪ್ರಥಮ ಬಾರಿಗೆ ಅಧಿಕಾರ ಗ್ರಹಣಮಾಡಿದ ಮೇಲೆಯೂ ಕೂಡ ಯಾರೂ ಮುಟ್ಟಿಕೊಳ್ಳಲು ನಿರಾಕರಿಸಿದ್ದ ಬಿಜೆಪಿಯ ಅಂದಿನ ದೈನ್ಯಾವಸ್ಥೆ ಎಂತಹದು. 1996-98 ರವರೆಗೆ ಕಂಡ ಕಂಡವರ ಮನೆಯ ಬಾಗಿಲು ಬಡಿದು "ಅಸ್ಪೃಶ್ಯತನ" ವನ್ನು ನೀಗಿಸಿಕೊಳ್ಳಲು ಅಂಗಲಾಚುತ್ತಿದ್ದ ಬಿಜೆಪಿ ಇಂದು ಬಿಜೆಪಿಯೇನು ಅಸ್ಪೃಶ್ಯವಲ್ಲ ಎಂದು ಸರ್ಟಿಫಿಕೇಟ್ ಕೊಟ್ಟ ಹೆಗ್ಗಡೆ, ಜಾರ್ಜ್‌ರಿಗೆ ಕಾಣಿಸಿದ ಗತಿಯೇನು? ಅದೂ ವಾಜಪೇಯಿಯವರ ಸಮ್ಮತಿಯ ಮೇರೆಗೆ ಅವರ ನೇರ ಮಧ್ಯಪ್ರವೇಶದಲ್ಲಿ 'ಆಪರೇಷನ್ ಬ್ರೇಕ್" ನಡೆದರೂ ಕೂಡ ಕೊನೆಗೆ ದೈನೆಸಿಯಾಗಿ ಅಂಗಲಾಚು ಸ್ಥಿತಿಗೆ ಬಿಜೆಪಿ ಸಂಘಕೂಟದ ಕಂಬ ಕಂಬಗಳಿಗೂ ಉರುಳು ಸೇವೆ ಮಾಡುವ ಗತಿಗೆ (ವಾಜಪೇಯಿಯೊಡನೆ ಅದ್ವಾನಿ, ಕುಶಭಾವುಠಾಕ್ರೆ, ಕೊನೆಗೆ ವೆಂಕಯ್ಯ ನಾಯ್ಡು, ಗೋವಿಂದಚಾರ್ಯಗಳೊಡನೆ ಕೂಡ ಎಷ್ಟು ಬಾರಿ ಮಾತುಕತೆ) ಅವರನ್ನೂ ತಂದಿಟ್ಟರು.

ಇವರಂತಹವರ ಕೃಪೆಯಿಂದ ಸ್ಪೃಶ್ಯರಾದ ಬಿಜೆಪಿ- ಸಂಘಪರಿವಾರ ಇಂದು ಇವರನ್ನೇ ಅಸ್ಪೃಶ್ಯರನ್ನಾಗಿಸುವ ದರ್ಪ, ಅಟ್ಟಹಾಸಗಳನ್ನು ಪಡೆದುಕೊಂಡಿದೆ.

ಪಟೇಲರು ತಮ್ಮ ಮಹಾದ್ರೋಹವೆಸಗಿದ ಒಂದು ತಿಂಗಳಿಗೆ ಸರಿಯಾಗಿ (ಆ. 14 ರಂದು) ದೆಹಲಿಯಲ್ಲಿ ಬಿಜೆಪಿಯ (ಸರಿಯಾಗಿ ಗಮನಿಸಿ ಬಿಜೆಪಿ ಎನ್.ಡಿ.ಎ ಅಲ್ಲ) ಪಾರ್ಲಿಮೆಂಟರಿ ಬೋರ್ಡ್ ಸಭೆ ಸೇರುತ್ತದೆ. ಅದಕ್ಕೆ ಬಿಜೆಪಿಯ ರಾಜ್ಯ ನಾಯಕರನ್ನು ಕರೆಸಿಕೊಳ್ಳಲಾಗಿದೆ. ಅಲ್ಲಿ ಜನತಾದಳ(ಸಂಯುಕ್ತ)ವನ್ನು ಸೇರಿಸಿಕೊಳ್ಳುವ ತೀರ್ಮಾನವಾಗಲಿದೆ. ಅಲ್ಲಿ ಯಾವ ಸ್ವರೂಪದಲ್ಲಿ "ಜನತಾ ಪರಿವಾರ" ವನ್ನು ಸೇರಿಸಿಕೊಳ್ಳಲಾಗುವುದೋ ಅದಕ್ಕೆ ತಕ್ಕಂತೆ ಮುಂದೆ ಈ ಜನತಾ ಪರಿವಾರದವರೊಡನೆ ಮಾತುಕತೆ ಆರಂಭವಾಗಲಿದೆ. ಮುಕ್ತಾಯ ಎಂದಿಗೊ?. ಯಾವ ಸ್ವರೂಪದಲ್ಲಿ ಸೇರಿಸಿಕೊಳ್ಳವುದು- ಎಂದರೆ ಈಗಲೂ ಬಿಜೆಪಿಯವರ ಬಿಗಿಪಟ್ಟು ನಮಗೂ ಜನತಾದಳವೆಂಬುದಕ್ಕೂ ಯಾವುದೇ ಸಂಬಂಧವಿಲ್ಲ ಕೇವಲ ಲೋಕಶಕ್ತಿಯೊಂದಿಗೆ ಮಾತ್ರ ನಮ್ಮ ಸಂಬಂಧ ಲೋಕಶಕ್ತಿಗೆ ಪಟೇಲರ ಬಣಸೇರಿ, ಲೋಕಶಕ್ತಿಯ ಚಿಹ್ನೆಯಡಿ ಸ್ಪರ್ಧಿಸಿದರೆ, ಲೋಕಶಕ್ತಿಗೆಂದು ನಾವು ಕೊಡಮಾಡುವ ಸ್ಥಾನಗಳನ್ನು ಹಂಚಿಕೊಂಡರೆ ಮಾತ್ರ ಬಣಕ್ಕೆ ಮುಕ್ತಿ.

ಕಾರ್ಗಿಲ್ ಯುದ್ಧದ ಸಮಯದಲ್ಲಿ ದೇಶದ ರಕ್ಷಣೆಯ ಭಾರ ಹೊತ್ತಿದ್ದ ಎಲ್ಲಾ ಸಮಯದಲ್ಲಿ ಬಿಜೆಪಿ ಕೂಟದ ಬಾರ ಹೊತ್ತಿದ್ದ ಜಾರ್ಜ್‌ಫರ್ನಾಂಡೀಸ್ ಹಾಗೂ ಹೆಗ್ಗಡೆಯವರು ರಾಜಿನಾಮೆಯ ಬೆದರಿಕೆ ಹಾಕಿದ ಮೇಲೆ ವಾಜಪೇಯಿಯವರ ಜೊತೆ ಅಲ್ಲ ಅದ್ವಾನಿಯವರ ಜೊತೆ 90 ನಿಮಿಷಗಳ ಮಾತುಕತೆಯನ್ನು ನಡೆಸಿದ ನಂತರ ಈ ಮಾತು.

ಈ ಸಾಧನೆ ಮಾಡಿ ದೆಹಲಿಯಿಂದ ಬೆಂಗಳೂರಿಗೆ ಬಂದ ಹೆಗ್ಗಡೆ-ಜಾರ್ಜ್-ಪಟೇಲರನ್ನು ವಿಮಾನ ನಿಲ್ದಾಣದಲ್ಲಿ ಕಂಡ ಆಗಸ್ಟ್ 13 ರ ಉದಯವಾಣಿಯ ಮರದಿ ಹೀಗಿದೆ:

ಇಂದು ರಾತ್ರಿ ಕೇಂದ್ರ ವಾಣಿಜ್ಯ ಸಚಿವ ರಾಮಕೃಷ್ಣ ಹೆಗಡೆ ಮತ್ತು ಮುಖ್ಯಮಂತ್ರಿ ಪಟೇಲ್ ದಿಲ್ಲಿಯಿಂದ ನಗರಕ್ಕಾಗಮಿಸಿದಾಗ ಅವರ ಮುಖದಲ್ಲಿ ಎಂದಿನ ಲವಲವಿಕೆ ಇರಲಿಲ್ಲ. ಬಿಜೆಪಿ ನಾಯಕರೊಂದಿಗೆ ಮಾತುಕತೆ ಮುರಿದುಬಿದ್ದಿದೆಯೇನೋ ಎಂದು ಭಾಸವಾಗುತ್ತಿತ್ತು.'ದಳ ಸೇರ್ಪಡೆ ವಿಷಯ ಆನ್ ಆಗಿದೆಯೋ ಆಫ್ ಆಗಿದೆಯೋ' ಎಂಬ ಚುಟುಕು ಪ್ರಶ್ನೆಗೆ ಉತ್ತರಿಸಲು ಹೆಗಡೆ ಸ್ವಲ್ಪ ಸಮಯ ತೆಗೆದುಕೊಂಡರು.

'ಅದು ಯಾವತ್ತು ಆಫ್ ಆಗಿತ್ತು ಹೇಳಿ' ಎಂದು ಮರುಪ್ರಶ್ನೆ ಹಾಕಿದರು. ಎನ್.ಡಿ.ಎಗೆ ದಳ ಸೇರಿಸಿಕೊಳ್ಳದಿದ್ದರೆ ರಾಜೀನಾಮೆ ಕೊಡುವುದಾಗಿ ಹೆಗಡೆ ಹೇಳಿದ್ದಾರೆಂದು ಪ್ರಕಟವಾಗಿರುವ ಸುದ್ದಿ ಕುರಿತು ಪ್ರಶ್ನಿಸಿದಾಗ 'ಅದಕ್ಕೆ ಮತ್ತೇನ ಸೇರಿಸುವುದಿಲ್ಲ' (ಆ ಹೇಳಿಕೆಗೆ) ಎಂದ ಹೆಗಡೆ ನುಡಿದರು.

ಅವರ ನಿಕಟವರ್ತಿಗಳ ಪ್ರಕಾರ ನಾಳೆ ದಳ (ಯು) ಅಭ್ಯರ್ಥಿಗಳ ಆಯ್ಕೆ ವಿಷಯದಲ್ಲಿ ಈ ನಾಯಕರು ತೊಡಗಿಸಿಕೊಳ್ಳಲಿದ್ದಾರೆ. ಒಂದು ವೇಳೆ ಬಿಜೆಪಿ ನಿಲುವು ತಮ್ಮ ವಿರುದ್ಧವಾದರೆ ರಾಜ್ಯದ ಎಲ್ಲಾ 224 ವಿದಾನಸಭಾ ಮತ್ತು 28 ಲೋಕಸಭಾ ಕ್ಷೇತ್ರಗಳಿಗೆ ಸ್ಪರ್ಧಿಸಲು ತಯಾರಿ ನಡೆಸಲಿದಾರೆ.

ಆದಾಗ್ಯೂ ನಾಳೆ ಸಂಜೆಯವರೆಗೆ ಬಿಜೆಪಿ ನಿರ್ಧಾರಕ್ಕೆ ಕಾದುನೋಡಲು ಪಟೇಲ್, ಹೆಗಡೆ ತೀರ್ಮಾನಿಸಿದ್ದಾರೆನ್ನಲಾಗಿದೆ. ಬಿಜೆಪಿ ನಾಯಕರ ಹಠಮಾರಿತನದಿಂದಾಗಿ ಹೆಗಡೆ ರಾಜೀನಾಮೆಗೆ ಮುಂದಾಗುವ ಸಾಧ್ಯತೆ ಅಲ್ಲಗಳೆಯುವಂತಿಲ್ಲ ಎಂಬುದು ಅವರ ನಿಕಟವರ್ತಿಗಳ ಹೇಳಿಕೆಯಾಗಿದೆ.

ಬಿಜೆಪಿ ವಕ್ತಾರ ವೆಂಕಯ್ಯ ನಾಯ್ಡು ದಿಲ್ಲಿಯಲ್ಲಿ ಎನ್.ಡಿ.ಎಗೆ ದಳ(ಯು) ಸೇರುವ ಸಂಬಂಧ ಪಕ್ಷ ಯಾವುದೇ ನಿರ್ಧಾರ ತೆಗೆದುಕೊಂಡಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಪುಟ 8 ಕ್ಕೆ

ಸಿಪಿಐ(ಎಂ) ಚುನಾವಣಾ ಪ್ರಣಾಳಿಕೆ ಬಿಡುಗಡೆ

"ಹೊಸ ಲೋಕಸಭೆಯಲ್ಲಿ ಎಡಶಕ್ತಿಗಳ ಸಂಖ್ಯಾಬಲ ಹೆಚ್ಚಿಸಿ"

ಆಗಸ್ಟ್ 12 ರಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಶನ್ ಸಿಂಗ್ ಸುರ್ಜಿತ್‌ರವರು ಪಕ್ಷದ ಕೇಂದ್ರ ಕಚೇರಿಯಲ್ಲಿ ಕಿಕ್ಕಿರಿದು ತುಂಬಿದ್ದ ಪತ್ರಿಕಾ ಸಮ್ಮೇಳನದಲ್ಲಿ 13ನೇ ಲೋಕಸಭಾ ಚುನಾವಣೆಯ ಪ್ರಣಾಳಿಕೆಯನ್ನು ಬಿಡುಗಡೆ ಮಾಡಿದರು, ಮುಂಬರುವ ಚುನಾವಣೆಗಳಿಗೆ ಪ್ರಣಾಳಿಕೆಯನ್ನು ಬಿಡುಗಡೆ ಮಾಡಿದ ಮೊದಲ ಪಕ್ಷ ಸಿಪಿಐ(ಎಂ).

20 ಪುಟಗಳ ಈ ಪ್ರಣಾಳಿಕೆಯಲ್ಲಿ ಎರಡು ಭಾಗಗಳಿದ್ದು, ಮೊದಲ ಭಾಗದಲ್ಲಿ ಬಿಜೆಪಿ ಮತ್ತು ಅದರ ಮಿತ್ರರ 13 ತಿಂಗಳ ದುರಾಡಳಿತವನ್ನು ಪರಿಶೀಲಿಸಿದ್ದರೆ, ಎರಡನೇ ಭಾಗದಲ್ಲಿ ಈ ಚುನಾವಣೆಗಳಲ್ಲಿ ಸಿಪಿಐ(ಎಂ) ಜನಗಳ ಗಮನಕ್ಕೆ ತರಬೇಕೆಂದಿರುವ ಮುಖ್ಯ ವಿಷಯಗಳ ಬಗ್ಗೆ ಚರ್ಚಿಸಲಾಗಿದೆ. ಈ ಸಂದರ್ಭದಲ್ಲಿ ಸಿಪಿಐ(ಎಂ)ನ ಅತ್ಯುನ್ನತ ನಾಯಕತ್ವವಾದ ಪೊಲಿಟ್‌ಬ್ಯೂರೋದ ಇತರ ಸದಸ್ಯರಾದ ಪ್ರಕಾಶ್ ಕಾರಟ್, ಸೀತಾರಾಂ ಯೆಚೂರಿ ಹಾಗೂ ಎಸ್.ರಾಮಚಂದ್ರನ್ ಪಿಳ್ಳೆ ಹಾಜರಿದ್ದರು.

ಬಿಜೆಪಿ ನೇತೃತ್ವದ ಸರಕಾರದ 13 ತಿಂಗಳ ಆಡಳಿತದಲ್ಲಿ ರಾಷ್ಟ್ರೀಯ ಭದ್ರತೆಗೆ ಬೆದರಿಕೆ ಬಂತು, ಅಲ್ಪಸಂಖ್ಯಾತರ ಮೇಲೆ ಅಭೂತಪೂರ್ವ ಧಾಳಿಗಳು ನಡೆದವು, ಭ್ರಷ್ಟಾಚಾರ ಎಗ್ಗಿಲ್ಲದೆ ಬೆಳೆಯಿತು. ಸಂದರ್ಭಸಾಧಕ ರಾಜಕಾರಣ ನಡೆಸುವುದರಲ್ಲಂತೂ ಬಿಜೆಪಿ ಹಿಂದಿನ ಎಲ್ಲಾ ದಾಖಲೆಗಳನ್ನು ಮುರಿದು ಅಧಿಕಾರಕ್ಕೆ ಅಂಟಿಕೊಂಡಿತು. ಹಿಂದಿನ ಚುನಾವಣೆಗಳಲ್ಲಿ ನೀಡಿದ ಭರವಸೆಗಳನ್ನೆಲ್ಲಾ ಮರೆತು ಹೇಗೋ ನರಪೇತಲ ಸಮಿಶ್ರ ಸರಕಾರವನ್ನು ನಡೆಸಿತಷ್ಟೆ ಎಂದರು ಸುರ್ಜಿತ್.

ಈ ಚುನಾವಣೆಯ ತಯಾರಿಯ ಸಮಯದಲ್ಲಂತೂ ಬಿಜೆಪಿ ಅತ್ಯಂತ ಹೊಲಸು ಸಂದರ್ಭಸಾಧಕತನ ಪ್ರದರ್ಶಿಸುತ್ತಿದೆ. ಜನತಾದಳ (ಸಂಯುಕ್ತ)ದೊಂದಿಗೆ ಅದರ ಮೈತ್ರಿಯೇ ಇದಕ್ಕೆ ಒಂದು ಸಾಕ್ಷಿ. 1990 ರಲ್ಲಿ ಬಿಜೆಪಿ ಮಂಡಲ್ ಆಯೋಗವನ್ನು ವಿರೋಧಿಸಿ ರಾಷ್ಟ್ರೀಯ ರಂಗ ಸರಕಾರಕ್ಕೆ ನೀಡಿದ ಬೆಂಬಲವನ್ನು ಹಿಂತೆಗೆದುಕೊಂಡಿತು. ಮಂಡಲ-ಕಮಂಡಲ ಸ್ಪರ್ಧೆಯ ಭಾಗವಾಗಿ ಅಡ್ವಾಣಿ ರಥಯಾತ್ರೆ ಆರಂಭಿಸಿದರು. ಆಗ ಮಂಡಲ್ ಆಯೋಗದ ಪಂಜು ಹಿಡಿದವರೊಂದಿಗೇ ಇಂದು ಬಿಜೆಪಿ ಮೈತ್ರಿ ಮಾಡಿಕೊಂಡಿದೆ. ಇದೆಂತಹಾ ಮೈತ್ರಿಕೂಟ ಎಂದು ಸುರ್ಜಿತ್ ಪ್ರಶ್ನಿಸಿದರು.

ಕಾಂಗ್ರೆಸ್ ಬಗ್ಗೆ ಪತ್ರಕರ್ತರು ಮತ್ತೆ-ಮತ್ತೆ ಕೇಳಿದ ಪ್ರಶ್ನೆಗಳಿಗೆ ಉತ್ತರಿಸುತ್ತಾ ಕಾಂಗ್ರೆಸ್‌ನೊಂದಿಗೆ ಪಕ್ಷ ಮೈತ್ರಿ ಮಾಡಿಕೊಳ್ಳುತ್ತದೆ ಎಂಬುದು ಆಧಾರಹೀನ ವರದಿ ಎಂದು ವರ್ಣಿಸಿದರು. ಸಿಪಿಐ(ಎಂ) ಎಡ, ಪ್ರಜಾಪ್ರಭುತ್ವವಾದಿ ಜಾತ್ಯಾತೀತ ಅಭ್ಯರ್ಥಿಗಳನ್ನು ಬೆಂಬಲಿಸುತ್ತದೆ, ಇಂತಹ ಅಭ್ಯರ್ಥಿಗಳಿಲ್ಲದಲ್ಲಿ ಬಿಜೆಪಿಯನ್ನು ಸೋಲಿಸಬಲ್ಲ ಪ್ರಜಾಪ್ರಭುತ್ವವಾದಿ ಹಾಗೂ ಜಾತ್ಯಾತೀತ ಅಭ್ಯರ್ಥಿಗಳನ್ನು ಬೆಂಬಲಿಸುತ್ತದೆ ಎಂದು ಅವರು ಸ್ಪಷ್ಟಪಡಿಸಿದರು.

ಬಿಜೆಪಿಗೆ ವಿದೇಶಿ ಬಂಡವಾಳಕ್ಕೆ ದೇಶಿ ಬಂಡವಾಳಗಾರರಿಗೆ ಭಾರೀ ಭಕ್ಷೀಸು ನೀಡಲು, ಆಡಳಿತ ದೊಳಗೆ ಆರ್.ಎಸ್. ಎಸ್.ನುಸುಳಿಸಲು ಸಮಯವಿತ್ತು. ಆದರೆ 8-9 ಶೇಕಡಾರಷ್ಟು ರಾಷ್ಟ್ರೀಯ ಆದಾಯ ದಲ್ಲಿ ಹೆಚ್ಚಳ, ವರ್ಷಕ್ಕೆ ಒಂದು ಕೋಟಿ ಉದ್ಯೋಗಾವಕಾಶ, ವರ್ಷಕ್ಕೆ 20 ಲಕ್ಷ ಮನೆಗಳು, ಮಹಿಳೆಯರಿಗೆ 33% ಮೀಸಲಾತಿ, ಭ್ರಷ್ಟಾಚಾರದ ವಿರುದ್ಧ ಲೋಕಪಾಲ ಮಸೂದೆ ಹಾಗೂ ರಾಷ್ಟ್ರೀಯ ನ್ಯಾಯಾಂಗ ಆಯೋಗ ನೇಮಿಸುವುದು ಇತ್ಯಾದಿ ಪ್ರಾಥಮಿಕ ಭರವಸೆಗಳನ್ನು ಈಡೇರಿಸಲು ಸಮಯವೇ ಸಿಗಲಿಲ್ಲವೆಂದು ಸಿಪಿಐ(ಎಂ) ಪ್ರಣಾಳಿಕೆ ಮತದಾರರಿಗೆ ನೆನಪಿಸಿದೆ.



ಜನಗಳು ಒಂದೋ ಬಿಜೆಪಿ ನೇತೃತ್ವದ ಕೂಟವನ್ನು ಆರಿಸಬೇಕು, ಇಲ್ಲವೇ ಒಂದು ಕಾಂಗ್ರೆಸ್ ಪರ್ಯಾಯವನ್ನು ಆರಿಸಬೇಕಾಗುತ್ತದೆ ಎಂಬ ವಾದವನ್ನು ತಿರಸ್ಕರಿಸಿರುವ ಸಿಪಿಐ(ಎಂ) ಚುನಾವಣಾ ಪ್ರಣಾಳಿಕೆ ಮುಂಬರುವ ಚುನಾವಣೆಗಳಲ್ಲಿ ಎಡ ಶಕ್ತಿಗಳನ್ನು ಬಲಪಡಿಸಬೇಕು, ಇದಕ್ಕಾಗಿ ಹೊಸ ಲೋಕಸಭೆಯಲ್ಲಿ ಈ ಶಕ್ತಿಗಳ ಸಂಖ್ಯಾಬಲವನ್ನು ಹೆಚ್ಚಿಸಬೇಕು ಎಂದು ಒತ್ತಿ ಹೇಳಿದೆ.



ಚುನಾವಣೆ - 99



ಐಕ್ಯರಂಗ

ರಾಜ್ಯದಲ್ಲಿ ಸಿಪಿಐ(ಎಂ) ಸ್ಪರ್ಧೆ:

ಒಂದು ಲೋಕಸಭಾ ಹಾಗೂ 10 ವಿಧಾನಸಭಾ ಸ್ಥಾನಗಳಲ್ಲಿ

ಜುಲೈ 30 ಹಾಗೂ 31 ರಂದು ಬೆಂಗಳೂರಿನಲ್ಲಿ ಸೇರಿದ್ದ ಸಿಪಿಐ(ಎಂ) ರಾಜ್ಯ ಸಮಿತಿ ಮುಂಬರುವ ಚುನಾವಣೆಗಳಲ್ಲಿ ಲೋಕಸಭೆ ಹಾಗೂ 10 ವಿಧಾನಸಭಾ ಕ್ಷೇತ್ರಗಳಲ್ಲಿ ಸ್ಪರ್ಧಿಸಲು ನಿರ್ಧರಿಸಿತು.

ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದಿಂದ ವಿದ್ಯಾರ್ಥಿ ಮುಖಂಡರಾಗಿ ಸಾರ್ವಜನಿಕ ಜೀವನ ಆರಂಭಿಸಿ ಈಗ ಕೋಲಾರ ಜಿಲ್ಲೆಯಲ್ಲಿ ರೈತರ ಸಂಘಟನೆಯಲ್ಲಿ ತೊಡಗಿರುವ **ಜಿ.ಸಿ.ಬಯ್ಯಾರೆಡ್ಡಿ**ಯವರು ಸಿಪಿಐ(ಎಂ) ಅಭ್ಯರ್ಥಿಯಾಗಿದ್ದಾರೆ.

ವಿಧಾನಸಭಾ ಕ್ಷೇತ್ರಗಳಲ್ಲಿ ಕಳೆದ ಬಾರಿ ಗೆದ್ದಿದ್ದ ಬಾಗೇಪಲ್ಲಿಯಿಂದ **ಜಿ.ವಿ.ಶ್ರೀರಾಮರೆಡ್ಡಿ** ಮತ್ತೆ ಸ್ಪರ್ಧಿಸುತ್ತಿದ್ದಾರೆ. ಕಮ್ಯುನಿಸ್ಟ್ ಆಂದೋಲನದ ಇತಿಹಾಸವಿರುವ ಈ ಜಿಲ್ಲೆಯಿಂದ ಇನ್ನೂ ಮೂರು ಸ್ಥಾನಗಳಲ್ಲಿ ಸಿಪಿಐ(ಎಂ) ಸ್ಪರ್ಧಿಸುತ್ತಿದೆ. **ಕೆ.ಜಿ.ಎಫ್.** ನಿಂದ ಈ ಹಿಂದೆ ಒಮ್ಮೆ ಗೆದ್ದಿದ್ದ ಕಾರ್ಮಿಕ ಮುಖಂಡ **ಟಿ.ಎಸ್.ಮಣಿ**ಯವರು ಈ ಬಾರಿ ಮತ್ತೆ ಕಣಕ್ಕಿಳಿದಿದ್ದಾರೆ. ಇನ್ನಿಬ್ಬರು ರೈತ ಮುಖಂಡರು **ಚಿಂತಾಮಣಿಯಿಂದ ಜಿ.ವಿ.ಅಶ್ವತ್ಥ ನಾರಾಯಣ ರೆಡ್ಡಿ, ಶಿಡ್ಲಘಟ್ಟದಿಂದ ಕೆ.ಎಂ.ವೆಂಕಟೇಶ್** ಸಿಪಿಐ(ಎಂ) ಅಭ್ಯರ್ಥಿಗಳಾಗಿದ್ದಾರೆ.

ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಬರುವ ಬೆಂಗಳೂರು ಗ್ರಾಮಾಂತರ ಜಿಲ್ಲೆಯ **ದೊಡ್ಡಬಳ್ಳಾಪುರದಿಂದ ಚಂದ್ರತೇಜಸ್ವಿ**ಯವರನ್ನು ಚುನಾವಣಾ ಕಣಕ್ಕಿಳಿಸಲು ನಿರ್ಧರಿಸಲಾಗಿದೆ.

ಬೆಂಗಳೂರಿನ **ವರ್ತೂರು** ಹಿಂದೆ ಹಿರಿಯ ಕಾರ್ಮಿಕ ಮುಖಂಡ ಎಸ್.ಸೂರ್ಯ ನಾರಾಯಣ ರಾವ್‌ರನ್ನು ಆರಿಸಿ ಕಳಿಸಿದ ಕ್ಷೇತ್ರ. ಈ ಬಾರಿ ಇಲ್ಲಿಂದ ಈ ಪ್ರದೇಶದಲ್ಲಿ ಕಾರ್ಮಿಕರ ಸಂಘಟನೆಯಲ್ಲಿ ತೊಡಗಿರುವ ಪ್ರಮುಖರಾದ **ಹೆಚ್.ಎನ್. ಗೋಪಾಲಗೌಡ** ಅಭ್ಯರ್ಥಿಯಾಗಿರುತ್ತಾರೆ.

ಬಳ್ಳಾರಿ ಜಿಲ್ಲೆಯ **ಹೊಸಪೇಟೆ**ಯಿಂದ ಸಿಪಿಐ(ಎಂ) ರಾಜ್ಯ ಸಮಿತಿ ಸದಸ್ಯ ಹಾಗೂ ಜಿಲ್ಲಾ ಕಾರ್ಯದರ್ಶಿ ಮತ್ತು ಕಾರ್ಮಿಕ ಮುಖಂಡರಾಗಿರುವ **ಎಸ್.ಪ್ರಸನ್ನ ಕುಮಾರ್**ರನ್ನು, ರಾಯಚೂರು ಜಿಲ್ಲೆಯ **ದೇವದುರ್ಗ** ಮೀಸಲು ಕ್ಷೇತ್ರದಿಂದ ಕೃಷಿಕೂಲಿಕಾರರ ಸಂಘಟನೆಗೆ ಶ್ರಮಿಸುತ್ತಿರುವ ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘದ **ಚಂದ್ರಪ್ಪ ಹೊಸ್ಕೇರಾ**ರವರನ್ನು ಅಭ್ಯರ್ಥಿಯಾಗಿ ನಿಲ್ಲಿಸಲು ಸಿಪಿಐ(ಎಂ) ರಾಜ್ಯ ಸಮಿತಿ ನಿರ್ಧರಿಸಿದೆ.

ಈ ಹಿಂದೆ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿಯಾಗಿದ್ದು ಹಾಗೂ ರೈತ ಮುಖಂಡರಾಗಿದ್ದು ನಮ್ಮನ್ನಗಲಿರುವ ಪಿ.ರಾಮಚಂದ್ರರಾವ್ ರವರನ್ನು ಆರಿಸಿದ್ದ ದ.ಕ.ಜಿಲ್ಲೆಯ **ಉಳ್ಳಾಲ** ಕ್ಷೇತ್ರದಲ್ಲಿ ಈ ಬಾರಿ ಜಿಲ್ಲೆಯಲ್ಲಿ ದೀರ್ಘಕಾಲದಿಂದ ಕಾರ್ಮಿಕ ಸಂಘಟನೆಯಲ್ಲಿ ದುಡಿಯುತ್ತಿರುವ, ವಿಮಾ ನೌಕರರ ಸಂಘಟನೆಯ ರಾಜ್ಯ ಮುಖಂಡ ರಾಗಿದ್ದ **ಬಿ.ಮಾಧವ** ಸ್ಪರ್ಧಿಸುತ್ತಾರೆ.

ಗುಲ್ಬರ್ಗ ಜಿಲ್ಲೆಯ **ಕಮಲಾಪುರ** ಕ್ಷೇತ್ರದಿಂದ ಕರ್ನಾಟಕ ಪ್ರಾಂತ ರೈತ ಸಂಘದ ಅಧ್ಯಕ್ಷ ಹಾಗೂ ರಾಜ್ಯ ಪಂಚಾಯತ್‌ನೌಕರರ ಮುಖಂಡ ಮಾರುತಿ ಮಾನ್ಪಡೆ ಸ್ಪರ್ಧಿಸುತ್ತಾರೆ.

ಈ ಎಲ್ಲಾ ಸಿಪಿಐ(ಎಂ) ಅಭ್ಯರ್ಥಿಗಳಿಗೆ ಸಂಪೂರ್ಣ ಬೆಂಬಲ ನೀಡಿ ರಾಜ್ಯದಲ್ಲಿ ಎಡಶಕ್ತಿಗಳ ಬಲ ಹೆಚ್ಚಿಸಬೇಕು ಎಂದು ಸಿಪಿಐ(ಎಂ) ರಾಜ್ಯ ಸಮಿತಿ ಎಲ್ಲಾ ಜಾತ್ಯಾತೀತ, ಪ್ರಜಾಸತ್ತಾತ್ಮಕ ಶಕ್ತಿಗಳನ್ನು ವಿನಂತಿಸಿದೆ.



'ರೈತ-ವಿರೋಧಿ ಬಿಜೆಪಿ ಸರಕಾರಕ್ಕೆ ಮತ್ತೆ ಅಧಿಕಾರ ಸಿಗಬಾರದು'

- ಮಾಜಿ ಪ್ರಧಾನಿ ದೇವೇಗೌಡ

'ರೈತವಿರೋಧಿ ನಿಲುವು ತಳೆದಿರುವ ಬಿಜೆಪಿ ಸರ್ಕಾರ ಪುನಃ ಅಧಿಕಾರಕ್ಕೆ ಬಾರದಂತೆ ತಡೆಯಬೇಕು' ಇದು ಮಾಜಿ ಪ್ರಧಾನಿ ಹಾಗೂ ಜನತಾದಳ(ಜಾತ್ಯಾತೀತ) ದ ಅಧ್ಯಕ್ಷ ದೇವೇಗೌಡರು ರೈತರಿಗೆ ನೀಡಿದ ಕರೆ.

ಚುನಾವಣಾ ಆಯೋಗ ತಮ್ಮ ಪಕ್ಷಕ್ಕೆ ನೀಡಿದ 'ರೈತ ನಡೆಸುವ ಟ್ರಾಕ್ಟರ್' ಚಿಹ್ನೆಯನ್ನು ದೇವೇಗೌಡರು ಆಗಸ್ಟ್ 10 ರಂದು ಸ್ವತಃ ಪಕ್ಷದ ಕಚೇರಿಯವರೆಗೆ ಚಾಲನೆ ಮಾಡಿ ಉದ್ಘಾಟಿಸಿದರು. ಅಲ್ಲಿ ಸೇರಿದ್ದವರನ್ನು ಉದ್ದೇಶಿಸಿ ಮಾತನಾಡುತ್ತಾ 'ವ್ಯಾಪಾರಿಗಳು, ಉದ್ಯಮಿಗಳು ಹಾಗೂ ಬಂಡವಾಳಶಾಹಿಗಳ ಪರ ಇರುವ ಬಿಜೆಪಿ ಸರಕಾರ ಪುನಃ ಅಧಿಕಾರಕ್ಕೆ ಬಂದರೆ ಅದನ್ನು ತೊಲಗಿಸುವ ತನಕ ವಿರಮಿಸುವುದಿಲ್ಲ" ಎಂದು ಅವರು ಹೇಳಿದರು.

ಬಿಜೆಪಿ ಸರಕಾರ ಮತ್ತೆ ಅಧಿಕಾರಕ್ಕೆ ಬಂದರೆ ನಮ್ಮ ದೇಶದ ರೈತರು ಭಿಕ್ಷಾ ಪಾತ್ರೆ ಹಿಡಿಯ ಬೇಕಾಗುತ್ತದೆ. ಈಗ ಗೋಧಿಯ ಬೆಲೆ ಇಳಿಸಿ ಓಟು ಗಳಿಸುವ ತಂತ್ರವನ್ನು ಕೇಂದ್ರ ಸರ್ಕಾರ ಅನುಸರಿಸಿದೆ. ಭಾರತೀಯ ಆಹಾರ ನಿಗಮದಲ್ಲಿ ಇರುವ ಎಲ್ಲಾ ಗೋಧಿಯನ್ನು ಮಾರುಕಟ್ಟೆಗೆ ಬಿಡುಗಡೆ ಮಾಡುವಂತೆ ಸರಕಾರ ಸೂಚಿಸಿದೆ. ಇದರಿಂದ ಬೆಳೆಗಾರ ಸಂಕಷ್ಟಕ್ಕೊಳಗಾಗುತ್ತಾನೆ. ಹಣದುಬ್ಬರ ತಡೆದಿದ್ದೇವೆ ಎನ್ನುವ ವಾಜಪೇಯಿ ಯಾರದೋ ಹೊಟ್ಟೆ ಹೊಡೆದು ಬೆಲೆ ಇಳಿಸಿದ್ದಾರೆ. ರೇಶ್ಮೆ, ಸಕ್ಕರೆ ಆಮದು ನೀತಿಯಿಂದಾಗಿ ರಾಜ್ಯದ ರೈತರು ಕಂಗಾಲಾಗಿದ್ದಾರೆ. ಇವರಿಗೆ ದೇಶದ ರೈತರ ಅಭಿವೃದ್ಧಿ ಬೇಕಾಗಿಲ್ಲ ಎಂದು ಅವರು ಆಪಾದಿಸಿದರು.

ದೇಶದಲ್ಲಿ ಮೊದಲ ಬಾರಿಗೆ 800 ಪದಾರ್ಥಗಳನ್ನು, ಕೃಷಿ ವಲಯದಲ್ಲಿನ 106 ವಸ್ತುಗಳನ್ನು ತೆರಿಗೆಯಿಲ್ಲದೇ ಆಮದು ಮಾಡುವ ನೀತಿಯನ್ನು ಈ ಸರಕಾರ ಜಾರಿಗೆ ತಂದಿದೆ. ಇವೆಲ್ಲ ರೈತ-ವಿರೋಧಿಯಲ್ಲದಿದ್ದರೆ ಇನ್ನೇನು ಎಂದು ಅವರು ಪ್ರಶ್ನಿಸಿದರು.

ರಾಷ್ಟ್ರೀಕರಣ ನೀತಿಯಡಿ ಬ್ಯಾಂಕುಗಳು ಕೃಷಿಗೆ 15% ಸಾಲ ನೀಡಬೇಕಿತ್ತು. ಅದನ್ನು ಈ ಸರಕಾರ 10% ಕ್ಕೆ ಇಳಿಸಿ ಉದ್ದಿಮೆಗಳನ್ನು ತೃಪ್ತಿಪಡಿಸುವ ನೀತಿ ಅನುಸರಿಸಿದೆ.

ರೈತರು ಬೆಳೆಗಳಿಗೆ ಸರಿಯಾದ ಬೆಲೆ ಸಿಗದೆ ಆತ್ಮಹತ್ಯೆ ಮಾಡಿಕೊಂಡ ಪ್ರಕರಣಗಳನ್ನು ಪ್ರಸ್ತಾಪಿಸಿ ಮಾತನಾಡುತ್ತಾ ದೇವೇಗೌಡರು ಕೇಂದ್ರ ಸರ್ಕಾರದ ರೈತ-ವಿರೋಧಿ ಆರ್ಥಿಕ ನೀತಿಗಳು, ಆಮದು-ರಫ್ತು ನೀತಿಗಳಿಂದಾಗಿ ಇವು ಸಂಭವಿಸಿದೆ ಎಂದರು. ರೈತನಿಗೆ ಆರ್ಥಿಕ ಶಕ್ತಿ ನೀಡುವಂತಹ ನೀತಿಗಳು ಜಾರಿಗೆಬರಬೇಕು ಎಂದು ಅವರು ಹೇಳಿದರು.

ಕಾಂಗ್ರೆಸ್ ಕೂಡಾ ರೈತರ ಪರವಾಗಿ ಇದುವರೆಗೆ ಏನನ್ನೂ ಮಾಡಲಿಲ್ಲ ಎಂಬುದರ ಅರಿವೂ ರೈತ ಸಮುದಾಯಕ್ಕೆ ಇರಲಿ ಎಂದ ದೇವೇಗೌಡರು ಕಾಂಗ್ರೆಸ್‌ನವರು ದಳ ಒಡೆದಿದೆಯೆಂದು ಖುಷಿ ಪಟ್ಟುಕೊಂಡು ಅಧಿಕಾರಕ್ಕೆ ಬರುವ ಕನಸು ಕಾಣುವುದು ಬೇಡ ಎಂದರು.

ನಂತರ ಮಾತನಾಡಿದ ಪಕ್ಷದ ರಾಜ್ಯ ಅಧ್ಯಕ್ಷ ಸಿದ್ಧರಾಮಯ್ಯ ತಮ್ಮ ಪಕ್ಷಕ್ಕೆ ದೊರೆತಿರುವ ಚಿಹ್ನೆ ರೈತರ ಪ್ರಗತಿಯ ಸಂಕೇತ ಎಂದು ಹೇಳಿದರು. ಅಲ್ಲದೆ ದೇಶದ ಜಾತ್ಯಾತೀತ ಸ್ವರೂಪ ಮತ್ತು ಏಕತೆ ಉಳಿಸುವ ಹಾಗೂ ಮತೀಯ ಶಕ್ತಿಗಳ ವಿರುದ್ಧ ಹೋರಾಡುವ ಪಕ್ಷಕ್ಕೆ ಜಾತ್ಯಾತೀತ ಎಂಬ ತಕ್ಕ ಹೆಸರು ದೊರೆತಿದೆ ಎಂದರು.

ಟ್ರಾಕ್ಟರ್ ಚಿಹ್ನೆಯ ಉದ್ಘಾಟನೆಯ ಈ ಸುದ್ದಿಯನ್ನು ಇಂಗ್ಲೀಷ್ ಪತ್ರಿಕೆಗಳು ಅದನ್ನು ಪ್ರಕಟಿಸಿದ ರೀತಿ ಈ ಪತ್ರಿಕೆಗಳ ಪಕ್ಷಪಾತವನ್ನು ಎತ್ತಿತೋರಿತು. 'ಗೌಡರು ಟ್ರಾಕ್ಟರ್ ಚಾಲನೆ ಮಾಡಿದರು, ಸಂಚಾರ ನಿಯಮ ಉಲ್ಲಂಘಿಸಿದರು' ಎಂದು ಟೈಂಸ್ ಆಫ್ ಇಂಡಿಯಾ ಬೊಬ್ಬಿಟ್ಟಿದೆ. 'ಸಾಮಾನ್ಯ' ರೈತನ ಟ್ರಾಕ್ಟರ್ ಸವಾರಿಯಿಂದ ನಗರದಲ್ಲಿ ಸಂಚಾರಕ್ಕೆ ಅಡ್ಡಿ' ಎಂದು ಇಂಡಿಯನ್ ಎಕ್ಸ್‌ಪ್ರೆಸ್ ಗೇಲಿಯಾಡಿತು. ಈ ಎರಡರಲ್ಲೂ ದೇವೇಗೌಡರು ಬಿಜೆಪಿ ಸರಕಾರದ ರೈತ-ವಿರೋಧಿ ನೀತಿಗಳ ಬಗ್ಗೆ ತೀವ್ರ ಟೀಕೆ ಮಾಡಿದ್ದರ ಪ್ರಸ್ತಾಪವೂ ಇರಲಿಲ್ಲ. ಅವರ ಪಕ್ಷಪಾತ ಯಾರ ಪರವಾಗಿ ಎಂದು ಇದರಿಂದ ಸ್ಪಷ್ಟವಾಗುತ್ತದಲ್ಲವೇ?

ಬಿಜೆಪಿಗೆ ತಿರುಗುಬಾಣವಾದ 'ಪರಕೀಯತ್ವ'

ಸೋನಿಯಾ ಪರಕೀಯಳು ಎಂಬುದು ಬಿಜೆಪಿಯ ಈ ಬಾರಿಯ ಚುನಾವಣಾ ಪ್ರಚಾರದ ಒಂದು ಮುಖ್ಯ ಅಂಶ. ಆದರೆ ಈ ಪರಕೀಯತ್ವ ಅದಕ್ಕೇ ತಿರುಗುಬಾಣವಾಗುತ್ತಿರುವಂತಿದೆ.

ಮಧ್ಯಪ್ರದೇಶದ ಮಾಜಿ ಮುಖ್ಯಮಂತ್ರಿ ಸುಂದರ್‌ಲಾಲ್ ಪಟ್ವಾಗೆ ರಾಜಧಾನಿ ಭೋಪಾಲ್‌ನಿಂದ ಲೋಕಸಭೆಗೆ ಸ್ಪರ್ಧಿಸುವ ಆಸೆ. ಕೇಂದ್ರ ಮುಖಂಡರದ್ದು ಅಸ್ತು. ಆದರೆ ಇದಕ್ಕೆ ಸ್ಥಳೀಯ ಬಿಜೆಪಿಯಿಂದ ಬಲವಾದ ಪ್ರತಿಭಟನೆ. ಕಾರಣ - ಪಟ್ವಾ ಭೂಪಾಲಕ್ಕೆ ಪರಕೀಯರು. ತಾನು 40 ವರ್ಷಗಳಿಂದ ಭೂಪಾಲದಲ್ಲಿದ್ದೇನೆ ಎಂಬ ಅವರ ತರ್ಕ ನಡೆಯಲಿಲ್ಲ. ಈಗ ಅಲ್ಲಿಂದ ಇನ್ನೊಬ್ಬ ಮಾಜಿ ಮುಖ್ಯಮಂತ್ರಿ ಕೈಲಾಶ್ ಜೋಶಿ ಅಭ್ಯರ್ಥಿ.

ಇನ್ನೊಬ್ಬ ಬಿಜೆಪಿ ಮುಖಂಡ ಆಂಧ್ರಪ್ರದೇಶದ ಬಂಗಾರು ಲಕ್ಷ್ಮಣ ಈ ಬಾರಿ ರಾಜಸ್ತಾನದಿಂದ ಲೋಕಸಭೆಗೆ ಸ್ಪರ್ಧಿಸಬೇಕೆಂದಿದ್ದರಂತೆ. ಈಗ ಇವರು ಗುಜರಾತದಿಂದ ರಾಜ್ಯಸಭಾ ಸದಸ್ಯರು! ಆಂಧ್ರ ಬಿಜೆಪಿ ಮುಖಂಡ ವೆಂಕಯ್ಯನಾಯ್ಡು ಕರ್ನಾಟಕದಿಂದ ರಾಜ್ಯಸಭೆಗೆ ಆರಿಸಿಹೋದಂತೆ! ತಮ್ಮ ಸ್ವಂತ ರಾಜ್ಯಗಳಲ್ಲೇ ಸಲ್ಲದವರು ರಾಜಕೀಯ ಸ್ಥಾನಗಳಿಗಾಗಿಯೇ 'ವಲಸೆ' ಹೋಗುವಾಗ ಪರಕೀಯತ್ವದ ಅಡ್ಡಿಯಿಲ್ಲ!

ಇದೇ ಬಿಜೆಪಿಯ ದಿಲ್ಲಿ ಮುಖಂಡರು ಕಾಂಗ್ರೆಸ್ಸಿನ ಮನಮೋಹನ್‌ಸಿಂಗ್ ದಿಲ್ಲಿಯಿಂದ ಸ್ಪರ್ಧಿಸುವುದಕ್ಕೆ 'ಪರಕೀಯ' ಎಂಬ ಬೊಬ್ಬೆ ಎಬ್ಬಿಸಲು ಹೇಸುತ್ತಿಲ್ಲ! ಬೂರ್ಜ್ವಾ ರಾಜಕಾರಣಿಗಳ ಪರಂಪರೆಗೆ ಅನುಗುಣವಾಗಿ ಈ ಸಿಖ್ಖ್ ಅಸ್ಸಾಂನಿಂದ ಈಗ ರಾಜ್ಯಸಭಾ ಸದಸ್ಯ ಎಂಬುದೂ ನೆನಪಿರಲಿ.

★★★

ರಾಜಸ್ತಾನದಲ್ಲಿ ಬಿಜೆಪಿ ಟಿಕೆಟ್‌ರಹಿತರ ಗಲಾಟೆ

ರಾಜಸ್ತಾನದ ರಾಜ್ಯ ಬಿಜೆಪಿ ಉಪಾಧ್ಯಕ್ಷ ಕಿಶೋರಿ ಲಾಲ್ ಮೀನಾ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರಂತೆ. ಅವರ ಯುವ ಮೋರ್ಚಾದ ರಾಜ್ಯ ಅಧ್ಯಕ್ಷ ಸತೀಶ್ ಪೂಣಿಯಾ ಕೂಡಾ ರಾಜೀನಾಮೆ ನೀಡಿದ್ದಾರಂತೆ. ಕಾರಣ ಟಿಕೆಟ್ ನಿರಾಕರಣೆ.

★★★

ಸುಷ್ಮಾ ಸ್ವರಾಜ್, ಉಮಾಭಾರತಿ ಸ್ಪರ್ಧೆ ಇಲ್ಲ?

ಬಿಜೆಪಿಯ ಇಬ್ಬರು ಪ್ರಮುಖ ಮಹಿಳಾ ಮುಖಂಡರು ಈ ಬಾರಿ ಲೋಕಸಭೆಗೆ ಸ್ಪರ್ಧಿಸುತ್ತಿಲ್ಲವೇ? ಕೇಂದ್ರ ಪ್ರಸಾರ ಮಂತ್ರಿಯಾಗಿದ್ದು ಅಲ್ಲಿಂದ ಬಿಡಿಸಿ ದಿಲ್ಲಿಯ ಮುಖ್ಯಮಂತ್ರಿಯಾಗಿ ಕಳಿಸಲ್ಪಟ್ಟ ಸುಷ್ಮಾ ಸ್ವರಾಜ್ ಅಲ್ಲಿ ಬಿಜೆಪಿ ಸೋತಾಗ ದಿಕ್ಕಿಲ್ಲದಂತಾಗಿದ್ದರು. ಅವರು ಈ ಬಾರಿ ಸ್ಪರ್ಧಿಸುತ್ತಲೇ ಇಲ್ಲ. 12ನೇ ಲೋಕಸಭೆ ಮುಕ್ತಾಯಗೊಂಡಾಗಲೇ ತಾನು ಈ ಬಗ್ಗೆ ನಿರ್ಧಾರಕ್ಕೆ ಬಂದಿದ್ದೆ ಎಂದು ಹೇಳುತ್ತಿದ್ದಾರೆ.

ಇನ್ನೊಬ್ಬ ಸಚಿವೆ ಉಮಾಭಾರತಿ ಮಧ್ಯಪ್ರದೇಶದ ಖಜುರಾಹೋದಿಂದ ಆಯ್ಕೆಯಾದವರು. ಈ ಬಾರಿ ತನ್ನ ಬೆನ್ನು ನೋವಿನಿಂದಾಗಿ ಹೆಚ್ಚು ಓಡಾಟದ ಅವಶ್ಯಕತೆಯಿಲ್ಲದ ಒಂದು ನಗರ ಕ್ಷೇತ್ರ ತನಗೆ ಬೇಕೆಂದು

ಇಣುಕು ನೋಟ

ಕೇಳಿದ್ದರಂತೆ. ಅದನ್ನು ನಿರಾಕರಿಸಿದ್ದರಿಂದ ಈ ಸನ್ಯಾಸಿನಿ ಸ್ಪರ್ಧಿಸುತ್ತಿಲ್ಲ ಎಂಬ ಸುದ್ದಿಯಿದೆ.

★★★

ಕರುಣಾಕರನ್‌ಗೆ ಬಿಜೆಪಿ ಪರೋಕ್ಷ ಬೆಂಬಲ

ಕೇರಳದ ಮುಕುಂದಪುರಂನಲ್ಲಿ ಕಾಂಗ್ರೆಸ್‌ನ ಮುಖಂಡ ಕರುಣಾಕರನ್ ಎದುರು ಬಿಜೆಪಿ ತನ್ನ ಅಭ್ಯರ್ಥಿಯನ್ನು ನಿಲ್ಲಿಸುತ್ತಿಲ್ಲ. ಇಲ್ಲಿ ಸಿಪಿಐ(ಎಂ) ನಿಂದ ಇ.ಎಂ.ಎಸ್. ಪುತ್ರ ಇ.ಎಂ.ಶ್ರೀಧರನ್ ಸ್ಪರ್ಧಿಸುತ್ತಿದ್ದಾರೆ.

ಕೇರಳದಲ್ಲಿ ಬಿಜೆಪಿ 11 ಸ್ಥಾನಗಳಲ್ಲಿ ಸ್ಪರ್ಧಿಸುತ್ತಿದೆ. ಅದರ ನೇತೃತ್ವದ ರಂಗದಲ್ಲಿ ಬಹಳ ಮಂದಿ ಹೆಸರೇ ಕೇಳದಿರುವ ಭಾರತೀಯ ಲೇಬರ್ ಪಾರ್ಟಿ, ಸೋಶಲಿಸ್ಟ್ ರಿಪಬ್ಲಿಕನ್ ಪಾರ್ಟಿ ಎಂಬ ಪಕ್ಷಗಳಿವೆ. ಜತೆಗೆ ಕೇರಳದಲ್ಲಿ ನಾಮಮಾತ್ರವಾದ ಲೋಕಶಕ್ತಿ, ಸಮತಾಪಾರ್ಟಿ, ಜನತಾದಳ(ಯು) ಗಳು ಇವೆ. ಇವು ತಲಾ ಎರಡು, ಉಳಿದವು ತಲಾ ಒಂದು ಸ್ಥಾನಗಳಲ್ಲಿ ಸ್ಪರ್ಧಿಸುತ್ತಿವೆ.

ಪಿ.ಡಿ.ಪಿ. ಎಂಬ ಪಕ್ಷದ ಹೆಸರು ಕೇಳಿದ್ದೀರಾ? ತೀವ್ರಗಾಮಿ ಮುಸ್ಲಿಮರ ಒಂದು ಪಕ್ಷ. ಇದರ ಅಧ್ಯಕ್ಷ, ಎಲ್.ಕೆ.ಅಡ್ವಾಣಿಯವರ ಮೇಲೆ ಗುರಿಯಿಡಲಾಗಿತ್ತು ಎಂದು ಬಿಜೆಪಿ ಹೇಳುತ್ತಿರುವ ಕೊಯಮತ್ತೂರು ಸ್ಫೋಟಕಾಂಡದಲ್ಲಿ ಜೈಲಿನಲ್ಲಿದ್ದಾನೆ. ಆದರೆ ಕೇರಳದ ಬಿಜೆಪಿ ಮುಖಂಡರು ಈ ಪಕ್ಷದೊಂದಿಗೂ ಗುಪ್ತ ಮಾತುಕತೆ ನಡೆಸಿದ್ದಾರಂತೆ. ಈ ಬಗ್ಗೆ ಅಡ್ವಾಣಿ ಗುರ್‌ರೆಂದಾಗ ರಾಜ್ಯಸಭೆಯಲ್ಲಿ ಬಿಜೆಪಿಯ ಉಪಮುಖ್ಯಸ್ಥರಾದ ಕೇರಳದ ಓ.ರಾಜಗೋಪಾಲ್ ಚುನಾವಣೆಗಳು ಎಲ್ಲಾ ತರದ ಜನಗಳನ್ನು ಒಟ್ಟಿಗೆ ತರುತ್ತವೆ ಎಂದು ತನ್ನ ಸಹಯೋಗಿ ರಾಮನ್ ಪಿಳ್ಳೆಯವರ ಈ ಗುಪ್ತ ಮಾತುಕತೆಗಳನ್ನು ಸಮರ್ಥಿಸಿಕೊಂಡರು. ಹೌದು, ಎಲ್ಲಾ ಧರ್ಮದ ಕೋಮುವಾದಿಗಳೆಲ್ಲಾ ಒಂದಾಗಿ ಎಂದು ಹೇಳುವುದರಲ್ಲಿ ತಪ್ಪೇನಿದೆ?

★★★

ಆಂಧ್ರಪ್ರದೇಶದಲ್ಲಿ ಟಿ.ಡಿ.ಪಿ.-ಬಿಜೆಪಿ ಕಿತ್ತಾಟ ಅಂತ್ಯ?

ಹೀಗೆಂದು ಬಿಜೆಪಿ-ಪರ ಮಾಧ್ಯಮಗಳು ಈಗ ನಿಟ್ಟುಸಿರು ಬಿಡುತ್ತಿವೆ. ಏಕೆಂದರೆ ಈ ವಾರದ ಆರಂಭದಲ್ಲಿ ಚಂದ್ರಬಾಬು ನಾಯ್ಡು ಮತ್ತು ವೆಂಕಯ್ಯ ನಾಯ್ಡು 'ನಮ್ಮ ದಾರಿ ನಮಗೆ' ಎಂದು ಖಡಾಖಂಡಿತವಾಗಿ ಗೊಣಗಿದ್ದರು. ಈಗ 'ಒಪ್ಪಂದ' ಆಗಿದೆಯಂತೆ. ಈ ಒಪ್ಪಂದದಿಂದ ತೆಲುಗುದೇಶಂನ ನಾಯ್ಡು ಕೈ ಮೇಲಾಗಿದೆ, ಬಿಜೆಪಿ ನಾಯ್ಡು ತಲೆಕೆಳಗಾಗಿದೆಯೆಂದು ಕೆಲವರ ಅಂಬೋಣ.

ಚಂದ್ರಬಾಬು ನಾಯ್ಡು ಮುಖಾಮುಖಿ ಮಾತುಕತೆ ನಡೆಸದೆ ಫೋನ್ ಫ್ಯಾಕ್ಸ್‌ಗಳ ಮೂಲಕ ಈ ಒಪ್ಪಂದಕ್ಕೆ ಬಂದರಂತೆ. ಆದರೆ ಇನ್ನೂ ಬಿಜೆಪಿಯ ಎನ್.ಡಿ.ಎ.ಗೆ ಟಿ.ಡಿ.ಪಿ. ವಿಧ್ಯುಕ್ತವಾಗಿ ಸೇರಲು ಹಿಂಜರಿಯುವಂತೆ ಕಾಣುತ್ತದೆ. ಕಾರಣ ಬಹುಶಃ ಆಂಧ್ರದ ಮತದಾರರ ಭಯ?

★★★



ಪಶ್ಚಿಮ ಬಂಗಾಳ: ಲೋಕಸಭಾ ಚುನಾವಣಾ ಚಟುವಟಿಕೆ ಆರಂಭ

ಆಗಸ್ಟ್ 1 ರಂದು ಪಶ್ಚಿಮ ಬಂಗಾಳದ ಎಡರಂಗ ಮುಂಬರುವ 13ನೇ ಲೋಕಸಭಾದ ಅಭ್ಯರ್ಥಿಗಳ ಪಟ್ಟಿಯನ್ನು ಬಿಡುಗಡೆ ಮಾಡಿತು. ಸಿಪಿಐ(ಎಂ) ರಾಜ್ಯಸಮಿತಿ ಕಚೇರಿ 'ಮುಝಫರ್ ಭವನ'ದಲ್ಲಿ ಎಡರಂಗದ ಅಧ್ಯಕ್ಷ ಶೈಲೇನ್ ದಾಸ್‌ಗುಪ್ತಾ ಅಭ್ಯರ್ಥಿಗಳ ಪಟ್ಟಿಯನ್ನು ಬಿಡುಗಡೆ ಮಾಡುತ್ತಾ ಇದು ಮಧ್ಯಂತರ ಚುನಾವಣೆಯಾದ್ದರಿಂದ ಎಡರಂಗ ಹೆಚ್ಚಿನ ಸ್ಥಾನಗಳಲ್ಲಿ ಹಿಂದಿನ ಅಭ್ಯರ್ಥಿಗಳನ್ನೇ ಆರಿಸಿದೆ, ಆದರೆ ಕೆಲವು ಸ್ಥಾನಗಳಿಗೆ ಹೊಸಬರನ್ನು ಸೂಚಿಸಿದೆ ಎಂದು ಹೇಳಿದರು. ಕಾಂಗ್ರೆಸ್(ಐ) ಮತ್ತು ಬಿಜೆಪಿ-ತೃಣಮೂಲ ಕಾಂಗ್ರೆಸ್ ಪಕ್ಷಗಳು ತಮ್ಮ ಅಭ್ಯರ್ಥಿಗಳ ಪಟ್ಟಿಗಳ ಮೇಲೆ ಇನ್ನೂ ಕಿತ್ತಾಡುತ್ತಿವೆ ಎಂಬುದನ್ನು ದೊಡ್ಡ ಇಂಗ್ಲೀಷ್ ಪತ್ರಿಕೆಗಳೂ ಈ ಹಿನ್ನೆಲೆಯಲ್ಲಿ ಖೇದದಿಂದ ಗಮನಿಸಿವೆ.

ಪಶ್ಚಿಮ ಬಂಗಾಳದ 42 ಲೋಕಸಭಾ ಸ್ಥಾನಗಳಲ್ಲಿ 32ರಲ್ಲಿ ಸಿಪಿಐ(ಎಂ) ಸ್ಪರ್ಧಿಸುತ್ತಿದೆ. ಆರ್.ಎಸ್.ಪಿ. 4 ಸ್ಥಾನಗಳಲ್ಲಿ ಹಾಗೂ ಸಿಪಿಐ ಮತ್ತು ಫಾರ್ವರ್ಡ್‌ಬ್ಲಾಕ್ ತಲಾ 3 ಸ್ಥಾನಗಳಲ್ಲಿ ಸ್ಪರ್ಧಿಸುತ್ತಿವೆ. ಕಳೆದ ಬಾರಿ ಗೆದ್ದ ಎರಡು ಸ್ಥಾನಗಳಲ್ಲಿ ಅಭ್ಯರ್ಥಿಗಳನ್ನು ಬದಲಿಸಲಾಗಿದೆ. ಡಾರ್ಜಿಲಿಂಗ್‌ನಲ್ಲಿ ಈ ಹಿಂದೆ ಎಂ.ಪಿ.ಯಾಗಿದ್ದ ಹಿರಿಯ ಸಿಪಿಐ(ಎಂ) ಮುಖಂಡ ಆನಂದ ಪಾಠಕ್‌ರವರ ಬದಲು ಸೂರಜ್ ಪಾಠಕ್ ಸ್ಪರ್ಧಿಸುತ್ತಾರೆ. ವಿದ್ಯಾರ್ಥಿ-ಕಾರ್ಯಕರ್ತನಾದ ಈತ ಆನಂದ ಪಾಠಕ್‌ರವರ ಪುತ್ರ. ಕೃಷ್ಣನಗರ ಕ್ಷೇತ್ರದಲ್ಲಿ ಕಳೆದ ಬಾರಿ ಗೆದ್ದ ಅಜೆಯ್ ಮುಖರ್ಜಿಯವರ ಬದಲು ಅಲ್ಲಿಯ ನಾಡಿಯಾ ಜಿಲ್ಲಾ ಕಾರ್ಯದರ್ಶಿ ರೇಣುಪಾದ ದಾಸ್ ಸ್ಪರ್ಧಿಸುತ್ತಾರೆ.


ಈ ಪಟ್ಟಿಯಲ್ಲಿನ ಇನ್ನೂ ಕೆಲವು ಬದಲಾವಣೆಗಳ ಬಗ್ಗೆ ಶೈಲೆನ್‌ದಾಸ್‌ಗುಪ್ತಾ ಪತ್ರಕರ್ತರಿಗೆ ತಿಳಿಸಿದರು. ಮಾಲ್ಡಾದಲ್ಲಿ ಜೀವನ್ ಮಿತ್ರಾರವರ ಬದಲು ಅಲ್ಲಿಯ ಜಿಲ್ಲಾ ಕಾರ್ಯದರ್ಶಿ ಶೈಲೆನ್ ಸರ್ಕಾರ್ ಅಭ್ಯರ್ಥಿಯಾಗಿರುತ್ತಾರೆ. ಜಾದವ್‌ಪುರದಲ್ಲಿ ಮಾಲಿನಿ ಭಟ್ಟಾಚಾರ್ಯರವರ ಬದಲು ಕಾಂತಿ ಗಂಗೂಲಿ ಹಾಗೂ ಡಂಡಂನಲ್ಲಿ ನಿರ್ಮಲ್ ಚಟರ್ಜಿಯವರ ಬದಲು ಪ್ರೊ.ಅನಿಲ್ ಭಟ್ಟಾಚಾರ್ಯ ಸ್ಪರ್ಧಿಸುತ್ತಾರೆ.

ಕಲ್ಕತ್ತಾ ಮಹಾನಗರದ ಎಲ್ಲಾ 3 ಸ್ಥಾನಗಳಲ್ಲಿ ಅಭ್ಯರ್ಥಿಗಳನ್ನು ಬದಲಿಸಲಾಗಿದೆ. ಯುವಜನ ಮುಖಂಡ ಹಾಗೂ ಈಗ ರಾಜ್ಯಸಭಾ ಸದಸ್ಯರಾಗಿರುವ ಮಹಮ್ಮದ್ ಸಲೀಂ ವಾಯುವ್ಯ ಕಲ್ಕತ್ತಾದಿಂದ, ರಾಜದೇವ್ ಗೋಷ್ವಾ ಈಶಾನ್ಯ ಕಲ್ಕತ್ತಾದಿಂದ ಹಾಗೂ ದಕ್ಷಿಣ ಕಲ್ಕತ್ತಾದಿಂದ ಪ್ರೊ. ಶುಭಂಕರ್ ಚಕ್ರವರ್ತಿ ಸಿಪಿಐ(ಎಂ) ಅಭ್ಯರ್ಥಿಗಳು.

ಬಾರಸಾತ್‌ನಲ್ಲಿ ಫಾರ್ವರ್ಡ್‌ಬ್ಲಾಕ್ ಚಿತ್ರಘೋಷ್ ಬದಲಿಗೆ ಸರಲ್ ದೇಬ್‌ರವರನ್ನು ನಿಲ್ಲಿಸಿದೆ. ಉಳಿದೆಲ್ಲಾ ಗೆದ್ದ ಸ್ಥಾನಗಳಲ್ಲಿ ಹಿಂದಿನ ಅಭ್ಯರ್ಥಿಗಳನ್ನೇ ನಿಲ್ಲಿಸಿದೆ. ಪತ್ರಕರ್ತರ ಒಂದು ಪ್ರಶ್ನೆಗೆ ಉತ್ತರಿಸುತ್ತಾ ಸೋಮನಾಥ್ ಚಟರ್ಜಿ ಎಂದಿನಂತೆ ಬೋಲ್‌ಪುರ್‌ನಿಂದ ಸ್ಪರ್ಧಿಸುತ್ತಾರೆ ಎಂದು ಶೈಲೆನ್ ದಾಸ್‌ಗುಪ್ತಾ ತಿಳಿಸಿದರು.

24 ಪರಗಣ ಜಿಲ್ಲೆಯಲ್ಲಿ ನಾಲ್ಕು ಲೋಕಸಭಾ ಸ್ಥಾನಗಳಿದ್ದು ಇವುಗಳಲ್ಲಿ ಒಂದನ್ನು (ಡಂಡಂ) ಕಳೆದ ಬಾರಿ ಬಿಜೆಪಿ ಅಭ್ಯರ್ಥಿ ಗೆದ್ದಿದ್ದರು. ಈ ಬಾರಿ ಈ

ಪುಟ 8ಕ್ಕೆ



ನೆನಪಿಡಿ, ಕಂಪನಿಗಳ ಕೈಯಲ್ಲಿರುವ ಮಾಧ್ಯಮ ಮತ್ತೆ ಸುಳ್ಳುಗಳ, ಅರೆ ಸತ್ಯಗಳ ಸರಮಾಲೆ ಪೋಣಿಸಲಿದೆ" — ಜ್ಯೋತಿಬಸು ಎಚ್ಚರಿಕೆ

ಹೊಸ ಲೋಕಸಭೆಯಲ್ಲಿ ಎಡರಂಗದ ಬಲ ಹೆಚ್ಚಿಸುವುದು ಜಾತ್ಯಾತೀತ-ಪ್ರಜಾಸತ್ತಾತ್ಮಕ ಶಕ್ತಿಗಳ ಸಂಖ್ಯಾಬಲ ಹಾಗೂ ರಾಜಕೀಯ ಒತ್ತನ್ನು ಅಧಿಕಗೊಳಿಸುವುದು ಈ ಎರಡು ಕೆಲಸಗಳನ್ನು ನಾವಿಂದು ಮಾಡಬೇಕಾಗಿದೆ ಎಂದು ಸಿಪಿಐ(ಎಂ) ಪೊಲಿಟ್ ಬ್ಯೂರೋ ಸದಸ್ಯ ಹಾಗೂ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಜ್ಯೋತಿಬಸು ಹೇಳಿದ್ದಾರೆ. ಅವರು 13ನೇ ಲೋಕಸಭಾ ಚುನಾವಣೆಗಳನ್ನು ಕುರಿತಂತೆ ಚರ್ಚಿಸಲು ಸೇರಿದ್ದ ಸಿಪಿಐ(ಎಂ)ನ ಪಶ್ಚಿಮ ಬಂಗಾಳ ರಾಜ್ಯ ಸಮಿತಿಯ ಸಭೆಯಲ್ಲಿ ಮಾತನಾಡುತ್ತಿದ್ದರು.

ಈಗಿನ ಕ್ಲಿಷ್ಟ ಹಾಗೂ ಸಂಧಿಗ್ಧ ರಾಜಕೀಯ ಪರಿಸ್ಥಿತಿಯಲ್ಲಿ ಸಿಪಿಐ(ಎಂ) ಹೊಸ ಲೋಕಸಭೆಯಲ್ಲಿ ಎಡರಂಗದ ಬಲವಾದ ಹಾಗೂ ಸಕ್ರಿಯವಾದ ಅಸ್ತಿತ್ವವನ್ನು ಇನ್ನಷ್ಟು ಬಲಿಷ್ಟಗೊಳಿಸುವಲ್ಲಿ ನೇತೃತ್ವ ವಹಿಸಬೇಕಾಗುತ್ತದೆ. 1996 ಹಾಗೂ ಮತ್ತೆ 1998 ರಲ್ಲಿ ಬಿಜೆಪಿಯೆಂಬ ಕೋಮುವಾದಿ ಸಂಘಟನೆಗೆ ಸಮಗ್ರ ಸೋಲು ಉಣ್ಣಿಸುವ ಹಾಗೂ ದಿಲ್ಲಿಯಲ್ಲಿ ಒಂದು ಜಾತ್ಯಾತೀತ- ಪ್ರಜಾಸತ್ತಾತ್ಮಕ ಪರ್ಯಾಯ ರಚಿಸುವಂತೆ ಮಾಡಲು ಸಾಧ್ಯವಾಗಿತ್ತು. ಈ ಜನಪರ ಪ್ರಯೋಗ ಕಾಂಗ್ರೆಸ್‌ನ ವಿಶ್ವಾಸಘಾತದಿಂದಾಗಿ ಕೊನೆಗೊಂಡು ಸಮಯಸಾಧಕರೆಲ್ಲಾ ಸೇರಿ ಬಿಜೆಪಿಯನ್ನು ಹೇಗೋ ಅಧಿಕಾರಕ್ಕೇರಿಸುವಂತಾಯಿತು. ಮೂರನೇ ರಂಗದ ಪಾತ್ರಧಾರಿಗಳು ಕಾವಿಪಡೆಗಳನ್ನು ಸಂತುಷ್ಟಗೊಳಿಸಲು ಒಬ್ಬರ ಮೇಲೊಬ್ಬರು ಬಿದ್ದು ಧಾವಿಸುವ ಬೇಸರದ ಹಾಗೂ ನಾಚಿಕೇಗೇಡಿನ ದೃಶ್ಯವನ್ನು ನೋಡಬೇಕಾಯಿತು ಎಂದು ಜ್ಯೋತಿಬಸು ನೆನಪಿಸಿದರು.


ಈಗಿನ ಸನ್ನಿವೇಶವನ್ನು ವಿಶ್ಲೇಷಿಸುತ್ತಾ ಅದರ ಮುಖ್ಯ ಅಂಶಗಳನ್ನು ರಾಜ್ಯ ಸಮಿತಿ ಸದಸ್ಯರ ಗಮನಕ್ಕೆ ತಂದರು. ಮೊದಲನೆಯದಾಗಿ ಬಿಜೆಪಿ ಎಂತಹ ಸ್ಥಿತಿಗೆ ಬಂದಿದೆಯೆಂದರೆ ಏನೂ ತೋಚದ ಒಂದು ಕೂಟವಾಗಿ ಅಧಿಕಾರಕ್ಕೆ ಅಂಟಿಕೊಂಡಿದೆ. ಎರಡನೆಯದಾಗಿ, ಜನತಾದಳವೂ ಹಲವು ಗುಂಪುಗಳಾಗಿ ಒಡೆದಿದೆ, ನಾವು ಹೊರಗಿನಿಂದ ಈ ಬೆಳವಣಿಗೆಯನ್ನು ನೋಡುವುದಷ್ಟೇ ಸಾಧ್ಯವಾಗಿದೆ ಹಾಗೂ ಮೂರನೆಯದಾಗಿ, ಕಾಂಗ್ರೆಸ್ ಮತ್ತೆ ಒಡೆದಿದೆ. ಈ ವಾಸ್ತವ ಸಂಗತಿಗಳಿಂದಾಗಿ ಯಾವುದೇ ಒಂದು ಗುಂಪು ಅಥವಾ ಪಕ್ಷ ಮುಂದಿನ ಚುನಾವಣೆಗಳಲ್ಲಿ ಒಂದು ಪರಿಣಾಮಕಾರಿ ಬಹುಮತ ಪಡೆಯಲಿಕ್ಕಾಗದು ಎಂದೇ ಅರ್ಥ ಎಂದರು ಜ್ಯೋತಿಬಸು.

ಇಂತಹ ಸಂದರ್ಭದಲ್ಲಿ ನಾವೇನು ಮಾಡಬೇಕು ಎಂಬುದು ಆಗಲೇ ಸ್ಪಷ್ಟ. ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳು ದಿಲ್ಲಿಯಲ್ಲಿ ಒಂದು ಜಾತ್ಯಾತೀತ-ಪ್ರಜಾಪ್ರಭುತ್ವ ಸರಕಾರವನ್ನು ತರಬೇಕಾಗಿದೆ. ಆದ್ದರಿಂದ ಎಡಪಕ್ಷಗಳು ಈ ಸವಾಲನ್ನು ಎದುರಿಸಲು ಶಕ್ತವಿಲ್ಲದಲ್ಲಿ ಕೋಮುವಾದಿ ಬಿಜೆಪಿಯನ್ನು ಸೋಲಿಸಲು ಜಾತ್ಯಾತೀತ-ಪ್ರಜಾಸತ್ತಾತ್ಮಕ ಪಕ್ಷಗಳತ್ತ ನೋಡಬೇಕಾಗಿದೆ. ಇನ್ನೊಂದು ಸಂಗತಿಯೆಂದರೆ ಮೂರನೇ ರಂಗವನ್ನು ಪುನರ್ರಚಿಸುವ ಬಗ್ಗೆ ಗೋಳಿಡದೆ ಎಡ ಪಕ್ಷಗಳ ಬಲ ಹೆಚ್ಚಿಸುವತ್ತ ಗಮನ ಕೇಂದ್ರೀಕರಿಸಬೇಕು. ಮೂರನೇ ರಂಗ ಶಾಶ್ವತ ಸ್ವರೂಪದ ರಾಜಕೀಯ ರಂಗವೇನಲ್ಲ ಎಂದು ನೆನಪಿಡಬೇಕು. ಒಂದು ಜಾತ್ಯಾತೀತ-ಪ್ರಜಾಸತ್ತಾತ್ಮಕ ಪರ್ಯಾಯ ಕಟ್ಟುವಲ್ಲಿ ನೆರವಾದದ್ದು ಎಡಪಕ್ಷಗಳ ನಿರ್ಣಾಯಕ ಮಧ್ಯ ಪ್ರವೇಶವೇ ಅಲ್ಲವೇ ಎಂದು ಜ್ಯೋತಿಬಸು ಕೇಳಿದರು.

ಜನರೊಡನೆ, ಜನರ ಮಧ್ಯೆ ಇರುವಂತಹ ಹೋರಾಟ ನಡೆಸುವತ್ತ ಸಿಪಿಐ(ಎಂ) ಮತ್ತು ಎಡಪಕ್ಷಗಳು ಮುಖ್ಯ ಗಮನ ಕೇಂದ್ರೀಕರಿಸಬೇಕು ಎಂದು ಜ್ಯೋತಿಬಸು ಎಚ್ಚರಿಸುತ್ತಾ ಜನಸಮೂಹಗಳು ಹೆಚ್ಚೆಚ್ಚು ಪ್ರಮಾಣದಲ್ಲಿ ತೊಡಗಿಸಿಕೊಳ್ಳುವುದು ಎಡರಂಗ ಸರ್ಕಾರದ ಕಾರ್ಯನಿರ್ವಹಣೆಯನ್ನು ಸುಧಾರಿಸಲು ಅತ್ಯಗತ್ಯ ಎಂದರು.

"ನೆನಪಿಡಿ, ಚುನಾವಣೆ ಬಂತೆಂದರೆ ಕಂಪನಿಗಳ ಕೈಯಲ್ಲಿರುವ ಮಾಧ್ಯಮ ಮತ್ತೆ ತಮ್ಮ ಕರಾಳ ರೂಪ ತೋರುತ್ತವೆ. ಸುಳ್ಳುಗಳು, ಅರೆಸತ್ಯಗಳು ಪ್ರಚಾರ ಪಡೆಯುತ್ತವೆ. ನಿಜ, ಸತ್ಯ ಕೊನೆಗೂ ಜಯಸುತ್ತದೆ. ಆದರೆ ಪಕ್ಷ ಮತ್ತು ಎಡರಂಗ ಸತ್ಯವನ್ನು ಪ್ರತಿ ಮನೆಗೆ, ಪ್ರತಿ ವ್ಯಕ್ತಿಗೆ ಕೊಂಡೊಯ್ಯಬೇಕು. ನಿಜ ಏನು, ನಿಜದ ದಾರಿ ತಪ್ಪಿಹೋಗಿರುವಂತದ್ದೇನು ಎಂದು ತಿಳಿಸಬೇಕು. ದೊಡ್ಡ ಸಾಮೂಹಿಕ ಸಭೆಗಳೇನೋ ಮುಖ್ಯ. ಆದರೆ ಅವು ಎಂದೂ ಜನಗಳಿಗೆ ಸಮೀಪವಾಗಿರುವ ಪಾತ್ರವನ್ನು ವಹಿಸಲಾರವು. ಪಕ್ಷದ ಸಾಹಿತ್ಯದ ಹಾಗೂ ಪ್ರಕಟಣೆಗಳ ಪ್ರಚಾರ ಮತ್ತಷ್ಟು ಹೆಚ್ಚಬೇಕು' ಎಂದು ಜ್ಯೋತಿಬಸು ಒತ್ತಿ ಹೇಳಿದರು.

ಬಿಜೆಪಿ ಮತ್ತದರ ಜತೆ ಶಾಮೀಲಾದವರನ್ನು ತರಾಟೆಗೆ ತಗೊಳ್ಳುತ್ತಾ ಅವರು 'ಬಿಜೆಪಿ ಬರ್ಬರ ವಿಧಿ-ವಿಧಾನಗಳಿಂದ ತುಂಬಿ ಹೋಗಿದೆ. ಅಷ್ಟೇ ಅಲ್ಲ, ಅದರ ಮುಖಂಡರು ದೇಶದ ರಾಜಕೀಯ ಹಂದರಕ್ಕೆ ಅಪಾಯಕಾರಿಯಾದ ಜನಗಳು. ತಮ್ಮದೇ ನಾಚಿಕೆಗೆಟ್ಟ ರೀತಿಯಲ್ಲಿ ಏನೋ ಮಾಡಿದ ಹೆಮ್ಮೆ ಅವರಿಗೆ. ದೇಶದಲ್ಲಿ ಅತ್ಯಂತ ಭ್ರಷ್ಟ ರಾಜಕಾರಣಿಗಳ ಗುಂಪು ಯಾವುದು ಎಂಬುದರಲ್ಲಿ ಅವರಿಗೆ ಕಾಂಗ್ರೆಸ್ಸನ್ನು ಹಿಂದೆ ಹಾಕಲುಸಾಧ್ಯವಾಗಿದೆ. ಅದನ್ನು ಕೂಡಾ ಅತ್ಯಂತ ಕಡಿಮೆ ಸಮಯದ ಚೌಕಟ್ಟಿನಲ್ಲಿ ತಲೆದೂಗಬೇಕಾದ ರೀತಿಯಲ್ಲಿ ಸಾಧಿಸಿದ್ದಾರೆ. ಬಹುಶಃ ಹಾಲು-ಜೇನಿನ ದಿನಗಳು ತಮಗೆ ಕಮ್ಮಿಯಾಗುತ್ತಾ ಇವೆ ಎಂದು ಅವರಿಗೆ ತಿಳಿದು ಬಂದದ್ದರಿಂದ ಇರಬೇಕು. ಕಾರ್ಗಿಲ್ ವಿಫಲತೆಯಲ್ಲಿ ಅಸಮರ್ಥತತೆಯ ವಾಸನೆ ಹೊಡೆಯುತ್ತಿದೆ. ಪಾರಂಪರಿಕ ಭಾರತೀಯ ವಿದೇಶಾಂಗ ಧೋರಣೆ ಅವನತಶೀಲವಾಗಿದೆ. ಜತೆಗೆ ಉದಾರೀಕರಣ, ಖಾಸಗೀಕರಣದತ್ತ ಧಾವಿಸುತ್ತಿರುವ ರೀತಿ ನೋಡಿದರೆ ಈ ದರೋಡೆಕೋರರು ಮತ್ತೆ ಅಧಿಕಾರದ ಪೀಠಗಳನ್ನೇರದಂತೆ ಕೇಂದ್ರದಲ್ಲಿ ಒಂದು ಜಾತ್ಯಾತೀತ- ಪ್ರಜಾಸತ್ತಾತ್ಮಕ ಸರಕಾರ ಬರುವಂತೆ ಸಿಪಿಐ(ಎಂ) ಮತ್ತು ಎಡಪಕ್ಷಗಳು ನೋಡಿಕೊಳ್ಳಬೇಕು ಎಂದು ಜ್ಯೋತಿ ಬಸು ಒತ್ತಿ ಹೇಳಿದರು.



ಚುನಾವಣೆಯ ನಂತರ ಪವಾರ್ ಬಿಜೆಪಿಯೊಂದಿಗೆ ಕೈ ಜೋಡಿಸುವುದಿಲ್ಲವಂತೆ

ಶರದ್ ಪವಾರ್ ಕೊನೆಗೂ ಹೀಗೆ ಹೇಳಬೇಕಾಗಿದೆ. ಟೈಂಸ್ ಆಫ್ ಇಂಡಿಯಾ ಪತ್ರಿಕೆಯಲ್ಲಿ ಒಂದು ಸುದ್ದಿ ಬಂತು - 'ಚುನಾವಣೆಯ ನಂತರ ಶರದ್ ಪವಾರ್‌ಗೆ ಉಪಪ್ರಧಾನಿ ಪಟ್ಟದ ಆಮಿಷ ತೋರಿಸಿ ಅವರನ್ನು ಎನ್.ಡಿ.ಎ.ಗೆ ಸೆಳೆದುಕೊಳ್ಳಬಹುದು' ಎಂದು. ಶರದ್ ಪವಾರ್ ಇದನ್ನು ಖಂಡಿಸಿ ಹೇಳಿಕೆ ನೀಡಿದ್ದಾರೆ. ಅದರಲ್ಲಿ ಬಿಜೆಪಿ ಒಂದು ಕೋಮುವಾದಿ ಪಕ್ಷ ಎಂದು ಅವರು ಸ್ಪಷ್ಟವಾಗಿ ಹೇಳಿದ್ದಾರೆ.(ಪಟೇಲರೂ, ಪಾಸ್ವಾನರೂ ಹಿಂದೆ ಹೀಗೆ ಹೇಳಲಿಲ್ಲವೇ ಎಂದು ನೀವು ಕೇಳಬಹುದು, ನಿಜ). ಒಂದು ಕೋಮುವಾದಿ ಪಕ್ಷದೊಂದಿಗೆ ವ್ಯವಹಾರದ ಪ್ರಶ್ನೆಯೇ ಇಲ್ಲ ಎಂದು 'ಖಡಾಖಂಡಿತ'ವಾಗಿ ಪವಾರ್ ಹೇಳಿದ್ದಾರಂತೆ. ಅಷ್ಟೇ ಅಲ್ಲ, ಬಿಜೆಪಿ-ಶಿವಸೇನೆ ಮೂಲೆಗೆ ಹಾಕಲು ಪ್ರಯತ್ನಿಸುತ್ತಿರುವ ಶ್ರೀಕೃಷ್ಣ ಆಯೋಗದ ಶಿಫಾರಸ್ಸುಗಳನ್ನು ಜಾರಿಗೆ ತರಲು ಅವರ ಪಕ್ಷ ಬದ್ಧವಂತೆ. ಒಳ್ಳೆಯದು.

ಮೊದಲು ಈ ಸುದ್ದಿ ಕೇಳಿ ಬಿಜೆಪಿ ಮುಖಂಡ ಅಡ್ವಾಣಿಯವರಿಗೆ ಸಂತೋಷವಾಗಿದ್ದು ಸಹಜವೇ, ಈಗ ಪವಾರ್ ಖಂಡನೆ ಕೇಳಿ ಏನಾಗಿದೆಯೋ ಗೊತ್ತಿಲ್ಲ. ಸಾರ್ವಜನಿಕವಾಗಿಯಂತೂ ಪೇಚಿಗೆ ಸಿಲುಕಿದ್ದಾರೆ.

★★★

ರಕ್ಷಣಾ ಕೇಂದ್ರದಲ್ಲಿ ಜಯಾ ಜೇಟ್ಲಿಗೇನು ಕೆಲಸ?

ಜಯಾ ಜೇಟ್ಲಿ ಫರ್ನಾಂಡೀಸ್‌ರ ಸಮತಾಪಕ್ಷದ ಕಾರ್ಯದರ್ಶಿ. 'ಟೆಲಿಗ್ರಾಫ್ ಪತ್ರಿಕೆಯಲ್ಲಿ ಒಂದು ಸುದ್ದಿ ಬಂದಿದೆ. ಕಾರ್ಗಿಲ್ ಕಾರ್ಯಾಚರಣೆಯ ಐದು ದಿನಗಳ ಮೊದಲು ಭಾರತದ ಗುಪ್ತಚರ ಸಂಸ್ಥೆಗಳಲ್ಲಿ ಒಂದಾದ 'ರಾ'(RAW) ನ ಮುಖ್ಯಸ್ಥ ಅರವಿಂದ ದವೆ ರಕ್ಷಣಾಮಂತ್ರಿ ಜಾರ್ಜ್ ಫರ್ನಾಂಡೀಸ್ ಜತೆ ಈ ಜಯಾ ಜೇಟ್ಲಿಯರನ್ನು 'ರಾ'ದ ವಿಶೇಷ ವಿಮಾನದಲ್ಲಿ ಒಂದು ಸೂಕ್ಷ್ಮ ಭದ್ರತಾ ಸ್ಥಳದಲ್ಲಿರುವ ವೈಮಾನಿಕ ಸಂಶೋಧನಾ ಕೇಂದ್ರಕ್ಕೆ ಕರೆದೊಯ್ದಿದ್ದರಂತೆ - ಪಾಕಿಸ್ತಾನಿ ಅತಿಕ್ರಮಣದ ಬಗ್ಗೆ ತಿಳಿಸಲು.

ಎರಡು ದಿನಗಳ ನಂತರ ಅರವಿಂದ್ ದವೆ ಈ ಗುಪ್ತಚರ ಸಂಸ್ಥೆಯ ಪ್ರಮುಖರಾಗಿ ಉಳಿದಿರಲಿಲ್ಲ. ಅವರನ್ನು ಅರುಣಾಚಲ ಪ್ರದೇಶದ ರಾಜ್ಯಪಾಲರಾಗಿ ನೇಮಿಸಲಾಯಿತು. ಕಾರ್ಯಾಚರಣೆಯ ಮೂರೇ ದಿನಗಳ ಮೊದಲು ಏಕೆ ಈ ವರ್ಗಾವಣೆ, ಯಾವ ಅಧಿಕೃತ ಸ್ಥಾನವೂ ಇಲ್ಲದ ಜಯಾ ಜೇಟ್ಲಿಯವರಿಗೆ ಇಂತಹ ಸೂಕ್ಷ್ಮ ಸ್ಥಳದಲ್ಲೇನು ಕೆಲಸ? ಇವು ಫರ್ನಾಂಡೀಸ್‌ರ ಕಾರ್ಗಿಲ್ ಕಾರುಬಾರುಗಳ ಪ್ರಶ್ನೆ ಮಾಲಿಕೆಗೆ ಸೇರಿರುವ ಇನ್ನೆರಡು ಪ್ರಶ್ನೆಗಳು.

★★★

ಅಹ್ಮದಾಬಾದಿನಲ್ಲಿ ದ್ವೇಷದ ದಳ್ಳುರಿ ಹಚ್ಚಿದವರಾರು?

ಕಾಂಗ್ರೆಸ್‌ನವರು, ಅದರಲ್ಲೂ ಮುಖ್ಯವಾಗಿ ಹಿಂದೆ ತಮ್ಮ ಮುಖಂಡರಾಗಿದ್ದ ಶಂಕರ್ ಸಿಂಘ್ ವಾಘೇಲಾ ಎಂದು ಗುಜರಾತಿನ ಬಿಜೆಪಿಯ ಆಳರಸರ ದೂಷಣೆ. ಆದರೆ ಕರ್ಫ್ಯೂ ರದ್ದಾದ ಮರುದಿನ ಜುಲೈ 31 ರಂದು ನಗರದ ಪಶ್ಚಿಮಭಾಗದ ಮೇಮ್‌ನಗರದಲ್ಲಿ ಒಂದು ಹೋಟೆಲಿಗೆ ಬೆಂಕಿ ಇಡುವಾಗ ಇಬ್ಬರು ಭಜರಂಗದಳ ಕಾರ್ಯಕರ್ತರು- ಹರ್ಷದ್ ಗಿಲತ್‌ವಾಲಾ ಮತ್ತು ಭಾಸ್ಕರ ಭಟ್ - ಕೈ ಸುಟ್ಟುಕೊಂಡರು. ಖಾನಪುರ ಎಂಬ ಮುಸ್ಲಿಂ ಬಾಹುಳ್ಯದ ಪ್ರದೇಶದಲ್ಲಿ ತಾನು ಇರಿತಕ್ಕೊಳಗಾಗಿದ್ದೇನೆ ಎಂದು ಹೇಳಿಕೊಂಡ ಪ್ರಕಾಶ್ ಪಾಂಚಾಲ್ ಮಾಜಿ ಬಿಜೆಪಿ ಶಾಸಕ ಹೇಳಿದ್ದಕ್ಕೆ ತಾನು ಹಾಗೆ ಹೇಳಿದೆ ಎಂದು ಪೋಲೀಸರೆದುರು ಒಪ್ಪಿಕೊಂಡ. ಈ ಎರಡು ಘಟನೆಗಳಿಂದ ಬಿಜೆಪಿ ಮುಖಂಡರು ಕಕ್ಕಾಬಿಕ್ಕಿಯಾಗಿದ್ದಾರೆ.



ಪ್ರೊ. ಸೈಫುದ್ದೀನ್ ಸೋಜ್‌ಗೆ ಸಿಪಿಐ(ಎಂ)-ಸಿಪಿಐ ಬೆಂಬಲ

ಜಮ್ಮು-ಕಾಶ್ಮೀರ ನ್ಯಾಶನಲ್ ಕಾನ್ಫರೆನ್ಸ್ ಪಕ್ಷ ತನ್ನ ಜಾತ್ಯಾತೀತ ಪರಂಪರೆಯನ್ನು ತ್ಯಜಿಸಿ ಕೋಮುವಾದಿ ಬಿಜೆಪಿಯೊಂದಿಗೆ ಸಹಕರಿಸುವ ನಿಲುವು ತಳೆದುದನ್ನು ವಿರೋಧಿಸಿದ್ದಕ್ಕಾಗಿ ಪಕ್ಷದಿಂದ ಹೊರಹಾಕಲ್ಪಟ್ಟ ಪ್ರೊ. ಸೈಫುದ್ದೀನ್ ಸೋಜ್ ತನ್ನ ಕ್ಷೇತ್ರ ಬಾರಾಮುಲಾದಿಂದ ಸ್ವತಂತ್ರವಾಗಿ ಸ್ಪರ್ಧಿಸಲು ನಿರ್ಧರಿಸಿದ್ದಾರೆ.


ಬಿಜೆಪಿ ನೇತೃತ್ವದ ಸರಕಾರದ ವಿರುದ್ಧ ವಿಶ್ವಾಸಮತದ ವೇಳೆಗೆ ಪ್ರೊ. ಸೋಜ್ ತಳೆದ ನಿಲುವನ್ನು ದೇಶದ ಜಾತ್ಯಾತೀತ ಪ್ರಜಾಪ್ರಭುತ್ವವಾದಿ ಜನಗಳೆಲ್ಲಾ ಮೆಚ್ಚಿಕೊಂಡಿದ್ದಾರೆ. ಪ್ರಜಾಪ್ರಭುತ್ವವನ್ನು ಮತ್ತು ಜಮ್ಮು-ಕಾಶ್ಮೀರದ ಸ್ವಾಯತ್ತತೆಯನ್ನು ಬಲಪಡಿಸುವುದನ್ನು ಪ್ರತಿಪಾದಿಸುವ ಇವರು ಎಲ್ಲರಿಗೂ ಒಪ್ಪಿಗೆಯಾಗುವ ಅಭ್ಯರ್ಥಿಯಾಗುತ್ತಾರೆ, ಎಲ್ಲಾ ಪ್ರಜಾಪ್ರಭುತ್ವವಾದಿ ಜಾತ್ಯಾತೀತವಾದಿ ಶಕ್ತಿಗಳು ಅವರನ್ನು ಬೆಂಬಲಿಸುತ್ತಾರೆ ಎಂದು ಸಿಪಿಐ(ಎಂ) ಹಾಗೂ ಸಿಪಿಐ ಜಂಟಿ ಹೇಳಿಕೆಯೊಂದರಲ್ಲಿ ಆಶಿಸಿದೆ. ಜಮ್ಮು-ಕಾಶ್ಮೀರದ ಅನಂತನಾಗ್‌ನಿಂದ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಯುಸುಫ್ ತರಿಗಾಮಿ ಸ್ಪರ್ಧಿಸುತ್ತಿದ್ದಾರೆ.

ಇತ್ತೀಚೆಗೆ ಬಿಜೆಪಿ-ಸಂಘಪರಿವಾರ, ಅವರ ಪಕ್ಷದ ಸಂಸತ್ ಸದಸ್ಯರು, ಮಂತ್ರಿಗಳ ನೇರ ನೇತೃತ್ವದಲ್ಲಿ ಅದರ ಭಜರಂಗದಳ- ವಿಶ್ವಹಿಂದೂ ಪರಿಷತ್ ಎಂಬ ಮುಖವಾಡ ಸಂಘಟ ಹೆಸರಿನಲ್ಲಿ ಕರ್ನಾಟಕದ ನಾಲ್ಕು ಕಡೆಗಳಿಂದ ಬಾಬಾಬುಡನ್ ಗಿರಿಗೆ ಯಾತ್ರೆ ನಡೆಸಿದ್ದು ಹಾಗೂ ಬಾಬಾಬುಡನ್ ಗಿರಿಯಲ್ಲಿ ಬಾಬಾನ 'ಉರುಸ್' ಸಮಯದಲ್ಲಿ ದೊಡ್ಡ ದಾಂಧಲೆ ನಡ ನಮಗೆಲ್ಲಾ ಚೆನ್ನಾಗಿ ನೆನಪಿದೆ.

ತೀವ್ರ ಬೆಲೆಏರಿಕೆ, ನಿರುದ್ಯೋಗ, ಆಡಳಿತ ವೈಫಲ್ಯಗಳ ಹಿನ್ನೆಲೆಯಲ್ಲಿ ದೇಶಾದ್ಯಂತ ಬಿಜೆಪಿ ಕಳೆದು ಕೊಳ್ಳುತ್ತಿದ್ದ ಜನ ಬೆಂಬಲದ ಸೂಚಕವಾಗಿ ರಾಜಸ್ಥಾನ, ದೆಹಲಿಗಳಲ್ಲಿ ಮುಳ್ಳಿದ್ದು, ಇನ್ನು ಮುಂದೆ ಕರ್ನಾಟಕ್ಕೆ ನಾವೇ ರಾಜರು ಎಂಬ ಬಿಜೆಪಿ ನಾಯಕರ ಹಗಲುಗನಸಿನ ಹರಿವಿಗೆ ತಡೆಯೊಡ್ಡಿದಂತಾಯಿತು. ಇಡೀರಾಜ್ಯದಲ್ಲಿ ಕೋಮುವಾದದ ಜ್ವಾಲೆ ಹಬ್ಬಿಸದಿದ್ದರೆ ತಮ್ಮ ಕನಸು ನನಸಾಗುವುದಿಲ್ಲ ಎಂದು ಅದಕ್ಕಾಗಿ ಷಡ್ಯಂತ್ರವನ್ನು ರೂಪಿಸಿದರು. ಈ ಬಾರಿ ಅವರ ದೃಷ್ಟಿ ಕರ್ನಾಟಕದಲ್ಲಿ, ಅದರಲ್ಲಿಯೂ ಉತ್ತರ ಕರ್ನಾಟಕದಲ್ಲಿ ಜೀವಂತವಾ ಹಿಂದೂ-ಮುಸ್ಲಿಂ ಭೇದವೆಣಿಸದ ಸೂಫಿ ಹಾಗೂ ದತ್ತ ಪರಂಪರೆಯ ಸಂಮಿಳಿತ ಧಾರ್ಮಿಕ ಆಚರಣೆಗಳತ್ತ ಹರಿಯಿತು.

ಕರ್ನಾಟಕಾದ್ಯಂತ ಅದರಲ್ಲಿಯೂ ಬಾಬಾಬುಡನ್‌ಗಿರಿ, ಗುಲ್ಬರ್ಗದ ಖಾಜಾ ಬಂದೇನವಾಜ್ ಮೊದಲಾದ ಸೂಫಿಸಂತರ ದರ್ಗಾ ಗಳಿಗೆ ಲಕ್ಷಾಂತರ ಸಂಖ್ಯೆಯಲ್ಲಿ ಹಿಂದುಗಳು ಧಾರವಾ ಯಮನೂರಪ್ಪ (ಚಾಂಗದೇವ), ಗುಲ್ಬರ್ಗ ಜಿಲ್ಲೆಯ ಗಾಣಗಾಪುರದ ದತ್ತ ಪೀಠ, ಮೇಲುಕೋಟೆಯ ಚೆಲುವ ನಾರಾಯಣ ಸ್ವಾಮಿಗೆ ಅಸಂಖ್ಯಾತ ಮುಸ್ಲಿಮರು ನಡೆದುಕೊಳ್ಳುವ, ಹರಕೆ, ಮುಡಿಪು ಕಟ್ಟುವ ಜೀವಂತ ಪರಂಪರೆ ಕರ್ನಾಟದಲ್ಲಿ ಕೋಮುವಿಷದ ಹರಡುವಿಕೆಗೆ ತಮ್ಮ ಬೆಳವಣಿಗೆಗೆ ಮುಖ್ಯ ಅಡ್ಡಿಯಾಗಿದೆಯೆಂದು ಬಿಜೆಪಿ ನಾಯಕರು ಭಾವಿಸಿದರು. ಈ ಸಂಮಿಳಿತ ಆಚರಣೆ ಉಂಟುಮಾಡುವ ಸೌಹಾರ್ದವನ್ನು ಧ್ವಂಸಮಾಡಿ ಕೋಮುದ್ವೇಷವನ್ನು ಬಿತ್ತುವ ಹಂಚಿಕೆಯಿಂದ ಗಾಣಗಾಪುರ, ಮೇಲುಕೋಟೆ ಮೊದಲಾದ ಕಡೆಗಳಿಂದ ಬಾಬಾಬುಡನ್ ಗಿರಿಗೆ ಜಾಥಾ ನಡೆಸಿದರು. ದಾರಿಯುದ್ದಕ್ಕೂ ಹಿಂದೂಗಳನ್ನು ಉದ್ರೇಕಿಸುವ ಭಾಷಣಗಳ ಬಿರುಮಳೆ. ಹುಬ್ಬಳ್ಳಿಯ ಈದ್ಗಾ ಮೈದಾನವನ್ನು ವಿವಾದಕರವಾಗಿಸಿ ಹಲವಾರು ವರ್ಷ ಹುಬ್ಬಳ್ಳಿ ಧಾರವಾಡ ಮಹಾನಗರದಲ್ಲಿ ಹಾಗೂ ಸುತ್ತ ಮುತ್ತಲಿನ ಪ್ರದೇಶದಲ್ಲಿ ಕೋಮುದ್ವೇಷವನ್ನು ಬೆಳೆಸುವ ದಿಶೆಯಲ್ಲಿ ಯಶಸ್ಸು ಪಡೆದದ್ದು ಹಾಗೂ ಅಲ್ಲಿಯ ಲೋಕಸಭಾ, ವಿದಾನಸಭಾ ಸ್ಥಾನಗಳನ್ನು ಗೆದ್ದುಕೊಂಡಿದ್ದನ್ನು ಗಮನಿಸಿದರೆ ಬಾಬಾಬುಡನ್ ಗಿರಿ ಹಾಗೂ ಮತ್ತು ರಾಜ್ಯದ ನಾಲ್ಕು ದಿಕ್ಕುಗಳಲ್ಲಿರುವ ವಿವಿಧ ಕ್ಷೇತ್ರಗಳನ್ನು ಅದರ ಸುತ್ತು ಮುತ್ತಲಿನ ಪ್ರದೇಶವನ್ನು ವಿವಾದಗ್ರಸ್ಥವನ್ನಾಗಿಸುವ ಪ್ರಯತ್ನ ಎಂತಹ ಅಪಾಯಕಾರಿ ಎಂದು ತಿಳಿಯುತ್ತದೆ.

ಕರ್ನಾಟಕದಲ್ಲಿ ವಿಧಾನಸಭೆ ಚುನಾವಣೆಗಳ ಜೊತೆಗೆ ಲೋಕ ಸಭಾ ಚುನಾವಣೆಗಳೂ ನಡೆಯುತ್ತಿವೆ. ಕರ್ನಾಟಕ ಜಾತ್ಯಾತೀತವಾಗಿ ಉಳಿಯಬೇಕೊ, ಕೋಮುವಾದೀ ರಾಜಕೀಯದ ಕಣವಾಗಿ ನಿರಂತರ ಕೋಮುದಂಗೆಗಳಿಗೆ ಈಡಾಗಬೇಕೋ ಎಂಬುದನ್ನು ಆರಿಸಿಕೊಳ್ಳುವ ನಿರ್ಣಾಯಕ ಚುನಾವಣೆಗಳ ಸಂದರ್ಭದಲ್ಲಿ ಈ ದೊಡ್ಡ ದುಷ್ಟ ಯೋಜನೆಯ ಹಿಂದಿನ ಸತ್ಯವನ್ನು 'ಐಕ್ಯರಂಗ'ದ ಓದುಗರಿಗೆ ಪ್ರೊ. ರಹಮತ್ ತರೀಕೆರೆಯವರ ಈ ಲೇಖನ ಬಿಚ್ಚಿಡುತ್ತದೆ. ಈ ಲೇಖವನ್ನು 'ಹೊಸತು' ಮಾಸ ಪತ್ರಿಕೆಯಿಂದ ಆರಿಸಿ ಪ್ರಕಟಿಸುತ್ತಿದ್ದೇವೆ.



ದತ್ತ ಬಾಬಾ - ಜನಸಂಸ್ಕೃತಿಯ ಸಮ್ಮಿಲ

ಚಿಕ್ಕಮಗಳೂರು ಸೀಮೆಯ ಬಹುತೇಕ ಜನಕ್ಕೆ ಮನೆಯ ಅಂಗಳದಲ್ಲೊ ಹಿತ್ತಿಲಲ್ಲೋ ನಿಂತರೆ ಬಾನಿಗೆ ತೆರೆಕಟ್ಟಿದಂತೆ ಇರುವ 'ಗಿರಿ'ಗಳು ಕಾಣುತ್ತವೆ. 'ಗಿರಿ' ಎಂದರೆ ಕಲ್ಲತ್ತಿಗಿರಿ, ಬಾಬಾ ಬುಡನಗಿರಿ, ಮುಳ್ಳಯ್ಯನ ಗಿರಿ - ಹೀಗೆ ಒಂದರ ತೋಳು ಮತ್ತೊಂದರ ಹೆಗಲನ್ನು ಬಳಸಿದಂತೆ ನಿಂತಿರುವ ಬೆಟ್ಟಗಳ ಗುಂಪು. ಈ ಸೀಮೆಗೆ ಮಳೆ ಬರುವಾಗ ಈ ಗಿರಿಶ್ರೇಣಿ ಮೊದಲು ಮೋಡಗಳಿಂದ ಮುಚ್ಚಿಹೋಗುತ್ತವೆ. ಚಳಿ ಬಂದರೆ ಬೆಣ್ಣೆಯಂತಹ ಮಂಜಿನಲ್ಲಿ ಹುದುಗಿ ಹೋಗುತ್ತದೆ. ಈ ಸೀಮೆಗೆ ಸೂರ್ಯ ಮೂಡುವಾಗ ಈ ಗಿರಿಗಳ ನೆತ್ತಿಮೊದಲು ಹೊಂಬಣ್ಣದಿಂದ ಬೆಳಗುತ್ತದೆ. ಬೇಸಿಗೆಯಲ್ಲಿ ಕಾಡ್ಗಿಚ್ಚು ಬಿದ್ದರೆ, ಸಿಡಿಲುಗಳೆಲ್ಲ ಬಂದು ಈ ಗಿರಿಗಳ ಮೇಲೆ ಮಲಗಿಬಿಟ್ಟಿವೆ ಅನಿಸುತ್ತದೆ. ಮಳೆ-ಚಳಿ ಬೆಂಕಿ-ಬೆಳಕುಗಳ ಜೊತೆ ಈ ಗಿರಿಗಳು ಆಡುವ ಆಟವನ್ನೆಲ್ಲ ಕಾಣುತ್ತ ಇಲ್ಲಿನ ಜನ ಬೆಳೆದವರು.

ಪುರಾಣ ಲೋಕದೊಳಗೆ ಈ ಗಿರಿಸಮುಚ್ಚಯವನ್ನು 'ಜಲಮೇಲ್‌ಗಿರಿ' ಎಂದು ಕರೆಯಲಾಗುತ್ತದೆ. ಸಾವಿರಾರು ಅಡಿ ಎತ್ತರದ ಶಿಖರಗಳಲ್ಲಿ ಜಲಪಾತಗಳ ಧುಮ್ಮಿಕ್ಕುವ ವಿಸ್ಮಯವನ್ನು ಜನ ರಾಮಾಯಣಕ್ಕೆ ಒಯ್ದು ಕತೆ ಕಟ್ಟಿದ್ದಾರೆ. ಲಂಕೆಯ ಯುದ್ಧದಲ್ಲಿ ಲಕ್ಷ್ಮಣ ಮೂರ್ಛೆಬಿದ್ದಾಗ, ಸಂಜೀವಿನಿ ತರಲು ಬಂದ ಆಂಜನೇಯ ಈ ಇಡೀ ಪರ್ವತವನ್ನೇನೋ ಒಯ್ದ. ಆದರೆ ವಾಪಸು ತಂದಿಡುವಾಗ ಅವಸರದಲ್ಲಿ ತಲೆಕೆಳಗೆ ಮಾಡಿ ಇಟ್ಟುಹೋದ! ಹೀಗಾಗಿ ಕೆಳಗಿದ್ದ ಜಲವೆಲ್ಲ ಮೇಲೆ ಹೋಗಿ ಅಲ್ಲಿಂದ ಸುರಿಯುತ್ತಿದೆ. (ಬಾಬಾಬುಡನ್‌ಗಿರಿ ಸಾಲಿನಲ್ಲಿ, ಗಾಳಿ ಹನುಮಂತರಾಯನ ಹೆಸರಲ್ಲಿ ಕೆರೆಯೂ ಇದೆ). ಗಿಡಮರಗಳಿಗೆ ಬಳ್ಳಿಗಳು ಸುತ್ತುಹಾಕಿರುವಂತೆ, ಇಲ್ಲಿನ ದೈವಗಳಿಗೆ ಅನೇಕ ಕತೆಗಳು ಆವರಿಸಿಕೊಂಡಿವೆ. ಬಾಬಾಬುಡನಸ್ವಾಮಿ ಜೊತೆ, ಸಾಕುಮಗಳಾಗಿ ಇದ್ದ ಮಾಮಾಜುಗನಿಗೆ ಸಂಬಂಧಿಸಿದ ಕತೆಗಳು ಸೀತಾಪಹರಣ ಪ್ರಸಂಗವನ್ನು ನೆನಪಿಸುತ್ತವೆ. ಅಪೂರ್ವ ಸುಂದರಿಯಾಗಿದ್ದ ಮಾಮಾಜುಗನಿಯನ್ನು ಒಬ್ಬ 'ಜಿನ್' (ಮಾಯಾವಿ) ಆಕೆ ಮಲಗಿದ್ದ ಮಂಚದಸಮೇತ ಅಪಹರಿಸಿಬಿಟ್ಟ. ನಿದ್ದೆ ತಿಳಿದ ಆಕೆ ಕಣ್ಣುಬಿಟ್ಟರೆ ಬಾಬಾಬುಡನಗಿರಿ ಬೆಟ್ಟಗಳಿವೆ. ಬಾಬಾ ಈ ಸುಂದರಿಯನ್ನು ದುರ್ಗಂಧ ಹೊಡೆಯುವ ಕುರೂಪಿಯಾಗಿಸಿಬಿಟ್ಟ. ಅಪಹರಣ ಮಾಡಿದ ಜಿನ್ ಪರಾರಿಯಾದ ಮೇಲೆ ಆಕೆಗೆ ಮೊದಲಿನ ರೂಪ ಬಂತು. ಆಕೆ ಬಾಬಾನ ಅಪ್ಪಣೆಯಂತೆ, ಗಿರಿಗೆ ಬರುವ ಬಡವರಿಗೆ ರೊಟ್ಟಿ ಮಾಡಿ, ಗುಹೆಯ ಒಂದು ಕಿಂಡಿಯ ಮೂಲಕ ಹಸಿದವರಿಗೆ ನೀಡುತ್ತಿದ್ದಳು.

ಅವಳ ಕೈಯ ಚೆಲುವನ್ನು ಕಂಡು ಮೋಹಗೊಂಡ ಮಲಂಗ್ ಎಂಬ ಫಕೀರ, ಒಮ್ಮೆ ಕೈಯನ್ನು ತುಡುಕಿಬಿಟ್ಟ ಆಕೆ ಬಾಬಾನ ಸಲಹೆಯಂತೆ ಒಮ್ಮೆ ಕೈ ಝಾಡಿಸಲು ಆತ ದೂರ ಹೋಗಿ ಬಿದ್ದ. (ಈ ರೊಟ್ಟಿ ಮಾಡಿಕೊಡುತ್ತಿದ್ದ ಹೆಣ್ಣು ದತ್ತಾತ್ರೇಯನ ತಾಯಿ ಅನಸೂಯ ಎಂದೂ ನಂಬಿಕೆಯಿದೆ) ಇನ್ನೊಂದು ಕತೆಯ ಪ್ರಕಾರ ಆಕೆಯನ್ನು ಅಪಹರಣ ಮಾಡಿಕೊಂಡು ಹೋಗುವಾಗ ಆಕೆ ತನ್ನ ಮುತ್ತಿನ ಹಾರವನ್ನು ಹರಿದು ಹಾದಿಯುದ್ದಕ್ಕೂ ಚೆಲ್ಲುತ್ತಾ ಹೋದಳು. ಅದೇ ಮೋತಿಲಾಲ್ (ಮುತ್ತಿನಕೆರೆ) ಆಯಿತು.

ಪರ್ಯಾಯ ಚರಿತ್ರೆಗಳು

ಈ ಪುರಾಣಕತೆಗಳು ಹೀಗೇ ಬೆಳೆಯುತ್ತಾ ಹೋಗುತ್ತವೆ. ಇವು ದಾಖಲೆ ನಂಬಿ ಮಾತಾಡುವ ಯಾವುದೇ ಇತಿಹಾಸಕಾರರು ಗಹಗಹಿಸಿ ನಗುವಂತಿವೆ. ಆದರೆ ಇದನ್ನು ಜನ ಅಪಾರ ನಂಬಿಕೆಯಿಂದ ಭಕ್ತಿಯಿಂದ ಹೇಳುತ್ತಾರೆ. ತಮ್ಮ ದೈವಗಳನ್ನು ತಾವೇ ಕಟ್ಟಿದ ಇಂಥ ಪುರಾಣಕತೆಗಳಿಂದ ಶೃಂಗರಿಸಿ, ದೊಡ್ಡ ಮಹಿಮಾವ್ರತನನ್ನಾಗಿ ಯಾಕೆ ರೂಪಿಸಿಕೊಳ್ಳುತ್ತಾರೆ.? ತಮ್ಮ ತುಮುಲಗಳನ್ನು ಪರಿಹರಿಸಬಲ್ಲವನು ಅಸಾಮಾನ್ಯನು ಆಗಿರಬೇಕು ಎಂಬುದಕ್ಕಾಗಿಯೇ? ಬಾಬಾಬುಡನಗಿರಿಯಲ್ಲಿ ಮೈಸೂರು ದೊರೆಗಳು ಕಟ್ಟಿಸಿದ ಒಂದು ಬಂಗಲೆಯಿದ್ದು. ಅದು ಪಾಳುಬಿದ್ದಿದೆ. ಜನರ ವ್ಯಾಖ್ಯಾನವೆಂದರೆ - ದೊರೆ ಬಂಗಲೆಯಲ್ಲಿ ಮಲಗಿರುವಾಗ ಬಾಬಾ ಕನಸಲ್ಲಿ ಬಂದು, "ಏನಪ್ಪಾ, ನಾನು ಕೆಳಗೆ ಗವಿಯಲ್ಲಿ; ನೀನು ನನಗಿಂತ ಮೇಲೆ ಬಂಗಲೆಯಲ್ಲಿ" ಎಂದು ಹೇಳಿದಂತಾಯಿತಂತೆ. ದೊರೆ ತಟ್ಟನೆ ಎದ್ದು, ತಪ್ಪಾಯಿತು ಎಂದು ಬಂಗಲೆ ತೊರೆದು ಹೋದವನು ಮತ್ತೆ ಬರಲಿಲ್ಲ. ಇಂಥ ಕತೆಗಳನ್ನು, ವೈಚಾರಿಕತೆ ಉಳ್ಳವರೂ 'ಮೂಢನಂಬಿಕೆ' ಎಂದು ಹೇಳುವುದಕ್ಕೆ ಯಾವ ಕಷ್ಟವನ್ನು ವಹಿಸಬೇಕಿಲ್ಲ. ಆದರೆ ಇಂಥ ಕತೆಗಳು ಯಾಕೆ ಹುಟ್ಟಿಕೊಳ್ಳುತ್ತವೆ? ಇವುಗಳ ಆಶಯಗಳಿಗೂ ಜನರ ವಾಸ್ತವದ ಬಾಳಿನ ಆಸೆ-ಕೊರತೆಗಳಿಗೂ ಏನಾದರೂ ಸಂಬಂಧವಿದೆಯೇ? ಇದರ ಬಗ್ಗೆ ಯೋಚಿಸಲು ಶುರುಮಾಡಿದರೆ, ಈ ಕತೆಗಳು ರೂಪಕಗಳಂತೆ ತೋರುತ್ತವೆ. ಸತ್ತಂತಿರುವವರನ್ನು ಬದುಕಿಸಲು ಸಂಜೀವಿನಿ ಹುಡುಕುವುದು ಹಸಿದವರಿಗೆ ರೊಟ್ಟಿ ತಟ್ಟಿಕೊಡುವುದು, ದುಷ್ಟರ ಕೈಯಲ್ಲಿ ಸಿಕ್ಕ ಅಸಹಾಯಕರು ಪಾರಾಗಲು ಉಪಾಯ ಹುಡುಕುವುದು, ನಾನು ದೊಡ್ಡವನು ಎಂದವನ ಅಹಂ ಇಳಿಸುವುದು ಇತ್ಯಾದಿ ಆಶಯಗಳುಳ್ಳ ಈ ಕತೆಗಳು ಏನು ಸೂಚಿಸುತ್ತಿವೆ? ಜನ ಕಟ್ಟಿಕೊಳ್ಳುವ ಇಂಥ ಪುರಾಣಕತೆಗಳ ಒಳಗಿನ ಅವರ ಹಂಬಲಗಳನ್ನು ನೋಡುವ ವಿದ್ಯೆಯೇ ನಮಗೆ ಗೊತ್ತಿಲ್ಲ! ಇವು ಖಂಡಿತ ಕೋರ್ಟುಗಳಲ್ಲಿ ಮಂಡಿಸಿ ಕೇಸು ಗೆಲ್ಲಿಸಬಲ್ಲ ಚಾರಿತ್ರಿಕ ಆಧಾರಗಳಲ್ಲ. ಆದರೆ ಸಮುದಾಯಗಳು ರೂಪಕಗಳಲ್ಲಿ ಸೃಷ್ಟಿಸಿಕೊಂಡ ಪರ್ಯಾಯ ಚರಿತ್ರೆಯ ಭಾಗಗಳು. ಬಾಬಾನ ಗುಹೆಯನ್ನು ಸರಿರಾತ್ರಿಯಲ್ಲಿ ಹುಲಿ ಬಂದು, ಬಾಲದಿಂದ ಕಸಗುಡಿಸಿ ಹೋಗುತ್ತದೆ - ಎಂಬ ನಂಬಿಕೆ ಗಮನಿಸಬೇಕು. ನಿಜಜೀವನದಲ್ಲಿ ನಮ್ಮನ್ನು ಭಯಗೊಳಿಸುವ ಶಕ್ತಿಗಳೆಲ್ಲ ದೈವಗಳ ಅಡಿಯಾಳಾಗಿಬಿಡುತ್ತವೆ. ಭಾರತದ ಸಂತರೆಲ್ಲ ಹುಲಿಸಿಂಹಗಳನ್ನು ಪಳಗಿಸಿ ಸರಿಮಾಡುವವರಾಗಿದ್ದಾರೆ. (ಉದಾ : ಮಲೆಮಾದೇಶ್ವರ) ದಟ್ಟಕಾಡಿನಲ್ಲಿರುವ ದೈವಗಳೆಲ್ಲ ಹುಲಿಯಿಂದ ಸೇವೆ ಪಡೆಯುವವರಾಗಿದ್ದಾರೆ.

ಈ ಪುರಾಣ ಕತೆಗಳ ವಿಶಿಷ್ಟತೆ ಎಂದರೆ-ರೊಟ್ಟಿ ತಟ್ಟಿಕೊಡುವ ಹೆಣ್ಣು ಮಾಮಾಜುಗನಿಯೂ ಆಗಿರಬಹುದು, ಅನಸೂಯೆಯೂ ಆಗಿರಬಹುದು ; ಹೆಣ್ಣನ್ನು ಅಪಹರಿಸುವವನು ರಾವಣನೂ ಆಗಿರಬಹುದು, ಮಲಂಗನೂ ಆಗಿರಬಹುದು; ಇದೇ ರೀತಿ ಬಾಬಾಬುಡನ್ ಎಂಬ ಸಂತನು ದತ್ತಪಂಥಕ್ಕೆ ಸೇರಿದ ಯೋಗಿಯೂ ಆಗಿರಬಹುದು ಎಂಬ ಬಹುಮುಖವನ್ನು ಪಡೆದಿರುವುದು.

ಜತೆಗೆ ಬಂದ ಕಾಫಿ

ಚರಿತ್ರೆಯನ್ನು ಬೆನ್ನುಹತ್ತಿ ಹೋದರೆ ಬಾಬಾಬುಡನ್ ಹಾಗೂ ದತ್ತಾತ್ರೇಯರ ಸಂಬಂಧಗಳ ಬಗ್ಗೆ ಅನೇಕ ಸಂಗತಿಗಳು ಸಿಗುತ್ತವೆ. ಈ ಸಂಗತಿಗಳು ನಮ್ಮ ಅನುಭಾವಿಪಂಥಗಳು ಒಡನಾಡಿದ ಸ್ವಾರಸ್ಯಕರ ಭಾಗಗಳು. ಫಾರಸಿ-ದಖನಿ ಸಂತಚರಿ (Hagiography) ಹೇಳುವಂತೆ ಬಾಬಾಬುಡನ್ ದಾದಾ ಹಯಾತ್ ಖಲಂದರ್ ಎಂಬ ಸೂಫಿ 17ನೇ ಶತಮಾನದಲ್ಲಿ ಅರಬ್ ದೇಶದಿಂದ ಈ ಬಂದನು. ಇವನ ಹೆಸರು ಅಬ್ದುಲ್ ಅಜೀಜ್ ಯೂಸೆಫ್. 'ಮಕ್ಕಿ' ಎಂದರೆ ಮಕ್ಕಾಪಟ್ಟಣದ ಎಂದರ್ಥ. ಈತನ ನಿಜವಾದ ಸಮಾಧಿ ಎಲ್ಲಿ ತಿಳಿಯದು. ಬಾಬಾಬುಡನ ಗಿರಿಯ ಗುಹೆಯೊಳಗಿನ ನಾಲ್ಕು ಸಮಾಧಿಗಳು ಈತನ ಎನ್ನಲಾಗುತ್ತವೆ. ಇವ ದತ್ತಾತ್ರೇಯನ ಶಿಷ್ಯರವ ಹೇಳಲಾಗುತ್ತದೆ. ದಾದಾ ಹಯಾತನು ಅರಬ್ಬದ ಎಂಬುವರ ಪ್ರಸಿದ್ಧ ವಂಶಕ್ಕೆ ಸೇರಿದವನು. ಸೂಫಿಪಂಥಕ್ಕೆ ಸೇರಿತ್ತು. ಸೂಫಿಪಂಥದಲ್ಲಿ ಖಲಂದರಿಯಾ, ಖಾದ್ರಿಯಾ, ರಫಾಯಿಯಾ ಶಾಖೆಗಳಿವೆ. ದಾದಾ ಹಯಾತನು ಖಲಂದರಿಯ ಸೇರಿದ ಕಾರಣ, ಖಲಂದರ್ ಎಂಬ ಅಂಟಿಕೊಂಡಿದೆ. ಖಲಂದರ್ ಸ ಲಕ್ಷಣವೆಂದರೆ-ಸಾಂಪ್ರದಾಯಿಕ ಇಸ್ಲಾಂ ಧರ್ಮ ಆಚಾರ (ಶರೀಯತ್)ಗಳನ್ನು ಲೆಕ್ಕಿಸದೆ, ಅ ಸಾಧನೆಗಳಲ್ಲಿ ತೊಡಗುವುದು, ಆಲೋಚನೆ, ಕ್ರಿ ನಿರಂಕುಶಮತಿಗಳಾಗಿರುವುದು ಹೀಗಾಗಿ ಸನಾತನವಾದಿಗಳಿಗೂ ಈ ಖಲಂದರ್ ಸೂ ಯಾವಾಗಲೂ ತಾತ್ವಿಕ ಸಂಘರ್ಷಗಳು ನಡೆದಿ ಹಯಾತ ಖಲಂದರನು ಅರಬಸ್ಥಾನದಿಂದ ಕಾಫೀ ಬೀಜಗಳನ್ನು ತಂದನು ಎನ್ನಲಾಗುತ್ತದೆ. ಸಸ್ಯಶಾಸ್ತ್ರದ ಹೆಸರೇ 'ಕಾಫಿ ಅರಾಬಿಕಾ' ಜನಾಂಗಕ್ಕೂ ಕಾಫಿಗೂ ಇರುವ ಚಾರಿತ್ರಿಕ ಸಂಬ ಕುರಿತು ಬಹುದೀರ್ಘವಾದ ಚರ್ಚೆನಡೆದಿದೆ. ಎಚ್.ಎಲ್. ನಾಗೇಗೌಡ : ಬೆಟ್ಟದಿಂದ ಬಟ್ಟ ಈ ಚರ್ಚೆಗಳಲ್ಲಿ ಅತ್ಯಂತ ಸ್ವಾರಸ್ಯಕರ ಏನೆಂದರೆ, ಸೂಫೀ ಫಕೀರರು ದೈವಿಕ ಸಾ ಮೈಮರೆಯಲು ಕಾಫಿ ಬೀಜಗಳನ್ನು ತಿನು ಬಾಬಾಬುಡನಗಿರಿಯಲ್ಲಿರುವ ಕಾಫೀ ಬೆಳೆಗ ದೇಶಕ್ಕೂ ಸೂಫಿ ಪಂಥಕ್ಕೂ ಇರುವ ಈ ಸ ತುಂಬ ಮುಖ್ಯವಾದವು. ಆದರಲ್ಲೂ ದಾದಾ ಹ

'ಹೊಸತು'

'ಹೊಸತು' ಕನ್ನಡದ ಹೊಚ್ಚ ಹೊಸ ಮಾಸ ಪತ್ರಿಕೆ. ಪ್ರಗತಿಪರ, ಎಡ ಪಂಥೀಯ ಸಾಹಿತ್ಯ ಪ್ರಕಟಣೆಗಳಿಗೆ ಪ್ರಸಿದ್ಧವಾದ 'ನವಕರ್ನಾಟಕ ಪ್ರಕಾಶನ'ದಿಂದ ಪ್ರಕಟವಾಗುತ್ತಿರುವ ಹೊಸ ಕೊಡುಗೆ. ಕನ್ನಡದಲ್ಲಿ ತತ್ವಶಾಸ್ತ್ರ, ಸಾಹಿತ್ಯ ವಿಮರ್ಶೆ, ವೈಚಾರಿಕ ಬರಹಗಳ ಮೂಲಕ ಪ್ರಸಿದ್ಧರಾದ ಡಾ. ಜಿ ರಾಮಕೃಷ್ಣ ಪತ್ರಿಕೆಯ ಸಂಪಾದಕರು. ಬಿಡಿ ಪ್ರತಿಯ ಬೆಲೆ ರೂ. 10/- ವಾರ್ಷಿಕ ಚಂದಾ ರೂ. 100/ - ಇತ್ತೀಚೆಗೆ ಬಿಡುಗಡೆಯಾದ ಪತ್ರಿಕೆಯ ಮೊದಲ ಸಂಚಿಕೆಯಿಂದ ಡಾ. ರಹಮತ್ ತರೀಕೆರೆಯವರ ಲೇಖನವನ್ನು ಆರಿಸಲಾಗಿದೆ.

ದುಡಿಯುವ ಜನರಧರ್ಮಗಳು

ಆಳುವ ವರ್ಗಗಳು ತಮ್ಮ ಶೋಷಣೆಯನ್ನು ಮುಚ್ಚಿಡಲು, ಸಮರ್ಥಿಸಲು ಶೋಷಣೆಯ ವಿರುದ್ಧ ದುಡಿಯುವ ಜನ ಸಿಡಿದೇಳುವುದನ್ನು ತಪ್ಪಿಸಲು ಧರ್ಮಗಳನ್ನು ಬಳಸಿವೆ. ಧಾರ್ಮಿಕ ಸಿದ್ಧಾಂತಗಳನ್ನು, ಗ್ರಂಥಗಳನ್ನು ಪುರಾಣಗಳನ್ನು ಸೃಷ್ಟಿಸಿವೆ. ಈ ಸ್ಥಾಪಿತ ಧರ್ಮಗಳ ವಿರುದ್ಧ ಹಾಗೂ ಅದನ್ನು ಬಳಸುವ ಆಳುವ ವರ್ಗದ ವಿರುದ್ಧ ದುಡಿಯುವ ವರ್ಗಗಳ ಅತೃಪ್ತಿ, ಹೋರಾಟಗಳು ಕೂಡ ಸಾವಿರಾರು ವರ್ಷಗಳು ಧಾರ್ಮಿಕ ರೂಪದಲ್ಲಿಯೇ ವ್ಯಕ್ತಗೊಂಡಿವೆ. ಇದಕ್ಕೆ ಲೋಕಾಯತ ನ್ಯಾಯ, ಬೌದ್ಧ, ಜೈನ, ಸಿಖ್ ಧರ್ಮಗಳ, ಲಿಂಗಾಯತ, ಹಾಗೂ ಇತರ ಹಲವಾರು ಭಕ್ತಿ ಪಂಥಗಳ ಉದಯವೂ ಉದಾಹರಣೆಯಾಗಿದೆ.



ಹಾಗೆಯೇ ಮಧ್ಯಕಾಲಿನ ಸಮಾಜದ ಅಂತ್ಯದ ಸಮಯದಲ್ಲಿ ಅಂದರೆ 15-16 ನೇ ಶತಮಾನಗಳಿಂದ 19 ನೇ ಶತಮಾನದವರೆಗಿನ ಸಮಯದಲ್ಲಿ ಅಂದಿನ ಹಿಂದೂ ಸಮಾಜದ ಜಾತಿ ಪದ್ಧತಿಯ ಕ್ರೌರ್ಯ, ಅಸಂಖ್ಯವ್ರತಾಚಾರಣೆಗಳ ಹೊರೆಯ ವಿರುದ್ಧ ದುಡಿಯುವ ಜನರ ಮಧ್ಯೆ ವ್ಯಾರಕರಿ, ಮಾನುಭಾವ, ದತ್ತಾತ್ರೇಯ ಪಂಥಗಳೂ ಮುಸ್ಲಿಂ ಸಮಾಜದ ಸುಲ್ತಾನ, ನವಾಬ, ಮೌಲ್ವಿಗಳ ಶೋಷಣೆಯ ಕಟ್ಟಾ ಇಸ್ಲಾಂನ ವಿರುದ್ಧ ಸೂಫಿ ಸಂತರ ಧಾರ್ಮಿಕ ವಿಚಾರಗಳು ಜನಪ್ರಿಯವಾದವು. ತಮ್ಮ ಅನುಭವದ ಸಮಾನತೆಯಿಂದ ಪರಸ್ಪರ ಕೊಡು-ಕೊಳೆ ನಡೆಸಿ ಒಂದರೊಡನೊಂದು ಮಿಳಿತವಾಗುವ ಪ್ರವೃತ್ತಿಯನ್ನು ಪ್ರದರ್ಶಿಸಿದವು. ದುಡಿಯುವ ಜನರ ಪ್ರಾಣ ಮಿತ್ರನಾದ 'ಐಕ್ಯರಂಗ' ಅಂದು ದುಡಿಯುವ ಜನರು ಆಳುವ ವರ್ಗದ ವಿರುದ್ಧ ಬಳಸಿಕೊಂಡ ಈ ಧಾರ್ಮಿಕ ರೂಪಗಳನ್ನು ಆ ಪ್ರಕ್ರಿಯೆಯನ್ನು ಅರ್ಥಮಾಡಿಕೊಳ್ಳಲು ಅನುವಾಗುವಂತೆ ಈ ಲೇಖನವನ್ನು ಪ್ರಕಟಿಸಿದೆ.

ಡಾ. ರಹಮತ್ ತರೀಕೆರೆಯವರು ಹಂಪಿಯ ಕನ್ನಡ ವಿಶ್ವವಿದ್ಯಾನಿಲಯ ಪ್ರಾಧ್ಯಾಪಕರು, ಪ್ರಗತಿಪರ ವಿಚಾರಗಳ ಮೂಲಕ ಕನ್ನಡ ಸಾಂಸ್ಕೃತಿಕ ರಂಗದ ಗಮನ ಸೆಳೆದವರು. ಸೂಫಿ ಪಂಥ ಅವರ ಇತ್ತೀಚಿನ ಅಧ್ಯಯನದ ವಸ್ತು.

ಮಕ್ಕಾ ಪಟ್ಟಣವೂ ಕಾಫಿ ಪ್ರಸಾರದ ಕಥನದಲ್ಲಿ ಮತ್ತೆ ಮತ್ತೆ ಬರುತ್ತವೆ.

ಮಿಶನರಿಯಲ್ಲ, ಸೂಫಿ

ಈ ಸೂಫಿ ಕಾಫಿಯ ಸಂಬಂಧ ನೀಡುವ ಮತ್ತೊಂದು ಸೂಚನೆಯೆಂದರೆ, ದಾದಾ ಹಯಾತನು ಮುಸ್ಲಿಂ ಚರಿತ್ರಕಾರರು ಸಾಮಾನ್ಯವಾಗಿ ಹೇಳುವಂತೆ, ಇಸ್ಲಾಂ ಧರ್ಮದ ಪ್ರಸಾರಕ್ಕೆ ಬಂದ ಮಿಶನರಿಯಲ್ಲ ಆದರೆ ರಹಸ್ಯಪಥಗಳಲ್ಲಿ ಒಂದಾದ ಸೂಫಿಪಂಥಕ್ಕೆ ಸಂಬಂಧಿಸಿದವನು ಎಂಬುದು. ಬಾಬಾಬುಡನಗಿರಿಯ ಏಕಾಂತ ಗುಹೆಗಳು, ಇಲ್ಲಿನ ಗಿಡಮೂಲಿಕೆಗಳು ಕೂಡ ಇದನ್ನು ದೃಢಪಡಿಸುತ್ತವೆ. ಯಾವತ್ತೂ ಧರ್ಮಪ್ರಸಾರ ಮಾಡುವ ಮಿಶನರಿಗಳು ಜನವಸತಿ ತುಂಬಿದ ಕಡೆ ನೆಲೆಸುತ್ತಾರೆ ಹಾಗೂ ಮಸೀದಿಗಳನ್ನು ನಿರ್ಮಿಸುತ್ತಾರೆ. ಉಳ್ಳಾಲದ ಸೈಯದ್ ಮದನಿ, ಕಾಸರಗೋಡಿನ ಮಲಿಕ್‌ಬಿನ್ ದೀನಾರ ಸಮಾಧಿಗಳು ಜನವಸತಿಯ ಊರುಗಳಲ್ಲಿವೆ ಮತ್ತು ತಮ್ಮ ಪಕ್ಕದಲ್ಲಿ ಭಾರತದಲ್ಲೇ ಪ್ರಾಚೀನವಾದ ಮಸೀದಿಗಳನ್ನು ಹೊಂದಿವೆ ಎಂಬುದನ್ನು ಗಮನಿಸಬೇಕು. ದಾದಾ ಹಯಾತನು ತನ್ನ ವಾಸಕ್ಕೆ ಜನ ದೂರವಾದ, ದುರ್ಗಮ ಅರಣ್ಯಗಳ ನಡುವಿರುವ, ಯೋಗಸಾಧನೆ-ಧಾನಗಳಿಗೆ ಸೂಕ್ತವಾದ ಗುಹೆಗಳನ್ನು ಆರಿಸಿಕೊಂಡ ಹಾಗೂ ಮಸೀದಿ ಕಟ್ಟಲಿಲ್ಲ. (ಇಲ್ಲಿನ ಮಸೀದಿಯು 50 ವರ್ಷಗಳಿಗಿಂತಲೂ ಈಚಿನದು) ದಾದಾ ಹಯಾತನ ಸಾಕುಮಗಳ ಹೆಸರಲ್ಲಿರುವ 'ಜುಗಿನಿ' ಎಂಬ ಪದವನ್ನು ಸೂಕ್ಷ್ಮವಾಗಿ ಪರಿಶೀಲಿಸಬೇಕು. ಅದು 'ಯೋಗಿನಿ' ಎಂಬ ಶಬ್ದದ ತದ್ಭವವಾಗಿದೆ. ಮಾಮಾಜುಗಿನಿಯು ತನ್ನ 'ಫಿಲ್ಲಾ' (ಧ್ಯಾನ)ಗಳಿಗೆ ಹೆಸರಾದವಳು.

ಯೋಗ-ಔಷಧ-ದೀರ್ಘಾಯುಷ್ಯ

ಯೋಗಪಂಥಗಳ ಮೂಲಭೂತ ಲಕ್ಷಣವೆಂದರೆ ಏಕಾಂತವಾಸ. 'ಏಕಾಂತೇ ಮಠಿಕಾ ಮಧ್ಯೇ' ಎಂದು ಹಠಪ್ರದೀಪಿಕೆ ಹೇಳುತ್ತದೆ. ಯೋಗದ ಮೂಲಕ ದೃಢಕಾಯವನ್ನು, ವಜ್ರದೇಹವನ್ನು ಹೊಂದುವುದು ಎಂತಲೇ ಯೋಗಮಾರ್ಗದ ಸಂತರು ನೂರಾರು ವರ್ಷ ಬದುಕಿದ ಐತಿಹ್ಯ ಹುಟ್ಟಿರುವುದು. ದಾದಾ ಹಯಾತನ ಹೆಸರೊಳಗಿನ 'ಹಯಾತ್' ಎಂಬ ಅರಬಿಶಬ್ದದ ಅರ್ಥ 'ದೀರ್ಘಾಯುಷ್ಯ'. ಕರ್ನಾಟಕದ ಶಾಡಸಿದ್ಧ 777 ವರ್ಷ ಬದುಕಿದನಂತೆ ; ದತ್ತಪಂಥಕ್ಕೆ ಸೇರಿದ ಚಾಂಗದೇವನೆಂಬ ಯೋಗಿಯೂ 140 ವರ್ಷ ಬದುಕಿದನಂತೆ (ಗದಗಿನ ಸಮೀಪದ ಯಮನೂರಿನಲ್ಲಿರುವ ಚಾಂಗದೇವನಿಗೆ ಮುಸ್ಲಿಮರು 'ಚಾಂಗ್ ಪೀರ್' ಎಂಬ ಹೆಸರಲ್ಲಿ ನಡೆದುಕೊಳ್ಳುತ್ತಾರೆ.) ಈ ದೀರ್ಘಾಯುಷ್ಯದ ಐತಿಹ್ಯಗಳಿಗೆಲ್ಲ ಯೋಗಪಂಥದಲ್ಲಿ ಸಾಂಕೇತಿಕ ಅರ್ಥವಿದೆ. ಬಹುಕಾಲ ಬದುಕುವುದು ಎಂದರೆ ಅಲ್ಲಿ ಔಷಧ ವಿದ್ಯೆ ಇರಲೇಬೇಕು. ಭಾರತದ ನಾಥಸಿದ್ಧರು ಹಾಗೂ ಸೂಫಿಸಂತರು ತಮ್ಮ ಔಷಧಿಜ್ಞಾನಕ್ಕೆ ಹೆಸರಾದವರು. ಈಗಲೂ ಬಾಬಾಬುಡನಗಿರಿ ಔಷಧಿಮೂಲಿಕೆಗಳ ತಾಣವಾಗಿದೆ. ಸಂಜೀವಿನಿ ಹುಡುಕಿಕೊಂಡು ರಾಮಾಯಣದ ಅಂಜನೇಯನು ಈ ಗಿರಿಗಳಿಗೆ ಬಂದ ಪುರಾಣವನ್ನು ಈ ಹಿನ್ನೆಲೆಯಲ್ಲಿಯೇ ಅರ್ಥಮಾಡಿಕೊಳ್ಳಬೇಕು. ಬಹು ಹಿಂದಿನ ಕಾಲದಿಂದಲೂ ಈ ಗಿರಿಗುಹೆಗಳು ಯೋಗಪಂಥಿಗಳ ವಾಸಸ್ಥಾನಗಳಾಗಿವೆ. ಕಾಫಿ ಬೀಜ, ಸೂಫಿ ಪಂಥ, ದೀರ್ಘಾಯುಷ್ಯ (ಹಯಾತ್), ಗಿಡಮೂಲಿಕೆಗಳು, ಗುಹೆಗಳು, 'ಜುಗಿನಿ' ಶಬ್ದ ಇವೆಲ್ಲ ಒಂದೇ ಲೋಕದ ಪರಿಭಾಷೆಗಳು. ಇವು ದಾದಾ ಹಯಾತನು ಖಂಡಿತವಾಗಿಯೂ ಯಾವುದೋ ಮತ್ತೊಂದು ಯೋಗಮಾರ್ಗಿ ಪಂಥದ ಜತೆ ಒಡನಾಟ ಮಾಡಿರುವುದನ್ನು ಬೆರಳುಮಾಡಿ ತೋರಿಸುತ್ತಿವೆ. ಇಲ್ಲಿ ಆ 'ಮತ್ತೊಂದು' ಯೋಗಪಂಥವೆಂದರೆ, ಗುರುದತ್ತ ಪಂಥವಾಗಿದೆ.

ಗುರುಮಾರ್ಗಗಳು

ಸೂಫಿ ಹಾಗೂ ದತ್ತಪಂಥಗಳೆರಡೂ ಗುರುವನ್ನು ನಂಬುವ ಗುರುಮಾರ್ಗಗಳು. ಇವು ಬಾಬಾಬುಡನಗಿರಿಯಲ್ಲಿ ಮಾತ್ರವಲ್ಲ, ಭರತ ಉಪಖಂಡದಲ್ಲೇ ಜತೆ ಜತೆಯಾಗಿ ಬಾಳಿದ ಸುದೀರ್ಘ ಚರಿತ್ರೆಯಿದೆ. ಸೂಫಿಗಳನ್ನು ಭಾರತದ ಇತರ ಯೋಗಮಾರ್ಗಿಗಳ ಜತೆ ಅತ್ಯಂತ ಆಳವಾದ ಕೊಳುಕೊಡೆ ಮಾಡಿದ್ದು ಸಿಂಧ್ ಹಾಗೂ ಬಂಗಾಳ ಪ್ರಾಂತ್ಯಗಳಲ್ಲಿ (ಈ ಕುರಿತು ಭಾರತದ ಖ್ಯಾತ ಸೂಫೀ ವಿದ್ವಾಂಸ ಎಸ್.ಎ.ಎ ರಿಜ್ವಿ ಅವರು ತಮ್ಮ History of Sufism in India ಸಂಪುಟಗಳಲ್ಲಿ ವಿಶ್ಲೇಷಣೆ ನಡೆಸುತ್ತಾರೆ.) ಈ ಕೊಳುಕೊಡೆ ನಡೆದ ಮೂರನೇ ಪ್ರಾಂತ್ಯವೆಂದರೆ ದಕ್ಷಿಣ ಮಹಾರಾಷ್ಟ್ರ ಹಾಗೂ ಕರ್ನಾಟಕಗಳು ಕೂಡುವ ಸೀಮೆ. ಗೋರಖನಾಥ ಮಚ್ಛೇಂದ್ರನಾಥರ ಮೂಲದಿಂದ ಹರಿದುಬಂದ ನಾಥ ಪಂಥದ ತಾತ್ವಿಕಧಾರೆಗಳು ಈ ಸೀಮೆಯಲ್ಲಿ ಮಾನುಭಾವ, ವಾರಕರಿ ಹಾಗೂ ದತ್ತಪಂಥಗಳ ಹುಟ್ಟಿಗೆ ಕಾರಣವಾದವು. ದತ್ತಪಂಥದಲ್ಲಿ ಎರಡು ಶಾಖೆಗಳಿವೆ. ಒಂದು ಜನಾರ್ದನ ಸ್ವಾಮಿಯಿಂದ ಶುರುವಾಗುವ ಮರಾಠೀ ದತ್ತಪರಂಪರೆ; ಎರಡನೆಯದು ಗಾಣಗಾಪುರದ ನರಸಿಂಹದತ್ತನಿಂದ ಬೆಳೆದ ಕರ್ನಾಟಕದ ದತ್ತಪರಂಪರೆ. ಮಹಾರಾಷ್ಟ್ರದಲ್ಲಿ ದತ್ತ ಪರಂಪರೆ ಮೂಡುವ ಕಾಲಕ್ಕೆ ಎರಡು ಮುಖ್ಯ ವಿದ್ಯಮಾನಗಳು ಸಂಭವಿಸಿದ್ದವು. ಒಂದನೆಯದು. ವರ್ಣಾಶ್ರಮಪದ್ಧತಿ ಸಮರ್ಥಿಸುವ ಬ್ರಾಹ್ಮಣರ ಸನಾತನವಾದಕ್ಕೆ ಪ್ರತಿರೋಧವಾಗಿ ಹುಟ್ಟಿದ ಮಾನುಭಾವಿ ಪಂಥವು ಸೂಫಿಗಳ ಜತೆ ಗಾಢಮೈತ್ರಿಯನ್ನು ಸಾಧಿಸಿಬಿಟ್ಟಿತ್ತು. ಈ ಮೈತ್ರಿ ಎಷ್ಟು ಗಾಢವಾಗಿತ್ತೆಂದರೆ, ಮಾನುಭಾವರನ್ನು 'ನೀವು ಮುಸಲ್ಮಾನರಾದಿರಿ' ಎಂದು ಸನಾತನವಾದಿಗಳು ಬಹಿಷ್ಕಾರ ಹಾಕಿದ್ದರು. ಇದಕ್ಕೆ ತಕ್ಕಂತೆ ಮಾನುಭಾವರು ಸೂಫಿಪಂಥಗಳು ಬೆಳೆದ ಆಫ್‌ಘಾನಿಸ್ತಾನದಲ್ಲಿ ತಮ್ಮ ಶಾಖೆಗಳನ್ನು ಹರಡಿ, ಶಿಷ್ಯರನ್ನು ಪಡೆದಿದ್ದರು. ಎರಡನೆಯ ವಿದ್ಯಮಾನವೆಂದರೆ, ಜನಾರ್ದನ ಸ್ವಾಮಿಗೆ ದತ್ತಾತ್ರೇಯನು ದರ್ಶನ ಕೊಟ್ಟಿದ್ದೇ ಸೂಫಿಗುರುವಿನ ರೂಪದಲ್ಲಿ ಎಂಬ ನಂಬಿಕೆ ಹುಟ್ಟಿಕೊಂಡಿದ್ದು.

ದತ್ತಾತ್ರೇಯ ಸನಾತನವಾದಿಯಲ್ಲ

ವೈದಿಕ ಬ್ರಾಹ್ಮಣಪುರಾಣಗಳು ಬಣ್ಣಿಸುವಂತೆ ದತ್ತಾತ್ರೇಯನು ವಿಷ್ಣುವಿನ ಅವತಾರ. ಅತ್ರಿಋಷಿ - ಅನಸೂಯಾ ದಂಪತಿಗಳಲ್ಲಿ ಹುಟ್ಟಿದವನು. ಆದರೆ ಬ್ರಾಹ್ಮಣ ಸನಾತನತೆಯ ಮುಖ್ಯ ಚಿಹ್ನೆಗಳಾದ ಶಿಖೆ ಹಾಗೂ ಜನಿವಾರಗಳನ್ನು ನಿರಾಕರಿಸಿದ ದತ್ತಾತ್ರೇಯನು ಒಬ್ಬ ಯತಿಯಾಗಿದ್ದನು. ಅವನ ಜನಪ್ರಿಯ ಚಿತ್ರವನ್ನು ಗಮನಿಸಬೇಕು. ಅಲ್ಲಿ ನಾಲ್ಕು ನಾಯಿಗಳಿವೆ. ಅವನ್ನು ನಾಲ್ಕು ವೇದಗಳೆಂದು ಹೇಳಲಾಗಿದೆ. ವೇದಗಳನ್ನು ಪ್ರಮಾಣವೆಂದು ಒಪ್ಪಿಕೊಳ್ಳುವುದು ವೈದಿಕ ಬ್ರಾಹ್ಮಣ ದರ್ಶನಗಳ ಮುಖ್ಯ ಲಕ್ಷಣ. ಆದರೆ ದತ್ತಾತ್ರೇಯನು ವೇದಗಳೇ ನಾಯಿಗಳಾಗಿ ತನ್ನನ್ನು ಹಿಂಬಾಲಿಸುವಂತೆ ಮಾಡಿದ್ದಾನೆ. ನಾಯಿಯು ವೈದಿಕ ಸಂಸ್ಕೃತಿಗೆ ಅತ್ಯಂತ ಅಪವಿತ್ರವಾದ ಸಂಕೇತವಾಗಿದೆ. ವರ್ಣಾಶ್ರಮ, ಹುಟ್ಟಿನಿಂದ ಬರುವ ಜಾತಿ ಹಾಗೂ ಅಸ್ಪೃಶ್ಯತೆಗಳನ್ನು ಒಪ್ಪುವುದು ಬ್ರಾಹ್ಮಣ ಸನಾತನವಾದಕ್ಕೆ ಸಮ್ಮತ. ಆದರೆ ಗುರುಪಂಥಗಳಿಗೆ ಈ ನಿಯಮಗಳು ಸಮ್ಮತವಲ್ಲ. ಗುರು ಚಂಡಾಳನಾದರೂ ಯೋಗ್ಯನಾದರೆ ಅವನನ್ನು ಒಪ್ಪಿಕೊಳ್ಳಬೇಕೆಂದು ಗುರುಪಂಥಗಳು ಹೇಳುತ್ತವೆ. ಭಾರತದಲ್ಲಿ ವರ್ಣಾಶ್ರಮವಾದಿ ವೈದಿಕ ತತ್ವಜ್ಞಾನಿಗಳಿಗೆ ಬಲವಾದ ಪ್ರತಿರೋಧವನ್ನು ಈ ಗುರುಪಂಥಗಳು ಒಡ್ಡಿದವು. ಗುರುವಿನ ಮಹತ್ವ, ಜಾತಿನಿರಾಕರಣೆ, ವೇದಗಳನ್ನು ಒಪ್ಪದಿರುವುದು, ಯೋಗಸಾಧನೆ ಮಾಡುವುದು, ಇವು ನಾಥ ಪಂಥದ ಮುಖ್ಯ ಲಕ್ಷಣ. ಆದರಿಂದ ಹುಟ್ಟಿದ ದತ್ತ, ಮಾನುಭಾವ ಪಂಥಗಳು ಇದನ್ನು ಅನುಸರಿಸಿರುವುದು ಸಹಜವಾಗಿದೆ. ನಮ್ಮ ಕಾಲದ ಧೀಮಂತ ಸಂಶೋಧಕರಾದ ಶಂ.ಬಾ. ಜೋಶಿ ತಮ್ಮ 'ಮರಾಠಿ ಸಂಸ್ಕೃತಿ' ಎಂಬ ಕೃತಿಯಲ್ಲಿ ಇದರ ವಿಸ್ತಾರ ಚರ್ಚೆ ಮಾಡುತ್ತಾರೆ. ದತ್ತ ಹಾಗೂ ನಾಥ ಪಂಥಗಳ ಸಮಾನಗುಣಗಳ ಬಗ್ಗೆ ಅವರು ಹೀಗೆ ಬರೆಯುತ್ತಾರೆ.

"ಆತ್ರೇಯ ದತ್ತಮಾರ್ಗನಾಥ ಪಂಥದಂತೆಯೇ ಸರ್ವಸಂಗ್ರಾಹಕ ವೃತ್ತಿಯದಾಗಿದೆ. ಮುಸಲ್ಮಾನರಲ್ಲಿ ದತ್ತಭಕ್ತರಿದ್ದಾರೆ. ಬಾಬಾಬುಡನಗಿರಿಯು ದತ್ತಕ್ಷೇತ್ರವಿದ್ದು, ಅಲ್ಲಿಯ ಪೂಜಾರಿ ಮುಸಲ್ಮಾನನಿದ್ದಾನೆ. ಹಿಂದೂ ಮುಸಲ್ಮಾನರಿಬ್ಬರೂ ಯಾತ್ರೆಗೆ ಹೋಗುತ್ತಾರೆ. ಆಧುನಿಕ ಕಾಲದಲ್ಲಿ ದತ್ತನ ಅವತಾರವೆಂದೇ ಪ್ರಸಿದ್ಧವಾಗಿರುವ ಅಕ್ಕಲಕೋಟೆಯ ಮಹಾರಾಜರು ಮತ್ತು ಹೈದರಾಬಾದ ಪ್ರದೇಶದಲ್ಲಿಯ ಶ್ರೀ ಮಾಸಿಕ ಪ್ರಭುಗಳ ಅನುಯಾಯಿ ವರ್ಗದಲ್ಲಿ ಅನೇಕ ಮುಸಲ್ಮಾನರಿದ್ದಾರೆ. ಈ ಗುರುಮಾರ್ಗ ಅವಧೂತ ನಿರಂಜನ ಪಂಥವಾಗಿದೆ"


ಸೂಫಿ ಹಾಗೂ ದತ್ತ

"ಸರ್ವಸಂಗ್ರಾಹಕವೃತ್ತಿ" ಎಂದರೆ ತನ್ನಂತೆಯೇ ಇರುವ ಪಂಥದ ಜತೆ ಮಿಲನವಾಗುವುದು. ಬಾಬಾಬುಡನಗಿರಿಯಲ್ಲಿ ಬಹುಶಃ ಇಂಥ ಮಿಲನ ಸಂಭವಿಸಿದೆ. ಜನಾರ್ಧನಸ್ವಾಮಿಗೆ ದತ್ತಾತ್ರೇಯನು ಸೂಫಿಸಂತನ ವೇಷದಲ್ಲಿ ಸಾಕ್ಷಾತ್ಕಾರ ಕೊಟ್ಟನು ಎಂಬ ಕತೆಯಲ್ಲೂ ಈ ಮಿಲನದ ಸೂಚನೆಯಿದೆ. ಶಂ. ಬಾ. ಉಲ್ಲೇಖಿಸಿರುವ ಅಕ್ಕಲಕೋಟೆಯ ದತ್ತಾವತಾರಿ ಸ್ವಾಮಿಸಮರ್ಥನು ಅಲ್ಲೇ ಬಗಲಲ್ಲಿರುವ ಶೇಕ್‌ನೂರುದ್ದೀನ್ ಚಿಸ್ತಿ ಎಂಬ ಸೂಫಿಸಂತನ ಸಿಸುಮಗನೆಂದು ಖ್ಯಾತನಾಗಿದ್ದಾನೆ. ದರ್ಗಾದ ಎದುರು ಸ್ವಾಮಿ ಸಮರ್ಥ ಧ್ಯಾನ ಕೂರುತ್ತಿದ್ದ ಒಂದು ಜಾಗವನ್ನು ಜನ ಈಗಲೂ ತೋರಿಸುತ್ತಾರೆ. ಅದೇ ಭಾಗದಲ್ಲಿ ಬರುವ ವಡಬಾಳ (ಸೊಲ್ಲಾಪುರ) ದತ್ತಚೈತನ್ಯನು ದೆಹಲಿಯ ನಾಸಿರುದ್ದೀನ್ ಚಿಸ್ತಿ (ಗುಲಬರ್ಗಿಯ ಸೂಫಿ ಬಂದೇನವಾಜನ ಗುರು) ಸಂಪ್ರದಾಯದವರಲ್ಲಿ ಬರುತ್ತಾನೆ. ಸ್ಟೆಹಾಕ್ ಎಂಬುವರು "Nasiruddin and Adinath, Nizamuddin and Khaniphanath" ಎಂಬ ಲೇಖನದಲ್ಲಿ ಇವರ ಸಂಬಂಧಗಳನ್ನು ವಿಶ್ಲೇಷಿಸುತ್ತಾರೆ. (Flags of fame. ed. Heidrun Bruckner. 1973) ಶಂಬಾ ಉಲ್ಲೇಖಿಸುವ ಹುಮನಾಬಾದಿನ ದತ್ತಮಾರ್ಗಿ ಮಾಣಿಕ ಪ್ರಭುವಂತೂ ಹಾಕುವ ವೇಷದಿಂದ ಹಿಡಿದು ಸಾಕ್ಷಾತ್ ಸೂಫಿಯಂತೆ ಬದುಕಿದವನು. ಅಕ್ಕಲಕೋಟೆಯ ಮತ್ತೊಬ್ಬ ಸೂಫಿಯ ಹೆಸರು ದಾತಾಪೀರ್! ಇದು ದತ್ತಾಪಿರ್‌ನ ರೂಪವಿರಬಹುದು ಅಥವಾ ಬಾಬಾಬುಡನಗಿರಿಯ 'ದಾದಾಪೀರ್' ದತ್ತಾಪೀರ್‌ನ ರೂಪವಿರಬಹುದು (ಚಾಂಗದೇವ 'ಚಾಂಗಪೀರ್' ಮಾಣಿಕಪ್ರಭೂ 'ಮಾಣಿಕಪೀರ್' ಆಗುವುದು ಸಾಮಾನ್ಯ) ಅಕ್ಕಲಕೋಟೆಯ ದಾತಾಪೀರನ ಅಪ್ಪ, ಮೀರ್ ಅಲಂ ನವಾಜನ ದರ್ಗಾ ಹೊಸಪೇಟೆಯಲ್ಲಿದೆ. ಇವನ ಉರುಸಿಗೆ ಅಕ್ಕಲಕೋಟೆಯ ನೂರಾರು ದತ್ತಭಕ್ತರು ಈಗಲೂ ಬರುತ್ತಾರೆ. ಆದ್ದರಿಂದ ಶಂ.ಬಾ. ಹೇಳುವುದರಲ್ಲಿ ಯಾವ ಸೋಜಿಗವೂ ಇಲ್ಲ. ಹಾಗೆಯೇ ಬಾಬಾಬುಡನಗಿರಿಯಲ್ಲಿ ದಾದಾ ಹಯಾತ್ ಪೀರನೂ ದತ್ತಾತ್ರೇಯ ಪಂಥ ಯೋಗಿಯೂ ಜತೆಯಲ್ಲಿದ್ದರು ಎಂಬುದಕ್ಕೂ ಯಾರೂ ಅಚ್ಚರಿಪಡಬೇಕಿಲ್ಲ. ಇದು ಯಾರಿಗೆ ಸೇರಬೇಕು ಎಂಬುದು ಕೋರ್ಟಿನ ಪರಿಭಾಷೆಯಲ್ಲಿ ವಿವಾದ; ಸಂಸ್ಕೃತಿಯ ಪರಿಭಾಷೆಯಲ್ಲಿ ಇದು ಯೋಗಿಕಪಂಥಗಳು ಮತಧರ್ಮಗಳ ಆಚೆ ಹೋಗಿ ನಡೆಸಿದ ತಾತ್ವಿಕ ಕೊಡುಕೊಳೆಯ ಒಂದು ರೂಪಕ. ಸಂಸ್ಕೃತಿಯನ್ನು ಖಾಸಗಿ ಆಸ್ತಿಯ ಹಕ್ಕಿನ ದೃಷ್ಟಿಯಲ್ಲಿ ನೋಡುವವರಿಗೆ ಈ ರೂಪಕಗಳು ಅರ್ಥವೇ ಆಗುವುದಿಲ್ಲ.

ಬಾಬಾಬುಡನಗಿರಿಯಲ್ಲಿ ದಾದಾ ಹಯಾತ್ ಪೀರನೂ ದತ್ತಾತ್ರೇಯ ಪಂಥ ಯೋಗಿಯೂ ಜತೆಯಲ್ಲಿದ್ದರು ಎಂಬುದಕ್ಕೂ ಯಾರೂ ಅಚ್ಚರಿಪಡಬೇಕಿಲ್ಲ. ಇದು ಯಾರಿಗೆ ಸೇರಬೇಕು ಎಂಬುದು ಕೋರ್ಟಿನ ಪರಿಭಾಷೆಯಲ್ಲಿ ವಿವಾದ; ಸಂಸ್ಕೃತಿಯ ಪರಿಭಾಷೆಯಲ್ಲಿ ಇದು ಯೋಗಿಕಪಂಥಗಳು ಮತಧರ್ಮಗಳ ಆಚೆ ಹೋಗಿ ನಡೆಸಿದ ತಾತ್ವಿಕ ಕೊಡುಕೊಳೆಯ ಒಂದು ರೂಪಕ. ಸಂಸ್ಕೃತಿಯನ್ನು ಖಾಸಗಿ ಆಸ್ತಿಯ ಹಕ್ಕಿನ ದೃಷ್ಟಿಯಲ್ಲಿ ನೋಡುವವರಿಗೆ ಈ ರೂಪಕಗಳು ಅರ್ಥವೇ ಆಗುವುದಿಲ್ಲ

ಬಿಜಾಪುರದ ಬಸ್ ನಿಲ್ದಾಣದ ಎದುರುಗಡೆಯಿರುವ ನರಸಿಂಹದತ್ತಮಂದಿರವು ಯೂಸುಫ್ ಆದಿಲಶಾಹಿ ಕಟ್ಟಿಸಿದ್ದು. ಇದು ಅರಮನೆ-ಕೋಟೆಗಳಿಗೆ ಅಂಟಿಕೊಂಡೇ ಇದೆ. ಆದಿಲಶಾಹಿ ಅರಸರು ಗಾಣಗಾಪುರದ ನರಸಿಂಹದತ್ತನ ಗುಪ್ತಭಕ್ತರು: ಅದರಲ್ಲೂ ಎರಡನೇ ಇಬ್ರಾಹಿಂ ಆದಿಲ್ ಶಾಹಿಯ ಮತ್ತೊಬ್ಬ ಗುರು ರುಕ್ಮಾಂಗದ ಪಂಡಿತನೂ ದತ್ತಪಂಥದವನು. ಗಾಣಗಾಪುರದ ದತ್ತಮಂದಿರಕ್ಕೆ ಆದಿಲಶಾಹಿ ಕಾಲದಲ್ಲಿ ನೂರಾರು ಜಹಗೀರುಗಳನ್ನು ಬಿಡಲಾಯಿತು. ನರಸಿಂಹದತ್ತನೂ

ಪುಟ 8 ಕ್ಕೆ



ಚಿತ್ರಕೃಪೆ: ಲಂಕೇಶ್ ಪತ್ರಿಕೆ

ದೀಪ ನೀಡುವ ಹಬ್ಬದ ಹಾಡಿನೊಳಗಿನ ಬೆಳಕೂ ಆರಿಹೋಗುವುದಾದರೆ, ಜನರನ್ನು ಜಾತ್ಯಾತೀತವಾಗಿ ಬೆಸೆಯುವಂಥ ಕೆಲವೇ ತಾಣ ಗಳೂ ತಮ್ಮ ಸಂಜೀವಿನಿ ಶಕ್ತಿ ಕಳೆದುಕೊಳ್ಳುವಂತಾದರೆ, ಈ ದೇಶವು ಕೋಮುವಾದಿಗಳು ಸೃಷ್ಟಿ ಮಾಡಲಿರುವ ಘೋರ ಕತ್ತಲೊಳಗೆ ಉಸಿರುಗಟ್ಟಿ ಹೋಗುವುದು.

ಪುಟ 7 ರಿಂದ


..........ಜನಸಂಸ್ಕೃತಿಯ ಸಮ್ಮಿಲನ

(1378-1455) ದತ್ತಪಂಥಕ್ಕೆ ಆಕರ್ಷಿತನಾಗಿ 'ಅಲಂಪ್ರಭು' ಎಂಬ ಹೆಸರು ಪಡೆದ ಅಹಮದಶಾ ಬಹಮನೀಯೂ (1422-36) ಗುಲಬರ್ಗಿಯ ಸೂಫಿ ಬಂದೇನವಾಜನೂ (1317-1422) ಒಂದೇ ಕಾಲದಲ್ಲಿ ಒಂದೇ ಭಾಗದಲ್ಲಿ ಇದ್ದವರು. ಹೀಗೆ ಸೂಫಿಗಳು ದತ್ತಪಂಥಿಗಳ ಜತೆ, ದತ್ತಪಂಥಿಗಳು ಸೂಫಿಗಳ ಜತೆ ಸಂಧಾನಗಳನ್ನು ನಡೆಸಿದ್ದಾರೆ. ಇದಕ್ಕೆ ಈ ಕಾಲದ ಸಾಕ್ಷಿ ಎಂದರೆ, ಅಕ್ಕಲಕೋಟೆಯಲ್ಲಿ ನಾನು ಭೇಟಿಮಾಡಿದ ಒಬ್ಬ ದತ್ತಪಂಥಿ. ಮಹಾರಾಷ್ಟ್ರ ರಸ್ತೆ ಸಾರಿಗೆ ಇಲಾಖೆಯಲ್ಲಿ ಚಾಲಕನಾಗಿದ್ದ ಈತ 80 ವರ್ಷದ ಮುದುಕ. ಹೆಸರು ಯಾಕೂಬ್ ಸಾಬ್ ಜಮಾದಾರ್.

ಬಾಬಾಬುಡನಗಿರಿಯ ದಾದಾಪೀರ್, ದತ್ತಾತ್ರೇಯ ಎರಡು ವಿರುದ್ಧ ಧರ್ಮಗಳಿಗೆ ಸೇರಿದವರು, ಒಬ್ಬನು ಮತ್ತೊಬ್ಬನನ್ನು ಆಕ್ರಮಿಸಿದ್ದಾನೆ ಎಂಬಂತೆ ಯೋಚಿಸುವುದು ಪರಂಪರೆ ಕುರಿತ ಅಜ್ಞಾನವಾಗಿದೆ.

ಇವು ಪವಿತ್ರ

ಕೆಲವು ಧಾರ್ಮಿಕ ಸ್ಥಾನಗಳಿಗೆ ಆಯಾ ಮತಸ್ಥರು ಮಾತ್ರ ಹೋಗುತ್ತಾರೆ. ಆದರೆ ಮತ್ತೆ ಕೆಲವು ಸ್ಥಾನಗಳಿಗೆ ಎಲ್ಲ ಧರ್ಮ-ಜಾತಿಗಳ ಜನರೂ ನಡೆದುಕೊಳ್ಳುತ್ತಾರೆ. ಸಂತರ ಗದ್ದುಗೆಗಳು-ದರ್ಗಾಗಳು ಎರಡನೇ ಬಗೆಯವು. ಅವುಗಳಲ್ಲಿ ತುಂಬ ಖ್ಯಾತಿ ಪಡೆದಿರುವುದು ಬಾಬಾಬುಡನಗಿರಿ. ಅನೇಕ ದರ್ಗಾಗಳ ಉಸ್ತುವಾರಿ ಮತ್ತು ಆಚರಣೆಗಳಲ್ಲಿ 'ಹಿಂದು'ಗಳ ಪಾತ್ರ ನಿರ್ಣಾಯಕವಾಗಿದೆ. ಅಷ್ಟೂರಿನ (ಬೀದರ್) ಶಾ ಅಲಮಪ್ರಭುವಿನ ಉರುಸನ್ನು ಒಬ್ಬ ಜಂಗಮ ಬಂದು ಆರಂಭಿಸುತ್ತಾನೆ. ಯಮನೂರಿನ ಚಾಂಗದೇವ, ಇಳಕಲ್ಲಿನ ಮುರ್ತುಜಾಖಾದ್ರಿ, ಬೀಳಗಿಯ ಹಸನಡೋಂಗ್ರಿ ಇವರ ದರ್ಗಾಗಳು 'ಹಿಂದೂ'ಗಳ ಕೈಯಲ್ಲಿವೆ. ಯಾವತ್ತೂ ದರ್ಗಾ-ಗದ್ದುಗೆಗಳಿಗೆ ನಡೆದುಕೊಳ್ಳುವ ಜನರಿಗೆ, ಸಂತರ 'ಮೂಲ' ಚರಿತ್ರೆ ಬೇಕಾಗಿಲ್ಲ. ಅವನು ಯಾವ ಪಂಥಕ್ಕೆ, ದೇಶಕ್ಕೆ ಸೇರಿದವನು ಎಂಬುದೂ ಅಪ್ರಸ್ತುತ. ಅವರಿಗೆ ಗೊತ್ತಿರುವುದು ಅವರ ಮಹಿಮೆ ಬಣ್ಣಿಸುವ ಪುರಾಣಗಳು ಮಾತ್ರ. ಅವರಿಗೆ ಗೊತ್ತಿರುವುದು ಕಷ್ಟ ಬಂದಾಗ ಹರಕೆ ಕಟ್ಟಿಕೊಳ್ಳುವುದು ಮತ್ತು ಅವಕಾಶ ಸಿಕ್ಕಾಗ ಅದನ್ನು ತೀರಿಸುವುದು. ಅವರ ಭಕ್ತಿಯ ಸ್ವರೂಪದಲ್ಲಿ ಮೂಲ ಹುಡುಕುವ ಉದ್ದೇಶಗಳಿಲ್ಲ. ಇದನ್ನು 'ಸಹಜ ಸೆಕ್ಯುಲರಿಸಂ' ಎಂದು ಕರೆಯಬಹುದು. ಪ್ರಜ್ಞಾಪೂರ್ವಕವಾಗಿ, ವಿಚಾರಕ್ಕೆ ಬದ್ಧನಾಗಿ ಸೆಕ್ಯುಲರ್ ಆಗಿರುವುದಕ್ಕಿಂತ, ಧಾರ್ಮಿಕ ಶ್ರದ್ಧೆಯಿದ್ದೂ ಸೆಕ್ಯುಲರ್ ಆಗಿರುವುದು ಬೇರೆಯಾದುದು. ಮಳೆ ಸುರಿವಾಗ ಓಡಿಹೋಗಿ ಮರದಡಿ ನಿಲ್ಲುವವರಿಗೆ, ಇದು ಯಾವ ಜಾತಿಯ ಮರ, ನನ್ನ ಬಗಲಿಗೆ ನಿಂತವರು ಯಾವ ಮತದವರು ಎಂಬ ಪ್ರಶ್ನೆಗಳೇ ಏಳುವುದಿಲ್ಲ. 'ನಮ್ಮ ದೇವರಿಗೆ ನೀವೇಕೆ ಬಂದಿರಿ?' ಎಂದು ಯಾರೂ ಕೇಳುವುದಿಲ್ಲ. ಜನಸಾಮಾನ್ಯರ ಸ್ವಭಾವವೇ ಅದು. ಇಂಥವರನ್ನು 'ಹಿಂದುಗಳು' 'ಮುಸ್ಲಿಮರು' ಎಂಬ ಪರಿಭಾಷೆಯಲ್ಲಿ ಕರೆಯುವುದೇ ಅಪಚಾರ. ಅವರು ಕೇವಲ ಜನರು. ಬಾಬಾಬುಡನಗಿರಿ ಇಂಥ ಕೇವಲ ಜನರು ನಡೆದುಕೊಳ್ಳುವ ನಮ್ಮ ನಾಡಿನ ಕೆಲವೇ ಜಾಗಗಳಲ್ಲಿ ಒಂದು. ಈ ಕಾರಣಕ್ಕಾಗಿಯೇ ಇದು ಪವಿತ್ರ. ಈ ಕೇವಲ ಜನ, ಸಾಮಾನ್ಯವಾಗಿ ಸಮಾಜದ ಕೆಳಸ್ತರದವರು. ಬಾಳಿನ ಕಷ್ಟಗಳ ಹೊಡೆತದಲ್ಲಿ ನಲುಗಿದವರು. ನಮ್ಮ ಆರ್ಥಿಕ-ಸಾಮಾಜಿಕ ವ್ಯವಸ್ಥೆಯೂ ಅವರ ಈ ಸ್ಥಿತಿಗೆ ಕಾರಣ. ದರ್ಗಾಗಳಿಗೆ ಬರುವ ಜನರ ಹಿನ್ನೆಲೆಯನ್ನು ಮೆಲ್ಲಗೆ ಬಿಡಿಸುತ್ತ ಹೋದರೆ, ಮಾನವೀಯ ಸುಖಸಂಕಟಗಳ ಮಹಾಭಾರತವೇ ದರ್ಶನವಾಗುತ್ತದೆ. ಕಷ್ಟಸಾಗರದಲ್ಲಿ ಮುಳುಗಿರುವಾಗ ಇಂಥ ದೈವಗಳನ್ನು ಆಸರೆಗಾಗಿ ನಂಬಿ ಚೈತನ್ಯ ಪಡೆದುಕೊಂಡ ಜನ, ದರ್ಗಾಗಳಿಗೆ ಕೃತಜ್ಞತೆ ಸಲ್ಲಿಸಲು ಬಂದವರು; ಧರ್ಮನಿಷ್ಠೆಯನ್ನು ಪ್ರದರ್ಶಿಸಲು ಬಂದವರಲ್ಲ. ಇವರಿಗೆ ನಿಜವಾಗಿಯೂ ಜಾತಿಮತಗಳಿಲ್ಲ. ಇಂಥ ಜನರ ಚೈತನ್ಯ ತಾಣಗಳಿರುವ ಕಾರಣಕ್ಕೇ ಈ ದರ್ಗಾಗಳು ಪವಿತ್ರವಾದವು. ಈ ದೇಶದಲ್ಲಿ ನೂರಾರು ವರ್ಷಗಳಿಂದ ಅನೇಕ ಪಂಥಗಳು ಸನಾತನ ವಾದಗಳನ್ನು ಧಿಕ್ಕರಿಸಿ ಮಾಡಿದ ತಾತ್ವಿಕ ಸಹಜೀವನದ ಸಂಕೇತಗಳಿವು. ಭಾರತದಂಥ ಬಹುಧರ್ಮೀಯ, ಬಹುಭಾಷೀಯ, ಬಹುಸಂಸ್ಕೃತಿಯ ನಾಡಿನಲ್ಲಿ ಇವು ಇರುವುದು ಸಾಂಸ್ಕೃತಿಕ ಅಗತ್ಯವಾಗಿದೆ. ಈ ಕಾರಣಕ್ಕಾಗಿಯೂ ಇವು ಪವಿತ್ರವಾದವು.



ಶಾಂತಿ, ಸಾಮರಸ್ಯ ಕೆಡಿಸುವ ದಾದಾಗಿರಿ

ನೈತಿಕ ಹಕ್ಕಿಲ್ಲ

ಈ ಪವಿತ್ರ ಜಾಗಗಳನ್ನು ಯಾವುದೇ ಧರ್ಮದ ಮತೀಯವಾದಿಗಳು ಕೈಹಾಕಿ ಅಪವಿತ್ರಗೊಳಿಸಲು ಬಿಡಬಾರದು. ಮತೀಯವಾದಿಗಳಿಗೆ, ಸನಾತನವಾದಿಗಳಿಗೆ ಇಲ್ಲಿ ಕೈಹಾಕಲು ನೈತಿಕ ಹಕ್ಕೇ ಇಲ್ಲ. ಯಾಕೆಂದರೆ ಈ ಸಂತರು ಚರಿತ್ರೆಯಲ್ಲಿ ಇವರ ಪೂರ್ವಜರು ಕೊಟ್ಟ ಕಿರುಕುಳ ಅನುಭವಿಸಿ, ಅವರ ವಿರುದ್ಧ ಸೆಣಸಾಡಿ ಬಾಳಿದವರು; ಇವು ನಮ್ಮ ಮತದವು ಎಂದು ಹೇಳಲು ಸನಾತನವಾದಿಗಳಿಗೆ ಯಾಕೆ ನೈತಿಕ ಹಕ್ಕಿಲ್ಲವೆಂದರೆ, ವೈಯಕ್ತಿಕವಾಗಿ ಇವರು ಎಂದೂ ಭಕ್ತಿಯಿಂದ ನಡೆದುಕೊಳ್ಳುವವರಲ್ಲ ; ರಾಜಕೀಯದ ಆಟಗಳಿಗೆ ಬಳಸಿಕೊಳ್ಳುವವರು. ಇವರಿಗೆ ನಮ್ಮ ದೇಶದ ಬಹುಮುಖ ಪರಂಪರೆ ಸೃಷ್ಟಿಸಿದ ಕೂಡು ಸಂಸ್ಕೃತಿಯ ಅರಿವೇ ಇಲ್ಲ. ಇವರಿಗೆ ಯಾಕೆ ಹಕ್ಕಿಲ್ಲವೆಂದರೆ - ಜನರ ನಿಜವಾದ ಕಷ್ಟಗಳಿಗಿಂತ ವಿಚಿತ್ರವಾಗಿ ವ್ಯಾಖ್ಯಾನಿಸಲಾಗುವ 'ಧರ್ಮ'ವೇ ಮುಖ್ಯ. ಜನರ ಕಷ್ಟಗಳಿಗೆ ಕಾರಣವಾಗಿರುವ ವ್ಯವಸ್ಥೆಯನ್ನು ಮುಖಾಮುಖಿ ಮಾಡಬೇಕು, ಎಲ್ಲ ಜನರೂ ಸುಖವಾಗಿ ಸಮಾನವಾಗಿ ಬದುಕಬಲ್ಲ ನಾಡನ್ನು ಕಟ್ಟಬೇಕು ಎಂಬ ಕನಸೇ ಇವರಿಗೆ ಇಲ್ಲ. ಹೀಗಾಗಿ ಇವರು ತಂತಮ್ಮ ಧರ್ಮದ ಹಾಗೂ ಎಲ್ಲ ಧರ್ಮದ ಅಸಹಾಯಕ ಜನರ ಶತ್ರುಗಳು. ಈ ದೇಶ ಮಸೀದಿ-ಪೀಠಗಳ ಹೆಸರಲ್ಲಿ ಜಗಳಮಾಡಿಕೊಂಡೇ ಇರಬೇಕು. ಒಂದಾಗಿರಬಾರದು ಎಂದು ಬಯಸುವುದು ದೇಶದ್ರೋಹವಲ್ಲದೆ ಮತ್ತೇನು? ಆದ್ದರಿಂದ ಈ ನಾಡನ್ನು ನಾಡಿನ ಜನರನ್ನು ನಿಜವಾಗಿ ಪ್ರೀತಿಸುವವರು, ಇಂಥ ಪವಿತ್ರತಾಣಗಳನ್ನು ಇಟ್ಟುಕೊಂಡು ರಕ್ತಹರಿಸಲು ನಿಂತಿರುವ ರಾಜಕೀಯದ ಸೊಲ್ಲನ್ನು ಅಡಗಿಸಲೇಬೇಕಾಗಿದೆ.

> ಈ ಪವಿತ್ರ ಜಾಗಗಳನ್ನು ಯಾವುದೇ ಧರ್ಮದ ಮತೀಯವಾದಿಗಳು ಕೈಹಾಕಿ ಅಪವಿತ್ರಗೊಳಿಸಲು ಬಿಡಬಾರದು. ಮತೀಯವಾದಿಗಳಿಗೆ, ಸನಾತನವಾದಿಗಳಿಗೆ ಇಲ್ಲಿ ಕೈಹಾಕಲು ನೈತಿಕ ಹಕ್ಕೇ ಇಲ್ಲ. ಯಾಕೆಂದರೆ ಈ ಸಂತರು ಚರಿತ್ರೆಯಲ್ಲಿ ಇವರ ಪೂರ್ವಜರು ಕೊಟ್ಟ ಕಿರುಕುಳ ಅನುಭವಿಸಿ, ಅವರ ವಿರುದ್ಧ ಸೆಣಸಾಡಿ ಬಾಳಿದವರು; ಇವು ನಮ್ಮ ಮತದವು ಎಂದು ಹೇಳಲು ಸನಾತನವಾದಿಗಳಿಗೆ ಯಾಕೆ ನೈತಿಕ ಹಕ್ಕಿಲ್ಲವೆಂದರೆ, ವೈಯಕ್ತಿಕವಾಗಿ ಇವರು ಎಂದೂ ಭಕ್ತಿಯಿಂದ ನಡೆದುಕೊಳ್ಳುವವರಲ್ಲ ; ರಾಜಕೀಯದ ಆಟಗಳಿಗೆ ಬಳಸಿಕೊಳ್ಳುವವರು.

ಬಿಕ್ಕಟ್ಟಿನಲ್ಲಿ ಸನಾತನವಾದಿಗಳ

ಬ್ರಾಹ್ಮಣ ಸನಾತವಾದ ಇಂದು ಬಿಕ್ಕಟ್ಟಿನಲ್ಲಿದೆ. ಅದು ತನಗೆ ಬಿಕ್ಕಟ್ಟು ಬಂದಾಗಲೆಲ್ಲ ತನ್ನ ತೆಕ್ಕೆಗೆ ಉಳಿದ ಎಲ್ಲ ಜಾತಿಯ ಜನರನ್ನು 'ಹಿಂದು'ಗಳು ಎಂದು ಕರೆದು ಕೂಡಿಸಿ, ಇದು ನಿಮ್ಮ ಬಿಕ್ಕಟ್ಟು ಎಂದು ಒಪ್ಪಿಸುತ್ತದೆ; ಅವರಿಗೊಬ್ಬ ಶತ್ರುವನ್ನು ನಿರ್ಮಿಸಿಕೊಡುತ್ತದೆ; ಆ ಶತ್ರುವಿನಿಂದ ರಕ್ಷಿಸುವ ಜವಾಬ್ದಾರಿಯನ್ನು ತಾನು ಹೊತ್ತುಕೊಳ್ಳುತ್ತದೆ. ದತ್ತಪೀಠ ವಿಮೋಚನೆಗೆ ಮುಂದಾಗಿರುವುದು ಇಂಥ ಬ್ರಾಹ್ಮಣ ಸನಾತನವಾದ. ಇದು ಆಳದಲ್ಲಿ ತನ್ನ ವರ್ಗದ ಹಿತಗಳನ್ನು ಇಟ್ಟುಕೊಂಡಿದೆ. ತನಗೆ ಹಿತಮಾಡುವ ರಾಜಕೀಯ ಪಕ್ಷಕ್ಕೆ

ಇಟ್ಟುಕೊಂಡಿದೆ. ತನಗೆ ಹಿತಮಾಡುವ ರಾಜಕೀಯ ಪಕ್ಷಕ್ಕೆ ಜನರ ಓಟು ದೊರಕಿಸುವ ಉದ್ದೇಶ ಇದರಲ್ಲಿ ಅಡಗಿದೆ. ಮುಸ್ಲಿಂ ಮೂಲಭೂತವಾದ ಕೂಡ ಬೇರೊಂದು ಬಗೆಯ ಬಿಕ್ಕಟ್ಟಿನಲ್ಲಿದೆ. ಈ ದೇಶದ ಅನೇಕ ಪ್ರಾದೇಶಿಕ ಸಂಸ್ಕೃತಿಗಳ, ಪಂಥಗಳ ಭಾಗವಾಗಿ ಬೆಳೆದಿರುವ ಮುಸ್ಲಿಮರನ್ನೆಲ್ಲ ಅರಬ್ ಇಸ್ಲಾಮಿನ ಏಕರೂಪಕ್ಕೆ ತಂದು ಹೊಂದಿಸಬೇಕು. ಎಂಬುದು ಅದರ ಗುಪ್ತ ಕಾರ್ಯಕ್ರಮ. ಎಂತಲೇ ಅದು ಸಂತ ದರ್ಗಾಗಳಿಗೆ ಮುಸ್ಲಿಮರು ನಡೆದುಕೊಳ್ಳುವುದನ್ನು 'ಖಬರ್ ಪರಿಸ್ತಿ' (ಸಮಾಧಿಪೂಜೆ) ಎಂದು ವ್ಯಂಗ್ಯ ಮಾಡುತ್ತದೆ. ಇದು ಹಿಂದುಗಳ ವಿಗ್ರಹಾರಾಧನೆಗೆ ಹತ್ತಿರವಾದುದು ಎಂದು ವಾದಿಸುತ್ತದೆ. ಯಾವ ಕಾರಣಕ್ಕಾಗಿ ಬಡವರು, ಹೆಂಗಸರು ಈ ದರ್ಗಾ ಸಂಸ್ಕೃತಿಯನ್ನು ನಿರ್ಮಿಸಿಕೊಳ್ಳಬೇಕಾಯಿತು ಎಂಬ ಪ್ರಶ್ನೆಯನ್ನು ಕೇಳಿಕೊಂಡರೆ, ಕಂಗೆಡುವಂಥ ಉತ್ತರ ಸಿಗುತ್ತದೆ. ಬಾಬ್ರಿ ಮಸೀದಿಯಷ್ಟು ಬಾಬಾಬುಡನಗಿರಿ ಪ್ರಕರಣ ಅವರಿಗೆ ಕಾಡುವ ಸಂಗತಿಯಲ್ಲ. ಇನ್ನು ದರ್ಗಾ ಅಮುಖ್ಯ. ಜನರ ಸಂಸ್ಕೃತಿಯೂ ಅಮುಖ್ಯ. ವಹಿವಾಟಿನಿಂದ ಬರುವ ಉತ್ಪನ್ನವಷ್ಟೇ ಮುಖ್ಯ.

ಹೀಗಾಗಿ ಸದ್ಯ ಬಾಬಾಬುಡನಗಿರಿ ಹಿಂದೂ ಮತೀಯವಾದಿಗಳ ರಾಜಕೀಯ ಆಟಕ್ಕೆ ಮೈದಾನವಾಗಿದೆ. ಮುಸ್ಲಿಂ ಸನಾತನವಾದಿಗಳ ತಿರಸ್ಕಾರಕ್ಕೆ ಸಿಕ್ಕ ಅನಾಥ ಮಗುವಾಗಿದೆ. ದರ್ಗಾ ಅದರ ಉಸ್ತುವಾರಿದಾರರಿಗೆ ವರಮಾನ ತರುವ ಸೊತ್ತಿನ ರಕ್ಷಣೆಯಾಗಿದೆ. ಈ ಮೂರು ಒತ್ತಡಗಳಲ್ಲಿ ಗಿರಿಗೆ ನಡೆದುಕೊಳ್ಳುವ ಲಕ್ಷಾಂತರ ಮುಗ್ಧಜನ ಬಾಯಿ ಕಳೆದುಕೊಂಡವರಾಗಿದ್ದಾರೆ. ಇಂಥ ಬಾಯಿ ಕಳೆದುಕೊಂಡ ಜನರ ಪರವಾಗಿ ಸೇರಿಕೊಳ್ಳುವುದು ಈಗಿನ ಅಗತ್ಯವಾಗಿದೆ. ಈ ಕೆಲಸವನ್ನು ನಾಡಿನ ಆರೋಗ್ಯವಂತ ಮನಸ್ಸುಗಳು ಶುರುಮಾಡಿವೆ ಕೂಡ. ದೀಪ ನೀಡುವ ಹಬ್ಬದ ಹಾಡಿನೊಳಗಿನ ಬೆಳಕೂ ಆರಿಹೋಗುವುದಾದರೆ, ಜನರನ್ನು ಜಾತ್ಯಾತೀತವಾಗಿ ಬೆಸೆಯುವಂಥ ಕೆಲವೇ ತಾಣಗಳೂ ತಮ್ಮ ಸಂಜೀವಿನಿ ಶಕ್ತಿ ಕಳೆದುಕೊಳ್ಳುವಂತಾದರೆ, ಈ ದೇಶವು ಕೋಮುವಾದಿಗಳು ಸೃಷ್ಟಿ ಮಾಡಲಿರುವ ಘೋರ ಕತ್ತಲೊಳಗೆ ಉಸಿರುಗಟ್ಟಿ ಹೋಗುವುದು.

ಕೃಪೆ: 'ಹೊಸತು'

> ಮಲೆನಾಡಿನ ದೀಪಾವಳಿ ಆಚರಣೆಗಳಲ್ಲಿ ಒಂದಾದ 'ಅಂಟಿಕೆ-ಪಂಟಿಕೆ'ಯಲ್ಲಿ ಬಾಬಬುಡನ ಸ್ವಾಮಿ ಸೇರಿಹೋಗಿದ್ದಾರೆ.
>
> *ಎಲ್ಲಾ ದೇವರಿಗೆ ಏನು ಪೂಜೆನಾದರೆ!*
> *ಹಣ್ಣುಕಾಯಿಗಳೇ ಬಲುಪೂಜೆ*
> *ಬುಡ್ಡಾಗಿರಿ ಸ್ವಾಮಿಗೆನಾಪೂಜೆನಾದರೆ!*
> *ಲೋಬಾನದೊಗೆಯೇ ಬಲುಪೂಜೆ*
> *ಲೋಬಾನದೊಗೆಯೇ ಬಲುಪೂಜೆನಾದರೆ,*
> *ಸಕ್ಕರೆಸೇರುಗಳೇ ಬಲುಪೂಜೆ*
>
> 'ದೀಪ ನೀಡುವುದು' ಎಂದು ಕರೆಯಲಾಗುವ ಈ ಆಚರಣೆಯ ವಿಶೇಷವೆಂದರೆ, ಅಮಾವಾಸ್ಯೆಯ ಕಗ್ಗತ್ತಲಲ್ಲಿ ಮೇಳದವರು ಎಲ್ಲ ದೈವಗಳ ಎಲ್ಲ ಜಾತಿ-ಧರ್ಮಗಳ ಜನರ ಮೇಲೆ ಹಾಡು ಹೇಳುತ್ತ, ಮನೆಮನೆಗೆ ಹೋಗಿ ದೀಪ ಮುಟ್ಟಿಸುವುದು, ತಾವು ತಂದ ದೀಪದಿಂದ ಆಯಾ ಮನೆಯವರ ಮನೆಯ ದೀಪ ಹೊತ್ತಿಸುವುದು



ಪುಟ 5ರಿಂದ

ಪಶ್ಚಿಮ ಬಂಗಾಳದಲ್ಲಿ.............

ನಾಲ್ಕೂ ಸ್ಥಾನಗಳನ್ನು ಗೆಲ್ಲುವ ಬಗ್ಗೆ ವಿವರವಾದ ಚರ್ಚೆ ನಡೆಯಿತು ಎಂದು ಪತ್ರಿಕಾ ಸಮ್ಮೇಳನದಲ್ಲಿ ಹಾಜರಿದ್ದ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಅನಿಲ್ ಬಿಸ್ವಾಸ್ ತಿಳಿಸಿದರು.

ಕಾರ್ಯಕ್ರಮಗಳು

ಎಡರಂಗ ಜನಗಳ ನಡುವೆ ಇನ್ನೂ ಆಳವಾಗಿ ಸತತ ಸಂವಾದ ನಡೆಸುವ ಪ್ರಯತ್ನವನ್ನು ಇನ್ನಷ್ಟು ಸುದೃಢಗೊಳಿಸಲು ಮುಂಬರುವ ವಾರಗಳಲ್ಲಿ ಕೆಲವು ಕಾರ್ಯಕ್ರಮಗಳನ್ನು ಯೋಜಿಸಿದೆ. ಇವೆಲ್ಲಾ ಜನಪರವಾಗಿದ್ದು ಬೃಹತ್ ಪ್ರಮಾಣದಲ್ಲಿ ಜನಗಳು ಭಾಗವಹಿಸುವ ನಿರೀಕ್ಷೆಯಿದೆ. ಈಗಾಗಲೇ ಆಗಸ್ಟ್ 6 ರಂದು ರಾಜ್ಯಾದ್ಯಂತ 'ಹಿರೋಶಿಮಾ ದಿನಾಚರಣೆ' ನಡೆಸಲಾಯಿತು. ಆಗಸ್ಟ್ 7 ರಂದು ಆಕಾಶವಾಣಿ, ದೂರದರ್ಶನ ಕೇಂದ್ರಗಳ ಎದುರು ಭಾರೀ ಮತಪ್ರದರ್ಶನ ನಡೆದಿವೆ.

ಆಗಸ್ಟ್ 13 ರಂದು ಕಾಂಗ್ರೆಸ್‌ನ ಅರೆ-ಫ್ಯಾಸಿಸ್ಟ್ ಆಳ್ವಿಕೆಯಲ್ಲಿ ನಡೆದ ಕೊಲೆ-ಸುಲಿಗೆಗಳ ನೆನಪಿನ ದಿನವನ್ನು ಹಾಗೂ ಆಗಸ್ಟ್ 15 ರಂದು ದೇಶದ ಐಕ್ಯತೆ-ಸಮಗ್ರತೆಯ ರಕ್ಷಣೆಗೆ 'ಮಾನವ ಸರಪಳಿ' ಕಾರ್ಯಕ್ರಮಕ್ಕೆ ಸಿದ್ಧತೆನಡೆಯುತ್ತಿದೆ. ಆಗಸ್ಟ್ 31 ರಂದು ಐತಿಹಾಸಿಕ ಆಹಾರ ಆಂದೋಲನದ 40ನೇವರ್ಷದ ಸ್ಮರಣೆಯ ಕಾರ್ಯಕ್ರಮವಿರುತ್ತದೆ. ಕೃತಕ ಅಭಾವ ಸೃಷ್ಟಿಸಿ ಜನಗಳು ಹಸಿವಿನಿಂದ ಸಾಯುತ್ತಿದ್ದಾಗ ಅದರ ವಿರುದ್ಧ ಪಶ್ಚಿಮ ಬಂಗಾಳದಾದ್ಯಂತ ನಡೆದ ಚಳುವಳಿ ಅದು. ಆಗಸ್ಟ್ 31 ರಂದು ಪ್ರತಿಭಟನೆ ನಡೆಸುತ್ತಿದ್ದವರ ಮೇಲೆ ಗೋಳಿಬಾರು ನಡೆಸಿ ಸುಮಾರು ನೂರು ಮಂದಿಯನ್ನು ಕೊಲ್ಲಲಾಗಿತ್ತು. ಸೆಪ್ಟೆಂಬರ್ 1 ರಂದು ವಿದ್ಯಾರ್ಥಿ ಹುತಾತ್ಮರ ನೆನಪಿನ ದಿನಾಚರಣೆ-ಕಾಂಗ್ರೆಸ್ ದುರಾಡಳಿತದಲ್ಲಿ ಪ್ರತಿಭಟನಾ ಮತಪ್ರದರ್ಶನಗಳಲ್ಲಿ ಪೋಲೀಸರ ಗುಂಡುಗಳಿಗೆ ಬಲಿಯಾದ ವಿದ್ಯಾರ್ಥಿಗಳನ್ನು ನೆನಪಿಸಿಕೊಳ್ಳಲಾಗುವುದು.

ಪುಟ 3 ರಿಂದ

.... ಸೇವೆಯನು ಕೊಡೊ ಹರಿಯೇ

14 ರ ಮಧ್ಯಾಹ್ನದ 'ಈ ಸಂಜೆ' ಯ ವರದಿ ಹೀಗಿದೆ - ಜನತಾದಳ(ಸಂಯುಕ್ತ), ಲೋಕ ಶಕ್ತಿ ಮತ್ತು ಸಮತಾ ಪಕ್ಷಗಳು ರಾಷ್ಟ್ರೀಯ ಪ್ರಜಾಸತ್ತಾತ್ಮಕ ಮೈತ್ರಿಕೂಟ (ಎನ್‌ಡಿಎ) ಜೊತೆ ವಿಲೀನವಾಗುತ್ತದೆ ಎಂದು ಲೋಕಶಕ್ತಿ ರಾಷ್ಟ್ರೀಯ ಅಧ್ಯಕ್ಷ ರಾಮ ಕೃಷ್ಣ ಹೆಗಡೆ ಅವರು ಹೇಳಿದ್ದಾರೆ, ಇನ್ನೊಂದೆಡೆ ಈ ಬಗ್ಗೆ ಯಾವುದೇ ಸ್ಪಷ್ಟ ನಿರ್ಧಾರವಾಗದಿದ್ದರೆ ಪರ್ಯಾಯವಾಗಿ ಆಲೋಚಿಸಲು ಸಿದ್ಧ ಎಂದು ಮುಖ್ಯಮಂತ್ರಿ ಜೆ.ಎಚ್.ಪಟೇಲ್ ತಿಳಿಸಿದ್ದು, ಈ ಬಗ್ಗೆ ಗೊಂದಲ ಏರ್ಪಟಿದೆ.

ಅಂದರೆ ಜೆ.ಎಚ್.ಪಟೇಲರು ಅವರ ಬಣಕ್ಕೆ ತ್ರಿಶಂಕು ಸ್ಥಿತಿಯ ಮೋಕ್ಷ ದೊರಕುವುದೆಂದು? ಆಗಲೂ ಕೂಡ ಎಷ್ಟು ಸ್ಥಾನ? ಇನ್ನೂ ಬಗೆಹರಿಯದಾಗಿದೆ. ಜೆ.ಎಚ್.ಪಟೇಲರ ಬಣದ ಆತಂತಕ್ಕೆ ಇನ್ನೂ ತೆರೆಬಿದ್ದಿಲ್ಲ.

"ದೆಹಲಿಯಲ್ಲಿ ಯಾವ ತೀರ್ಮಾನವಾದರೂ ಕೊನೆಯಾಗುವುದಿಲ್ಲ ಏಕೆಂದರೆ ಹೆಗ್ಗಡೆ ದೆಹಲಿಯಿಂದ **ಬಂದಿಳಿಯುತ್ತಿದಂತೆ ವಿಮಾನ ನಿಲ್ದಾಣದಲ್ಲಿಯೇ ಲೋಕಶಕ್ತಿ ಕಾರ್ಯಕರ್ತರ ದಾಂಧಲೆ"(ಪತ್ರಿಕೆಗಳ ವರ್ಣನೆ)**

ತೆಂಗಿನಮರದ ಚಿಹ್ನೆಯಲ್ಲಿಯೇ ಸ್ಪರ್ಧಿಸಬೇಕು, ಲೋಕಶಕ್ತಿಯನ್ನು ಜನತಾದಳದೊಡನೆ ವಿಲೀನ ಮಾಡಬಾರದು ಎಂದು ಅವರ ಹೇಳಿಕೆ. ಇದರ ಹಿಂದೆ ಜೀವರಾಜ ಆಳ್ವರ ನೇರ ಕೈವಾಡ. ಇನ್ನು ಶಕ್ತಿಯೇ ಇಲ್ಲದ ಲೋಕಶಕ್ತಿಯ ಕಾರ್ಯಕರ್ತರ ಮಾತೆ ಹೀಗಾದರೆ ಇನ್ನು ವಿರಾಟ್ ಶಕ್ತಿಸ್ವರೂಪದ ಸಂಘದ ಕಾರ್ಯಕರ್ತರು ಈ ಮೈತ್ರಿ ಕೂಟದ ಅಭ್ಯರ್ಥಿಗಳನ್ನು ಗೆಲ್ಲಿಸಲು ಕೆಲಸ ಮಾಡುವರೋ ಅಥವಾ----- (ಈಗಾಗಲೇ ಆರೆಸ್ಸೆಸ್‌ನ ಕನ್ನಡ ಪತ್ರಿಕೆ "ವಿಕ್ರಮ" ಈ ಸೂಚನೆಯನ್ನು ಸಾಕಷ್ಟು ಸ್ಪಷ್ಟವಾಗಿಯೇ ನೀಡಿದೆ).

ಕುತೂಹಲಭರಿತ,ವಿಷಾದಮಯ ಕಥಾನಕವನ್ನು ತೆರೆಯ ಮೇಲೆ ನೋಡಿ ನೀತಿಪಾಠ ಕಲಿಯಿರಿ, ಮರೆಯಲಾಗದಂತಹ ನೀತಿಪಾಠ.

ಪಾಲಕಿಯಲ್ಲಿ ರಾಜಕೀಯ ಜಾಗೃತಿಯ ಉತ್ಸವ

ಜಾತಿ ಭೇದದ ಸಂಕೋಲೆಗಳನ್ನು ಮುರಿದ ಸಹಜೀವನ

ವಾಜಪೇಯಿ ಸರಕಾರ ೧೩ ತಿಂಗಳ 'ಸಾಧನೆ'ಗಳ ವ್ಯಂಗ್ಯಚಿತ್ರಗಳನ್ನು ಹೊತ್ತ ಪಲ್ಲಕ್ಕಿ ಉತ್ಸವ! ಹೌದು, ಸಿಪಿಐ(ಎಂ) ಬಳ್ಳಾರಿ ತಾಲೂಕು ಸಮಿತಿ ವಿನಾಶಕಾರಿ ಆಡಳಿತವೊಂದರ ಬಗ್ಗೆ ಜನಜಾಗೃತಿ ಮೂಡಿಸಲು ಹಮ್ಮಿಕೊಂಡ ಒಂದು ವಿಶಿಷ್ಟ ಕಾರ್ಯಕ್ರಮದ, ಅದರ ವಿಶಿಷ್ಟ ಅನುಭವಗಳ ವರದಿ

ಪಿ.ಆರ್.ವೆಂಕಟೇಶ್

ಮುಂದೆ ಹಲಗೆಯ ಸದ್ದು. ಹಿಂದೆ ರಿಕ್ಷಾಕ್ಕೆ ಕಟ್ಟಿದ ಮೈಕು, 13 ತಿಂಗಳು ದೆಹಲಿಯ ಕೆಂಪು ಕೋಟೆಯಲ್ಲಿ ಬಿಜೆಪಿ ನೇತೃತ್ವದ ಕೋಮುವಾದಿ ಸರಕಾರದ ವಿನಾಶಕಾರಿ ವಾಜಪೇಯಿ ಸರಕಾರದ ಪರಿಣಾಮಗಳನ್ನು ಒತ್ತಿಹೇಳುವ ವ್ಯಂಗ್ಯ ಚಿತ್ರಗಳನ್ನು ಹೊತ್ತ ಪಾಲಕಿಯನ್ನು ಹೊತ್ತು 22 ಕಾರ್ಯಕರ್ತರು ಗ್ರಾಮಗಳನ್ನು ತಲುಪಿದೊಡನೆ ಗ್ರಾಮದ ಜನತೆ ಕುತೂಹಲದಿಂದ ಪಾಲಕಿಯನ್ನು ಸುತ್ತುವರೆದು ಬೆರಗಾಗಿ ನೋಡುತ್ತಿದ್ದರೆ ಇನ್ನೂ ಕೆಲವರು ವ್ಯಂಗ್ಯ ಚಿತ್ರಗಳನ್ನು ಬಿತ್ತರಿಸಿದ ರೈತರ-ಕೂಲಿಕಾರರ ಗೋಳನ್ನು ನೋಡಿ "ಎಂಥಾ ಮುಂಡೇ ಮಕ್ಕಳು ಆದಾರ ನೋಡ್ಲೆ" ಎಂದು ತಮ್ಮೊಡನೆ ಬಂದ ಗೆಳೆಯರಿಗೆ ಹೇಳುತ್ತಿದ್ದರು.

ಇನ್ನೂ ಕೆಲ ಗ್ರಾಮಸ್ಥ ಮಹಿಳೆಯರು ಪಾಂಡು ರಂಗನ ಯಾತ್ರೆ (ಈ ಭಾಗದಲ್ಲಿ ಪಾಂಡುರಂಗನ ಯಾತ್ರೆಗೆ ಹೋಗುವುದು ತುಂಬಾ ವಾಡಿಕೆಯಿದೆ) ಎಂದು ತಿಳಿದು ಕೊಡದ ತುಂಬಾ ನೀರು, ಊದು ಬತ್ತಿ, ದಕ್ಷಿಣೆ ತರಲು ಮುಂದಾಗಿ ಘೋಷಣೆಗಳನ್ನು ಕೇಳಿದ ನಂತರ ಇದು" ನಮ್ಮ ಸಂಘದ್ದು" ಎಂದು ತಿಳಿದು ಹಾಗೇ ಹಿಂಬಾಲಿಸುತ್ತಿದ್ದರು.

ಹೊಲಗದ್ದೆಗಳಲ್ಲಿ ಕೆಲಸಮಾಡುವ ಕೃಷಿ ಕೂಲಿಕಾರರು 'ಇದು ಯಾವ ದೇವರು' ಎಂದು ವಿಸ್ಮಯವಾಗಿ ಪ್ರಶ್ನೆಹಾಕುತ್ತಿದ್ದರು. 'ಇದು ಮಾತನಾಡುವ ದೇವರು' ಎಂದು ಕಾರ್ಯಕರ್ತರು ಉತ್ತರ ಕೊಡುತ್ತಿದ್ದರು. ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ರಾಜ್ಯ ಸಮಿತಿ ಕರೆಯ ಮೇರೆಗೆ ಬಳ್ಳಾರಿಯ ತಾಲೂಕು ಸಮಿತಿ ರಾಜಕೀಯ ಪ್ರಚಾರ ಆಂದೋಲನದ ಭಾಗವಾಗಿ "ರಾಜಕೀಯ ಜಾಗೃತಿ ಪಾದ ಯಾತ್ರೆ"ಗಾಗಿ ಈ ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು. ಸುರಿಯುವ ಮಳೆಯಲ್ಲೂ ಪಾದಯಾತ್ರೆ ಮುನ್ನುಗ್ಗುತ್ತಲೇ ಆರು ದಿನಗಳ ನಂತರ ಸಿದ್ಧಮ್ಮನ ಹಳ್ಳಿ ಗ್ರಾಮದಲ್ಲಿ ಸಮಾರೋಪ ಗೊಂಡಿತ್ತು. ಪ್ರತಿಗ್ರಾಮದ ಎಲ್ಲಾ ಓಣಿಗಳಲ್ಲೂ ಸುತ್ತಾಡಿ ಗ್ರಾಮದ ಮಧ್ಯೆ ಬಹಿರಂಗ ಸಭೆ ನಡೆಸುವಾಗ ಅಂದಾಜು 200 ರಿಂದ 250 ಜನ ಕೂಲಿಕಾರರು- ರೈತರು ಸಭೆಯಲ್ಲಿ ಭಾಗವಹಿಸುತ್ತಿದ್ದರು. ಇದರ ಪೂರ್ವಭಾವಿ ಪ್ರಚಾರಕ್ಕಾಗಿ 2000 ಕರಪತ್ರಗಳನ್ನು ಹಂಚಿ ಕಾರ್ಯಕ್ರಮ ಯಶಸ್ವಿ ಗೊಳಿಸಲು ಅನೇಕ ಗ್ರಾಮಗಳಲ್ಲಿ ಘಟಕದ ಬೈಟಕ್ ಸಭೆಗಳನ್ನು ನಡೆಸಲಾಗಿತ್ತು. ಪಾದಯಾತ್ರೆ ಗ್ರಾಮವನ್ನು ತಲುಪುತ್ತಲೇ, ಆಯಾ ಗ್ರಾಮದ ರೈತ ಹಾಗೂ ಕೂಲಿಕಾರ ಸಂಘದ ಗ್ರಾಮ ಘಟಕದ ಪದಾಧಿಕಾರಿಗಳು ಗುಂಪಾಗಿ ಬಂದು ಸ್ವಾಗತಿಸಿ ಗ್ರಾಮದೊಳಕ್ಕೆ ಬರಮಾಡಿ ಕೊಳ್ಳುತ್ತಿದ್ದರು.

ಕುರುಗೋಡಿನ ಉಜ್ವಲ ಪೇಟೆಯಲ್ಲಿ ಈ ಕಾರ್ಯಕ್ರಮ ಉದ್ಘಾಟನೆಗೊಂಡಿತು. ಉದ್ಘಾಟನೆಯನ್ನು ಸಿಪಿಐ(ಎಂ) ನ ರಾಜ್ಯ ಸಮಿತಿ ಸದಸ್ಯರಾದ ಯು. ಬಸವರಾಜ್ ನೆರವೇರಿಸುತ್ತಾ "13 ತಿಂಗಳ ಹಿಂದೆ ಭಯ, ಹಸಿವು, ಮತ್ತು ಭ್ರಷ್ಟಾಚಾರವನ್ನು ಹೋಗಲಾಡಿಸುವುದಾಗಿ ಹೇಳಿದ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ಸ್ವದೇಶಿ ಮಂತ್ರ ಒಂದೇ ವರ್ಷದಲ್ಲಿ ಇವುಗಳನ್ನು ದ್ವಿಗುಣ ಗೊಳಿಸಿದೆ. ಬಾಯಲ್ಲಿ ಸ್ವದೇಶಿ ಮಂತ್ರ ಜಪ, 13 ತಿಂಗಳಕಾಲ ವಿದೇಶಿ ಬಹುರಾಷ್ಟ್ರೀಯ ಕಂಪನಿಗಳ ಸೇವೆ ಮಾಡಿದೆ ಎಂದರು" ಮುಂದುವರೆದು ಮತನಾಡುತ್ತಾ ಬಿಜೆಪಿ ಹಾಗೂ ಅದರ ಮಿತ್ರ ಪಕ್ಷಗಳಾದ ಲೋಕಶಕ್ತಿಗಳಿಗೆ ದೇಶದ ಸ್ವಾಭಿಮಾನ, ಸ್ವಾತಂತ್ರ್ಯ, ದೇಶಾಭಿಮಾನದ ಬಗ್ಗೆ ಗೌರವಗಳಿಲ್ಲ. ಇವುಗಳ ಚಿಂತೆ ಏನೆಂದರೆ ಗುಡಿಗಳನ್ನು ಕೆಡವುದು, ವಿವಾದ ಹುಟ್ಟಿಸುವುದು, ಭಯವನ್ನು ನಿರ್ಮಿಸುವುದು. ದೇಶದ ಜನತೆಯು ತಮ್ಮ ಬದುಕಿನ ಚಿಂತನೆಯ ಬದಲು ಧರ್ಮದ ಹೆಸರಿನಲ್ಲಿ ಚಿಂತಿಸುವಂತೆ ಮಾಡಿ ಸೌಹಾರ್ದ ವಾತಾವರಣವನ್ನು ಕುಲುಷಿತಗೊಳಿಸುವ ಉದ್ದೇಶದ ಚಿಂತೆಯೇ ಇದಕ್ಕಿದೆ ಎಂದು ಅವರು ಆರೋಪಿಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಜಿಲ್ಲಾ ಸಮಿತಿ ಸದಸ್ಯರಾದ ಪಿ. ಆರ್.ವೆಂಕಟೇಶ್ ರವರು ಪಶ್ಚಿಮಬಂಗಾಲ, ತ್ರಿಪುರಾ, ಕೇರಳ ರಾಜ್ಯಗಳ ಸಿಪಿಐ(ಎಂ) ನೇತೃತ್ವದ ಎಡ ರಂಗ ಸರಕಾರಗಳ ಸಾಧನೆಗಳನ್ನು ಜನತೆಗೆ ತಿಳಿಸಿದರು. ಅಲ್ಲದೆ ಏ.ಎಸ್. ಶಿವಶಂಕರ್ ರವರು 13 ತಿಂಗಳಲ್ಲಿ ದಿಲ್ಲಿಯಲ್ಲಿ ದರ್ಬಾರು ನಡೆಸಿದ ಜನ ಉಂಟು ಮಾಡಿದ ಬೆಲೆ ಏರಿಕೆ ಬಗ್ಗೆ ಮಾತನಾಡಿದರೆ ಕೆ.ಗಾದಿಲಿಂಗಪ್ಪ ರಾಮಕೃಷ್ಣ ಹೆಗಡೆಯವರ ಆಮದು-ರಫ್ತು ನೀತಿಯ ಕುರಿತು ಮತನಾಡಿ ರೈತರ ಮೇಲೆ ಹಾಗೂ ರೈತಾಪಿಯ ಮೇಲೆ ಅವುಗಳ ದುಷ್ಟ ಪರಿಣಾಮಗಳ ಕುರಿತು ವಿವರಿಸಿದರು.

ಉದ್ಘಾಟನೆಯ ನಂತರ ಪಾದಯಾತ್ರೆ ಕುರುಗೋಡಿನ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿ ಸಂತೇ ಬಯಲು, ಇಂದಿರಾನಗರ, ಆಶ್ರಯ ಕಾಲೋನಿ, ಗೆಣಿಕೆಹಾಳ್ ರಸ್ತೆ, 10ನೇ ವಾರ್ಡ್‌ಗಳಲ್ಲಿ ಬಹಿರಂಗ ಸಭೆಗಳನ್ನು ನಡೆಸಿ ಮರುದಿನ ಬೆಳಿಗ್ಗೆ ನೂರಾರು ಜನತೆಯು ಪಾಲ್ಗೊಂಡು ಬೀಳ್ಕೊಟ್ಟನಂತರ ಬಸವಪುರ, ಗೆಣಿಕಿಹಾಳ್, ಹೊಸಗೆಣಿಕಿಹಾಳ್, ಕ್ಯಾಂಪ್, ಕ್ಯಾದಿಗಿ ಹೊಳೆ, ಮುಷ್ಟಗಟ್ಟ, ಕೆರೆಕರೆ, ಲಕ್ಷ್ಮೀಪುರ, ಕಲ್ಲು ಕಂಭ, ಯಲ್ಲಾಪುರ, ಕ್ಯಾಂಪ್, ಬಾದನಹಟ್ಟಿ, ಕುಡಿತನೆ, ಹೊಸೂರು, ಚಲುವಾದಿ ಓಣಿ, ತಿಮ್ಮಲಾಪುರ, ಏಳುಬೆಂಚಿಗಳಲ್ಲಿ ಸಭೆ, ಮೆರವಣಿಗೆಗಳನ್ನು ನಡೆಸಿ ಸಿದ್ದಮ್ಮನಹಳ್ಳಿಯಲ್ಲಿ ಸಮಾರೋಪಗೊಂಡಿತು.

ಪಾದಯಾತ್ರೆಯ ಪ್ರತಿಸಭೆಯಲ್ಲಿಯೂ ಬಿ.ಜೆ.ಪಿ. ಒಂದು ವರ್ಷದ ವಿನಾಶಕಾರಿ ಆಡಳಿತದ ಸಾಧ್ಯವಾದಷ್ಟು ಎಲ್ಲಾ ವಿವರಣೆಗಳನ್ನು ಜನತೆಗೆ ನೀಡಲು ಪ್ರಯತ್ನಿಸಲಾಯ್ತು, ಕುರುಗೋಡಿನ ಭಾಗದಲ್ಲಿ ಉಂಟಾದ ಕಳಪೆ ಬೀಜದ ಸಮಸ್ಯೆ, ನೀರಾವರಿ ಸಮಸ್ಯೆ, ಕೃಷಿ ಕೂಲಿಯ ಸಮಸ್ಯೆ, ಮಲ್ಲಪನ ಕೆರೆಯ ಸಮಸ್ಯೆಗಳಿಗೂ ಬಿ.ಜೆ.ಪಿ. ಆಡಳಿತಕ್ಕೂ ಇರುವ ಸಂಬಂಧಗಳನ್ನು ಬಯಲಿಗೆಳೆಯಲಾಯ್ತು. ಇಷ್ಟೆಲ್ಲಾ ಅನಾಹುತಗಳು ದೇಶದಲ್ಲಿ ರೈತರ ಆತ್ಮಹತ್ಯೆಗಳೂ ನಡೆದಿದ್ದರೂ ದೇಶ ಹಾಗೂ ಜನವಿರೋಧಿ ಆರ್ಥಿಕ ನೀತಿಗಳನ್ನು ಬಿ.ಜೆ.ಪಿ. ಸರಕಾರ ಜಾರಿಗೆ ತರುತ್ತಿದ್ದರೂ ಈ ಭಾಗದ ಕಾಂಗ್ರೆಸ್ ಎಂ.ಪಿ. ಕೊಂಡಯ್ಯನವರಾಗಲಿ, ಎಂ.ಎಲ್.ಎ. ವೀರಭದ್ರಪ್ಪನವರಾಗಲಿ ಮೌನಪ್ರೇಕ್ಷಕರಾಗಿ ಕೂತಿದ್ದು ಈ ಎಲ್ಲಾ ಅನೀತಿಗಳ ಜಾರಿಗೆ ಬೆಂಬಲ ಸೂಚಿಸಿದ್ದನ್ನು ಸಭೆಗಳಲ್ಲಿ ಖಂಡಿಸಲಾಯ್ತು. ದೇಶದ ರೈತರ, ಕೂಲಿಕಾರರ ಹಾಗೂ ರೈತಾಪಿಯ ಬದುಕನ್ನು ದುರಂತಗೊಳಿಸಲು, ದೇಶದ ಮಾರುಕಟ್ಟೆಯನ್ನು ದೋಚಲು, ಸ್ವಾತಂತ್ರ್ಯಾ ನಂತರದಿಂದ ದೇಶವನ್ನು ಆಳುತ್ತಿದ್ದ ಕಾಂಗ್ರೆಸ್ ಪಕ್ಷ, ವಿದೇಶೀಯರಿಗೆ ಹಾಗೂ ಬಹುರಾಷ್ಟ್ರೀಯ ಕಂಪನಿಗಳಿಗೆ ದಾಳಿನಡೆಸಲು ಗ್ಯಾಟ್ ಒಪ್ಪಂದದ ಮೂಲಕ ಗೇಟನ್ನು ತೆರೆದಿದ್ದರೆ - ಬಿ.ಜೆ.ಪಿ. ಸರಕಾರ ತೆರೆದ ಗೇಟನ್ನು ಬೇಲಿಗಳನ್ನೂ ಮುರಿದು ಬಿಸುಡಿದ್ದಾರೆ ಎಂಬುದನ್ನು ಜನರಿಗೆ ತಿಳಿಸಲಾಯ್ತು. ಅದರ ಪರಿಣಾಮವಾಗಿ ಕೃಷಿ ಕ್ಷೇತ್ರದ ಅನುದಾನದಲ್ಲಿ ಕಡಿತ, ಬೆಲೆಏರಿಕೆಯ ಬಿಸಿ, ರೈತರ ಬೆಳೆಗಳಿಗೆ ಬೆಲೆ ಕುಸಿತ, ಸಾಲದ ಬಾದೆ, ವಿದ್ಯುತ್‌ಕೊರತೆ, ಕೂಲಿ ಕಡಿತಗಳಂಥಹ ಅನೇಕ ಸಂಕಟಗಳಿಗೆ ದಾರಿ ಮಾಡಿಕೊಟ್ಟಿದೆ ಎಂಬ ವಿಷಯವನ್ನು ಜನತೆಗೆ ತಿಳಿಸಲಾಯ್ತು. ಈ ಸಂದರ್ಭದಲ್ಲಿ ಕೂಲಿಕಾರರು ತಮಗೆ ಬಾಧಿಸುವ ಮನವಿಪತ್ರಗಳನ್ನು ಸಲ್ಲಿಸುತ್ತಿದ್ದರು.

ಮಾತನಾಡಲು ಕಲಿತ ಮುಗ್ಧ ಜೀವಿಗಳು

ಪಾದ ಯಾತ್ರೆಯಲ್ಲಿ ಪಾಲ್ಗೊಂಡ ಕಾರ್ಯಕರ್ತರಲ್ಲಿ ಹೊಸ ಹಾಗೂ ಸ್ಫೂರ್ತಿದಾಯಕ ಲವಲವಿಕೆಗಳು ಎದ್ದು ಕಂಡವು. 22 ಜನ ಕಾರ್ಯಕರ್ತರು ಪಾದಯಾತ್ರೆಯಲ್ಲಿ ಪಾಲ್ಗೊಂಡಿದ್ದರು. "ಹೋರಾಟದ ಹಾದಿಯಲ್ಲಿ ಕಾರ್ಯಕರ್ತರು ಪಳಗುತ್ತಾರೆ, ಕಲಿಯುತ್ತಾರೆ, ಬದುಕುತ್ತಾರೆ" ಎಂಬಂತೆ ಕೆಲ ಕಾರ್ಯಕರ್ತರು ತಮ್ಮಲ್ಲಿ ಉಂಟಾದ ಹೊಸ ಲವಲವಿಕೆಯನ್ನು ಗುರುತಿಸಿಕೊಂಡರು. ತಾವು ಬದಲಾಗುತ್ತಿದ್ದೇವೆ ಎಂಬ ಹೊಸ ಅನುಭವ ಅವರಲ್ಲಿನ ಉತ್ಸಾಹವನ್ನು ಇಮ್ಮಡಿಸಿತು. ಈ ಹಿಂದೆ ಕೆಲ ಸಂದರ್ಭಗಳಲ್ಲಿ ಸಮಿತಿಯ ಸಭೆಗಳಲ್ಲಿ, ಮಾತನಾಡುವಂತೆ ಎಷ್ಟೇ ಪ್ರೋತ್ಸಾಹಿಸಿದರೂ ಮಾತನಾಡಲು ಹಿಂಜರಿಯುತ್ತಿದ್ದವರು ಈ ಪಾದಯಾತ್ರೆಯಲ್ಲಿ ಪಾಲಕಿಯ ಸುತ್ತ ನೆರೆದ ಜನತೆಗೆ ಚಿತ್ರಗಳ ಅರ್ಥವನ್ನು ಒತ್ತಿ ಹೇಳುತ್ತಾ ತಮ್ಮದೇ ಸಭೆಗಳಲ್ಲಿ ಸರಕಾರದ ದುರಾಡಳಿತ ನೀತಿಯನ್ನು ಜನತೆಗೆ ತಿಳಿಸಲು ಮುಂದಾದರು. ಇದು ಅವರಲ್ಲಿ ಉಂಟಾದ ಬದಲಾವಣೆಯ ಬೆಳಕು ಗ್ರಾಮಗಳನ್ನು ದಾಟಿಕೊಂಡು ಹೋಗುವ ರಸ್ತೆಗಳಲ್ಲಿ ಅವರವರೊಳಗೆ ತಮ್ಮ ತಮ್ಮ ಅನುಭವಗಳನ್ನು ಹಂಚಿಕೊಂಡು ಈ ಅಂಶಗಳು ಎದ್ದು ಬಂದವು. ಈ ಚರ್ಚೆಯಲ್ಲಿ ದಾರಿಸಾಗಿದ್ದೇ ತಿಳಿಯುತ್ತಿರಲಿಲ್ಲ. ಕೆಲವುಬಾರಿ ಕ್ರಾಂತಿಗೀತೆಗಳನ್ನು, ಹೋರಾಟದ ಹಾಡುಗಳನ್ನು ಹೇಳುತ್ತಾ ಸಾಗುತ್ತಿದ್ದೆವು. ಕೃಷ್ಣ ಇತ್ತೀಚೆಗಷ್ಟೆ ಕೃಷಿಕೂಲಿಕಾರರ ಸಂಘದ ಸದಸ್ಯನಾಗಿ ಬಂದವರಲ್ಲಿ ಒಬ್ಬ ಹಾದಿಯಲ್ಲಿ ಹಿಂದೆ ಬಂದು ಕಿವಿಯಲ್ಲಿ ಬಿಸಿಯಾಗಿ ಉಸುರಿದ "ಕಿಂಬಾವುಟಕ್ಕೆ ಎಷ್ಟು ಸತುವು ಐತೆ" ನನಗೆ ಗೊತ್ತಾಗಲಿಲ್ಲ, ಈತ ಏಕೆ ಹೀಗೆ ಹೇಳಿದ ಯಾವ ಕಾರಣಕ್ಕೆ ಹೇಳಿದ ಎಂಬುದು ತಿಳಿಯದೇ ಹೇಗೆ ಎಂದು ಕೇಳಿದೆ

"ಕೆಂಬಾವುಟಕ್ಕಿರುವ ಸತುವು"

ಕಾರ್ಯಕ್ರಮದ ಸೂಚನೆಯಂತೆ ಯಲ್ಲಾಪುರದಲ್ಲಿ ರಾತ್ರಿ ತಂಗುವುದಿತ್ತು. ರಾತ್ರಿ ಸಭೆಯ ನಂತರ ರೈತ ಸಂಘದ ಹಿತೈಷಿಗಳಾದ ಸೂರ್ಯಪ್ಪನವರ ಮನೆಯಲ್ಲಿ ಊಟದ ವ್ಯವಸ್ಥೆಯನ್ನು ಮಾಡಲಾಗಿತ್ತು. ಅವರ ಮನೆ ತಲುಪುತ್ತಿದ್ದಂತೆ ಅವರು ಸ್ವಾಗತಿಸಿ ಊಟಕ್ಕೆ ಅಣಿಗೊಳಿಸಿದರು. ಮನೆಯ ಒಳಗೆ ಎಲ್ಲರೂ ಊಟಕ್ಕೆ ಕುಳಿತರೂ ಕೃಷ್ಣ ಹೊರಗೇ ನಿಂತಿದ್ದ. ನಾವು ಬರುವಂತೆ ಹೇಳಿದೆವು. ಕೃಷ್ಣ ನಮ್ಮನ್ನೊಮ್ಮೆ ಸೂರ್ಯಪ್ಪನ್ನನ್ನೊಮ್ಮೆ ನೋಡತೊಡಗಿದ. ಈತನ ಒಳಗುದಿ ಏನೆಂಬುದು ತಿಳಿಯದೆ ಸಂಗಾತಿಗಳು ಮತ್ತೆ ಕರೆದರು. ಕೊನೆಗೆ ಸೂರ್ಯಪ್ಪನೇ " ನಿನಗೆ ಬೇರೆ ಹೇಳಬೇಕೇನಪ್ಪ, ಒಳಗೆ ಹೋಗಬಾರದೆ" ತುಂಬಾ ಸೌಮ್ಯದಿಂದಲೇ ಹೇಳಿದರು.

ಸೂರ್ಯಪ್ಪನ ಮನೆಯ ಒಳಗೆ ಎಲ್ಲರ ಜೊತೆಯಲ್ಲೂ ಕೂತು ಮೊಟ್ಟ ಮೊದಲ ಬಾರಿಗೆ ಊಟಮಾಡಿದ್ದು ಇಂದೇ ಎಂದು ಕೃಷ್ಣ ನಂತರ ಹೇಳಿದ. ಈ ಹಿಂದೆ ಕೃಷ್ಣ ಸೂರ್ಯಪ್ಪನ ಮನೆಯಲ್ಲಿ ಸಂಬಳಕ್ಕಿದ್ದನಂತೆ. ಆತನೆಂದೂ ಅವರ ಮನೆ ಬಾಗಿಲ ಮೆಟ್ಟಿದವನಲ್ಲ. ದನದ ಕೊಟ್ಟಿಗೆಯಲ್ಲಿ ಊಟಮಾಡಿ ಮಲಗಿದ್ದ ಹಳೆಯ ನೆನಪನ್ನು ಮೆಲಕು ಹಾಕಿ ಹೇಳಿದ "ಹೀಗೆ ಆಗೈತೆ ಅಂತ ಅನಕಂಡಿದ್ದಿಲ್ಲ. ಹೆಂಗಾತು, ನಮ್ಮ ಬಾವುಟದಾಗ ಏನೋ ಮಹತ್ವ ಐತೆ. ನಾನು ಎಲ್ಲಿ ಊಟ ಮಾಡೋದು ಅನಕಂಡಿದ್ದೆ. ಸೂರ್ಯಪ್ಪನು ಉಣ್ಣಾಕಾ ಒಳಗ ಕರದ, ಎಲ್ಲಾ ನಮ್ಮ ಬಾವುಟದ ಮಹತ್ವ" ತನ್ನ ಎದೆಯಲ್ಲಿ ಮಿಂಚಿನಂತೆ ಸೆಳಕುಗೊಂಡ ಸೆಳವಿನ ಅನುಭವದ ಮಾತುಗಳನ್ನು ಹೇಳುತ್ತಿದ್ದಾಗ ಇದರೊಟ್ಟಿಗೆ ಕೂಲಿಕಾರ ಸಂಘದ ಚೆನ್ನಪ್ಪ, ಮೂಕಪ್ಪನವರೂ ತಮ್ಮ ಅನುಭವಗಳನ್ನು ಸೇರಿಸಿದರು. ದಲಿತ ಸಂಘ, ಮಾದಿಗ ದಂಡೋರ, ಅಂಬೇಡ್ಕರ್ ಸಂಘಗಳು ನಮ್ಮ ಮೇಲೆ ಹೊರಿಸುವ ಅಪಾದನೆಗಳಿಗೆ ಇವರ ಅನುಭವಗಳೇ ಉತ್ತರವಾಗಿವೆ. ಪಾದಯಾತ್ರೆಯಲ್ಲಿ ಪಾಲ್ಗೊಂಡ ಚೆನ್ನಪ್ಪ "ನಮಗೆಲ್ಲಾ ಬೇರೆಯವರೂ ಎಂಬ ಭಾವನೆಗಳೇ ಬರಲಿಲ್ಲ. ಕೀಳಜಾತಿಯವರ ಹಾಗೂ ಮೇಲ್ ಜಾತಿಯವರ ಮನೆಗಳಲ್ಲಿ ಯಾವ ಭೇದ ಭಾವಗಳಿಲ್ಲದೆ ಊಟ ಮಾಡಿದೆವು, ಮಲಗಿದೆವು. ಕೆಲವರು ನಮ್ಮನ್ನು ನೋಡದವರಿದ್ದೂ ನಾವು ಯಾರು ಎಂಬುದೂ ಅವರಿಗೆ ಗೊತ್ತಿತ್ತು. ಹೀಗಿದ್ದರೂ ನಮ್ಮನ್ನು ತಮ್ಮಂತೆ ಕಂಡಿದ್ದು ಉಪಚರಿಸಿದ್ದು ಅವರಲಿದ್ದ ಮನುಷ್ಯತ್ವದ ಬಗೆಗಿನ ತಿರುಳನ್ನು ಎತ್ತಿ ತೋರಿಸಿತು. ನಾವೂ ಕೂಡ ಮನುಷ್ಯರಾದೆವು ನಮ್ಮ ಕೀಳರಿಮೆಗಳನ್ನು ಕಿತ್ತೆಸೆದು" ಎನ್ನುತ್ತಾರೆ.

ನಮ್ಮದೇ ತಪ್ಪಾಗಿತ್ತು

ಒಂದೊಂದು ಬಾರಿ ನಮ್ಮ ಕಾರ್ಯಕರ್ತರನ್ನು ಅವರ ಮಾನಸಿಕ ಬದಲಾವಣೆಗಳನ್ನು ಸರಿಯಾಗಿ ಅಂದಾಜು ಮಾಡದೆ ತಪ್ಪು ನಿರ್ಣಯಗಳನ್ನು ತೆಗೆದುಕೊಳ್ಳುತ್ತೇವೆ. ಪಾದಯಾತ್ರೆಯ ಸಂದರ್ಭದಲ್ಲಿ ಅಂತಹದೊಂದು ಘಟನೆ ನಮ್ಮ ಕಣ್ಣನ್ನು ತೆರೆಸಿತು. ನಮ್ಮ ತಪ್ಪು ಭಾವನೆ ನಮ್ಮನ್ನೇ ಅಣಕಿಸಿತು. ಕಲ್ಲುಕಂಬ ಗ್ರಾಮದಲ್ಲಿ ರೈತ ಸಂಘದ ಕಾಯಕರ್ತರ ಮನೆಯಲ್ಲಿ ವಿಶ್ರಾಂತಿ ಹಾಗೂ ಊಟದ ವ್ಯವಸ್ಥೆಯನ್ನು ಮಾಡಲಾಗಿತ್ತು. ಸಂಜೆ ಬಹಿರಂಗ ಸಭೆ ನಡೆಸುವುದಾಗಿ ತೀರ್ಮಾನಿಸಲಾಗಿತ್ತು. ನಮ್ಮಲ್ಲಿಯೇ ಒಬ್ಬ ಸಂಗಾತಿ ಕೆಲವರಿಗೆ ಮಾತ್ರ ಅವರ ಮನೆಯಲ್ಲಿ ಊಟ ಉಳಿದವರಿಗೆ ಬೇರೆ ಕಡೆ ವ್ಯವಸ್ಥೆ ಮಾಡಿದೆ ಎಂದು ತಿಳಿಸಿದರು. (ಆದರೆ ಹೀಗೆ ಹೇಳಿದ ಸಂಗಾತಿ ಅವರನ್ನು ಕೇಳಿರಲಿಲ್ಲ) ಕಾರಣ ನಾವು ಕೂಲಿಕಾರರ ಅಧ್ಯಕ್ಷರ ಮನೆಯಲ್ಲಿ ಊಟದ ವ್ಯವಸ್ಥೆ ಮಾಡಲು ತಿಳಿಸಿದೆವು.

ಇದನ್ನು ಅರಿತ ಅವರು (ಕಲ್ಲುಕಂಭಾ ಗ್ರಾಮದ ರೈತ ಸಂಘದ ಕಾರ್ಯಕರ್ತ) ನಮಗೆ ಬೈಯಲು ಪ್ರಾರಂಭಿಸಿದರು- "ನೀವು ಹೀಗೇಕೆ ಭೇದ ಮಾಡುತ್ತೀರಿ. ನಾವು ಕಮ್ಯೂನಿಸ್ಟರು ನಮ್ಮಲ್ಲಿ ಜಾತಿಬೇಧವಿಲ್ಲ. ಎಲ್ಲರೂ ಒಂದೆ ಎಲ್ಲರಿಗೂ ಇಲ್ಲೇ ಊಟಮಾಡಿಸಿದ್ದೇವೆ. ಯಾರೂ ಬೇರೆಕಡೆ ಹೋಗುವಂತಿಲ್ಲ. ತಾವು ತಿಳಿದವರೇ ಹೀಗೆ ಮಾಡಿದರೆ ಹೇಗೆ?" ಎಂದರು. ಆಗ ಒಬ್ಬರಿಗೊಬ್ಬರು ಮುಖ ನೋಡಿ ಕೊಂಡು ತಲೆ ತಗ್ಗಿಸಿದೆವು.

ಪಾದಯಾತ್ರೆ ಹಾದುಹೋದ ಎಲ್ಲಾ ಗ್ರಾಮಗಳಲ್ಲೂ ಉತ್ಸಾಹದ ವಾತಾವರಣವಿತ್ತು. ಸಣ್ಣ ಪುಟ್ಟ ಸಮಸ್ಯೆಗಳನ್ನು ಬಿಟ್ಟರೆ ಪಾದ್ರಯಾತ್ರೆ ಯಶಸ್ವಿಯಾಗಿ ಕೊನೆಗೊಂಡಿತು. ಎಲ್ಲಾ ಕಾರ್ಯಕರ್ತರು ಇನ್ನೊಂದೆರಡುದಿನ ಪಾದಯಾತ್ರೆ ಮುಂದುವರೆದಿದ್ದರೆ ಚೆನ್ನಾಗಿತ್ತು ಎಂದು ಅಭಿಪ್ರಾಯ ಪಟ್ಟರು.

ಕೋಮುವಾದಿ ಶಕ್ತಿಗಳನ್ನು ಸೋಲಿಸಿ- ವಿದ್ಯಾರ್ಥಿಯುವಜನರ ಘೋಷಣೆ

ಮಾನವ ದ್ವೇಷಿ ಹಾಗೂ ಸಮಾಜದ ಪ್ರಗತಿಗೆ ಮಾರಕವಾದ ಕೋಮುವಾದದ ಅಪಾಯ ಅರಿತ ಪ್ರಗತಿ ಪರ ವಿದ್ಯಾರ್ಥಿ ಯುವ ಜನರು. ಇದೇ ಆಗಸ್ಟ್ 10 ರಂದು ಬೆಂಗಳೂರಿನ ಮಿಥಿಕ್ ಸೊಸೈಟಿಯಲ್ಲಿ ಕೋಮುವಾದಿ ಶಕ್ತಿಗಳನ್ನು ಸೋಲಿಸಿ, ಜಾತ್ಯಾತೀತ ಭಾರತಕ್ಕೆ ಮತನೀಡಿ ಎಂಬ ಘೋಷಣೆ ಬಿಡುಗಡೆ ಸಮಾರಂಭ ನಡೆಯಿತು.

ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ) ಹಾಗೂ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿವೈಎಫ್ಐ) ಸಂಘಟನೆಗಳು ಜಂಟಿಯಾಗಿ ಈ ಕಾರ್ಯಕ್ರಮ ಹಮ್ಮಿಕೊಂಡಿದ್ದವು.

ಈ ಘೋಷಣೆ ಬಿಡುಗಡೆ ಸಮಾರಂಭದಲ್ಲಿ ಖ್ಯಾತ ಸಾಹಿತಿ ಬರಗೂರು ರಾಮಚಂದ್ರಪ್ಪ, ಸಾಹಿತಿ- ಪತ್ರಕರ್ತ ರಂಜಾನ್ ದರ್ಗಾ, ಎಸ್.ವೈ.ಗುರುಶಾಂತ್ ಮತ್ತು ಬೆಂಗಳೂರು ವಕೀಲರ ಸಂಘದ ನೂತನ ಪ್ರಧಾನ ಕಾರ್ಯದರ್ಶಿ ಎಚ್.ಎಸ್. ನಾಗಮೋಹನ್‌ದಾಸ್ ಮೊದಲಾದವರು ಭಾಗವಹಿಸಿ ಮಾತನಾಡಿದರು. ಮುಂದಿನ ಸಂಚಿಕೆಯಲ್ಲಿ ಘೋಷಣೆಯ ತೆಟ್ಟಿನ ವರದಿ ಪ್ರಕಟವಾಗಲಿದೆ.

'ಲಂಕೇಶ್ ಪತ್ರಿಕೆ'ಯ ಪ್ರಭಾವಿ ಜಾತಿಗಳ ಕುರಿತ ವರದಿಯ ಟೀಕೆ

ಚುನಾವಣೆ ಬರುತ್ತಿದೆ! ಜಾತಿ-ವಿಶ್ಲೇಷಣೆಗಳ ಬಗ್ಗೆ ಎಚ್ಚರ !!

ಚುನಾವಣೆಯ ಕಾವು ಆರಂಭವಾಗಿದೆ. ರಾಜಶೇಖರ ಮೂರ್ತಿ ಕಾಂಗ್ರೆಸ್ ಬಿಟ್ಟು ಬಿಜೆಪಿ ಸೇರಿದ್ದಾರೆ, 'ಕಾಂಗ್ರೆಸ್‌ನ ಲಿಂಗಾಯತ ಬೆಂಬಲ ಕುಸಿಯುತ್ತದೆ' ರೋಷನ್ ಬೇಗ್ ಜನತಾದಳ ಬಿಟ್ಟು ಕಾಂಗ್ರೆಸ್ ಸೇರಿದ್ದಾರೆ 'ಜನತಾದಳಕ್ಕೆ ಮುಸ್ಲಿಮರು ಓಟು ಕೊಡಲಿಕ್ಕಿಲ್ಲ', 'ಎಲ್ಲಾ ಲಿಂಗಾಯತರೂ ಬಿಜೆಪಿಯತ್ತ ನೋಡುತ್ತಿದ್ದಾರೆ!'-ಹೀಗೆ ಪ್ರತಿ ರಾಜಕಾರಣಿಯ ಚಲನವಲನಕ್ಕೂ, ರಾಜಕೀಯ ಬೆಳವಣಿಗೆಗೂ ಜಾತಿಯ ಬಣ್ಣ ಹಚ್ಚಲಾಗುತ್ತಿದೆ. ಈಗಾಗಲೇ ಎಲ್ಲಾ ಪತ್ರಿಕೆಗಳಲ್ಲಿ ಆರಂಭವಾಗಿರುವ ಚುನಾವಣಾ-ಪೂರ್ವ ಸಮೀಕ್ಷೆ, ಆ ಮೇಲೆ ಬರುವ ಚುನಾವಣಾ ಸಮೀಕ್ಷೆಗಳಲ್ಲೂ ಇದೇ ಲೆಕ್ಕಾಚಾರ. ಆ ಕ್ಷೇತ್ರದಲ್ಲಿ ಯಾವ ಜಾತಿಯವರು ಎಷ್ಟು? ಕಾಂಗ್ರೆಸ್, ಬಿಜೆಪಿ, ಜನತಾದಳದ ಅಭ್ಯರ್ಥಿಗಳ ಜಾತಿ ಯಾವುದು? ಇತ್ಯಾದಿ ವಿಶ್ಲೇಷಣೆ. ಇದೇ ಧಾಟಿಯಲ್ಲಿ, ಆದರೆ ತೋರಿಕೆಗೆ ಭಿನ್ನವಾಗಿ ಕಾಣುವಂತೆ 'ಲಂಕೇಶ್ ಪತ್ರಿಕೆ' ಕರ್ನಾಟಕದ ಪ್ರಭಾವಿ ಜಾತಿಗಳನ್ನು ಕುರಿತು ವರದಿಗಳನ್ನು ಪ್ರಕಟಿಸುತ್ತಿದೆ. ಈ ವರದಿಗಳಲ್ಲಿ ಅಡಕವಾಗಿರುವ ಜಾತಿ-ವಿಶ್ಲೇಷಣೆ ಎಷ್ಟು ನಿಜ? ಎಷ್ಟು ಸರಿ? ಚುನಾವಣೆಗಳಲ್ಲಿ, ರಾಜಕಾರಣದಲ್ಲಿ ಇಂದಿನ ಕರ್ನಾಟಕದಲ್ಲಿ ಜಾತಿಯ ನಿಜವಾದ ಪಾತ್ರ ಏನು?

ಶರತ್ ಚಂದ್ರ

'ಲಂಕೇಶ್ ಪತ್ರಿಕೆ' ಕರ್ನಾಟಕದ ಪ್ರಭಾವೀ ಜಾತಿಗಳನ್ನು ಕುರಿತು ಮುಂಬರುವ ಪಾರ್ಲಿಮೆಂಟ್, ವಿಧಾನಸಭೆ ಚುನಾವಣೆ ಹಿನ್ನೆಲೆಯಲ್ಲಿ ವರದಿಗಳನ್ನು ಪ್ರಕಟಿಸುತ್ತಿದೆ. ಈವರೆಗೆ ಲಿಂಗಾಯತರು, ಬ್ರಾಹ್ಮಣರು, ಈಡಿಗರು, ಮುಸ್ಲಿಮರ ಬಗ್ಗೆ ವರದಿಗಳು ಬಂದಿವೆ. ಮೊದಲ ವರದಿ ತಲೆಬರಹ ಹೇಳಿದಂತೆ ಈ ಜಾತಿಗಳ ರಾಜಕೀಯ, ಸಾಮಾಜಿಕ ಸಮಸ್ಯೆ ಬಗೆಗೇನೂ ಹೆಚ್ಚು ಹೇಳಿಲ್ಲ. ಈ ವರದಿಗಳು ಹೇಳಿರುವುದು ಈ 'ಪ್ರಭಾವೀ' ಜಾತಿಗಳ 'ಪ್ರಭಾವೀ' ಪುಢಾರಿಗಳ ಬಗ್ಗೆ. ಅವರು ಎಷ್ಟು ಸಾಚಾ ಎಷ್ಟು ಖೋಟಾ - ಯಾರ ಪ್ರಭಾವ ಕುಂದುತ್ತಿದೆ? ಯಾರ ಪ್ರಭಾವ ಏರುತ್ತಿದೆ? **ದುಸ್ವಪ್ನಗಳ ಸರದಾರ ಬಂಗಾರಪ್ಪ, ಮಹಾಬ್ರಾಹ್ಮಣ-ಕಿಲಾಡಿ ಹೆಗಡೆ, ನಿಜಕ್ಕೂ ಹಾರುವ ಅನಂತಕುಮಾರ್, ಅವಕಾಶವಾದಿ ಇಬ್ಬಿ(ಇಬ್ರಾಹಿಂ), ಖಯ್ಯಾಲಿಗಳ ಬೇಗ್, ಹೆಂಡದ ಜತೆ ರಕ್ತ ಹಂಚುವ ಗುತ್ತೇದಾರಿಂಗಳು, 'ತಿರುಕನ ಕನಸು' ಕಾಣುವ ಯಡ್ಡಿ (ಯಡಿಯೂರಪ್ಪ), ಅರಮನೆ ಪಿತೂರಿಯ ಅನ್ವರಿ - ಈ ರೀತಿ ಪ್ರಭಾವೀ ನಾಯಕರ ಪ್ರಭಾವ ಅಥವಾ ಅದರ ಅಭಾವದ ಬಗೆಗೆ ತನಿಖೆ. ಈ 'ಧೂರ್ತ' ನಾಯಕತ್ವದ ಭಾನಗಡಿಗಳ ಬಗ್ಗೆ ರಂಜಕವಾಗಿ ಓದಿಸಿಕೊಂಡು ಹೋಗುವ ವರದಿ. ಅಲ್ಲಲ್ಲಿ ಈ ನಾಯಕರನ್ನು ಲೇವಡಿ ಮಾಡಿ ಓದುಗರಿಗೆ 'ಥ್ರಿಲ್ಲು' ಕೊಡುವ ವರಸೆ.**

ಈ ಜಾತಿಗಳ ಜನರ ಬಗ್ಗೆ ಏನೂ ಇಲ್ಲವೇ ಇಲ್ಲ ಎನ್ನುವಂತಿಲ್ಲ. ಇದೆ, ಆ ಜಾತಿ ಜನ ಯಾವ ಪ್ರದೇಶದಲ್ಲಿ, ಜಿಲ್ಲೆಗಳಲ್ಲಿ ಪ್ರಬಲವಾಗಿದ್ದಾರೆ, ಅವರಿಗೆ ಅಲ್ಲಿ ಏನನ್ನುತ್ತಾರೆ, ಅವರಲ್ಲಿರುವ ಉಪ ಜಾತಿಗಳೇನು? ಅವರ ಮಠಗಳೆಷ್ಟು? ಸ್ವಾಮಿಗಳು ಯಾರು ಇತ್ಯಾದಿ ಸ್ವಲ್ಪ ಚಾರಿತ್ರಿಕ ವಿವರಗಳ ಜತೆಗೆ ಇದೆ. ಆದರೆ ಇದು ಆ ಜಾತಿಯ ಜನರ ರಾಜಕೀಯ, ಸಾಮಾಜಿಕ ಸಮಸ್ಯೆ ಹೇಳಿದ ಹಾಗೆ ಆಯಿತೆ?

ಜಾತಿಗಳು ಓಟು ಬ್ಯಾಂಕುಗಳಲ್ಲ

'ಲಂಕೇಶ್ ಪತ್ರಿಕೆ'ಯ ಮತ್ತು ಇದೇ ಧಾಟಿಯಲ್ಲಿ ಹಲವು ಪತ್ರಿಕೆಗಳಲ್ಲಿ ಬರುತ್ತಿರುವ ವಿಶ್ಲೇಷಣೆಯಲ್ಲಿ ಎದ್ದು ಕಾಣುವ ಕೊರತೆ ಎಂದರೆ ಈ (ಜಾತಿಯ) ಜನರ ಸಾಮಾಜಿಕ-ರಾಜಕೀಯ ಚಲನೆಯನ್ನೆಲ್ಲಾ ಕೆಲವು ನಾಯಕರ ಚಲನೆಯಲ್ಲೇ ನೋಡುವುದು. ಅಥವಾ ಈ ನಾಯಕರು ಅವರ ಜಾತಿಯವರನ್ನು 'ಉದ್ಧಾರ' ಮಾಡಲಿಲ್ಲ; ಅದು ಮಾಡಿದರು, ಇದು ಮಾಡಲಿಲ್ಲ ಎಂದು ಸರಳೀಕರಿಸುವುದು. ಆ ವ್ಯಕ್ತಿ ಒಂದು ಪಕ್ಷದಲ್ಲಿ ಮೇಲೇರಿದರೆ, ಆ ಜಾತಿ ರಾಜಕೀಯ ಪ್ರಬಲವಾಯಿತು ಜಾತಿ ಪ್ರಭಾವಿ ನಾಯಕರು ಕಣ್ಣಿಗೆ ಹೊಡೆಯುವಂತೆ ಕಾಣದಿದ್ದರೆ ಆ ಜಾತಿ ದುರ್ಬಲವಾಯಿತು ಎನ್ನುವುದು ವಾಸ್ತವಕ್ಕೆ ದೂರವಾದ ಅಂಶ. ಅದು ಮಾತ್ರವಲ್ಲ, ಒಂದು ಜಾತಿಗೆ ಸೇರಿದ ನಾಯಕ ಆ ಜಾತಿಯ ನಾಯಕ ಎಂದು ಹಣೆಪಟ್ಟಿ ಹಚ್ಚಿಬಿಡುವುದು- ಆ ಜಾತಿಯ ಜನ ಎಷ್ಟರ ಮಟ್ಟಿಗೆ ಆತನನ್ನು ಒಪ್ಪಿಕೊಂಡಿದ್ದಾರೆ ಎಂಬುದನ್ನು ಮರೆತು ಬಿಟ್ಟು. ಜಾತಿ ಎಂಬುದು ರಾಜಕೀಯದಲ್ಲಿ ಚುನಾವಣೆಗಳಲ್ಲಿ, ಸಾಮಾಜಿಕ-ರಾಜಕೀಯ ಧೋರಣೆ ರೂಪಿಸುವಲ್ಲಿ - ಪಾತ್ರ ವಹಿಸುತ್ತದೆ ಎಂಬ ಬಗ್ಗೆ ಎರಡು ಮಾತಿಲ್ಲ. ಆದರೆ **ಒಂದು ಇಡೀ ಜಾತಿ(ಅದೂ ರಾಜ್ಯವ್ಯಾಪಿಯಾಗಿರುವ ಜಾತಿ)ಯ ಜನ ಒಂದೇ ರೀತಿ ರಾಜಕೀಯ ಧೋರಣೆ ತಳೆಯುತ್ತಾರೆ. ಒಂದೇ ರಾಜಕೀಯ ಪಕ್ಷವನ್ನು ಬೆಂಬಲಿಸುತ್ತಾರೆ ಎಂದು ಸೂಚಿಸುವ ವರದಿಗಳು ವಿಶ್ಲೇಷಣೆಗಳು ಖಂಡಿತಾ ನಿಜವಲ್ಲ. ಮುಸ್ಲಿಮರೇ ಆಗಲಿ, ಈಡಿಗರೇ ಆಗಲಿ, ಲಿಂಗಾಯತರೇ ಆಗಲಿ, ಬ್ರಾಹ್ಮಣರೇ ಆಗಲಿ ಒಟ್ಟಾರೆ 'ಓಟು ಬ್ಯಾಂಕ್' ಆಗಿ ಒಂದೇ ಪಕ್ಷಕ್ಕೆ, ಒಬ್ಬ ನಾಯಕನಿಗೆ, ಒಬ್ಬ ಅಭ್ಯರ್ಥಿಗೆ ಬೆಂಬಲಿಸಿದ್ದಕ್ಕೆ ಪುರಾವೆ ಇಲ್ಲ. ಇದು ಈ ಪತ್ರಿಕೆಗಳು ಪ್ರಚಾರ ಮಾಡುವ ದೊಡ್ಡ ಹಸಿ ಸುಳ್ಳು.** ಜಾತಿ ರಾಜಕೀಯ ಆಯ್ಕೆಯ ಮೇಲೆ ಪ್ರಭಾವ ಬೀರುತ್ತದೆ. ಆದರೆ ಅದು ಒಂದೇ ನಿರ್ಣಾಯಕ ಅಥವಾ ಅತಿದೊಡ್ಡ ಅಂಶವೂ ಅಲ್ಲ.

ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಜಾತಿ ರಾಜಕೀಯ ಆಯ್ಕೆಯಲ್ಲಿ ನಿರ್ಣಾಯಕ ಅಂಶ ಎನ್ನುವುದನ್ನು ಹೇಳುವಾಗ ಈ ಎಲ್ಲಾ 'ವರದಿ'ಗಳು, ವಿಶ್ಲೇಷಣೆಗಳು ಕಣ್ಣು ಮುಚ್ಚಿಕೊಂಡು ಬಿಡುತ್ತವೆ. ಇದರ ಅರ್ಥ ಇಡೀ ಜಾತಿಯ ಜನರ ಹಿತಾಸಕ್ತಿಗಳೆಲ್ಲಾ ಒಂದೇ, ಇಲ್ಲವೇ ಬಹಳ ನಿಕಟವಾಗಿ ತಳುಕಿ ಹಾಕಿಕೊಂಡಿವೆ ಅಂತ. ಅಲ್ಲೊಂದು ಇಲ್ಲೊಂದು ಕಡೆ ಈ ವರದಿಗಳು ಜಾತಿಗಳಲ್ಲಿ ಬಡವರು, ಶ್ರೀಮಂತರು, ಮಧ್ಯಮ ವರ್ಗದವರನ್ನು ಗುರುತಿಸಿದರೂ ಅವರ ಹಿತಾಸಕ್ತಿಗಳೆಲ್ಲಾ ಆ ಜಾತಿಯ ಕೆಲವು ನಾಯಕರ ಮೂಲಕ ಮಾತ್ರ ಬಿಂಬಿಸಲು ಸಾಧ್ಯ ಎನ್ನುವಂತೆ ಇರುತ್ತದೆ ಅವರ ಧೋರಣೆ. ಈಡಿಗರಲ್ಲಿ ಹೆಂಡ ಇಳಿಸಿ ಮಾರುವ ಬಡವರು ಇದ್ದಾರೆ, ಸಾರಾಯಿ ದೊರೆಗಳೂ ಇದ್ದಾರೆ. ಈಡಿಗನೊಬ್ಬ ಐಪಿಎಸ್ ಆದನೋ, ಐಎಎಸ್ ಆದನೋ, ಗ್ಯಾಂಗ್ ಲೀಡರ್ ಆದನೋ ಮಂತ್ರಿ ಆದನೋ ಇಡೀ ಜಾತಿಯ ಜನರಿಗೆ ಅದರಿಂದ ಭಾರಿ ಬದಲಾವಣೆಯೇನೂ ಆಗುವುದಿಲ್ಲ. ಅವರ ರಾಜಕೀಯ-ಸಾಮಾಜಿಕ ಸಮಸ್ಯೆಯೂ ಒಂದೇ ಅಲ್ಲ. ರಾಜಕೀಯ ಆಯ್ಕೆಯೂ ಒಂದೇ ಅಲ್ಲ. ಅಂದರೆ ಜಾತಿಯೊಳಗಿರುವ ವರ್ಗಗಳನ್ನು ಅದರ ಪರಿಣಾಮವನ್ನು ಇವರು ಗಣನೆಗೆ ತೆಗೆದು-ಕೊಳ್ಳುವುದೇ ಇಲ್ಲ ಅಥವಾ ಇವರಿಗೆ ಗೊತ್ತೇ ಇಲ್ಲ.

ಕರ್ನಾಟಕದಲ್ಲಿ ಅರಸರ ಹಿಂದುಳಿದವರ ರಾಜಕಾರಣ

ಹಿಂದೆ ಎಲ್ಲಾ ಪಕ್ಷಗಳಲ್ಲಿ ಎರಡು ಪ್ರಬಲ ಜಾತಿಗಳ (ಲಿಂಗಾಯತ, ಒಕ್ಕಲಿಗ)ಹಿಡಿತ ಇತ್ತು. ದೇವರಾಜ ಅರಸು ಅವರ 'ಪ್ರಗತಿಪರ ಕ್ರಾಂತಿಕಾರಿ' ಹಿಂದುಳಿದವರ ರಾಜಕೀಯದಿಂದ ಹಿಂದುಳಿದ ಜಾತಿಗಳು ರಾಜ್ಯದ ರಾಜಕೀಯದಲ್ಲಿ ಸ್ಥಾನ ಹೊಂದಿವೆ. ಈ ಪ್ರಬಲ ಜಾತಿಗಳು ತಮ್ಮ 'ಪ್ರಾಬಲ್ಯ' ತಡೆಯಲು, ಹಿಂದುಳಿದವರ ರಾಜಕೀಯ ಬಲ ಮುರಿಯಲು ಪ್ರಯತ್ನಿಸುತ್ತಿವೆ ಎಂಬುದು ಈ ನಾಲ್ಕು ವರದಿಗಳಲ್ಲೂ 'ಲಂಕೇಶ್ ಪತ್ರಿಕೆ'ಯಲ್ಲಿ ಕಂಡು ಬರುವ ಇನ್ನೊಂದು ತಪ್ಪು ಧೋರಣೆ, ಬೊಗಳೆ. 'ಎಲ್ಲಾ ಪಕ್ಷ'ಗಳಲ್ಲಿ ಹಿಡಿತ ಇದ್ದದ್ದು ಈ ಎರಡು ಪ್ರಬಲ ಜಾತಿಗಳದ್ದಲ್ಲ; ಮುಖ್ಯವಾಗಿ ಲಿಂಗಾಯತ, ಒಕ್ಕಲಿಗರೇ ಆಗಿರುವ ಪ್ರಬಲ ಜಮೀನ್ದಾರರ ಪಾಳೆಯಗಾರಿ ಹಿಡಿತ. ಅರಸು ಕಾಲದಲ್ಲಿ 'ಪ್ರಾಬಲ್ಯ' ಪಡೆದದ್ದು ಹಿಂದುಳಿದ ಜನ ಅಲ್ಲ, ಈ ಜಾತಿಗಳಿಗೆ ಸೇರಿದ (ಕೈಗಾರಿಕೆ, ಕೃಷಿ, ವ್ಯಾಪಾರಗಳಲ್ಲಿ ಭಾಗವಹಿಸಿ ಶ್ರೀಮಂತವಾದ) ಶ್ರೀಮಂತ ವರ್ಗದ ಪ್ರಾಬಲ್ಯ ಆರಂಭವಾದದ್ದು. ಈ ಎಲ್ಲಾ ಜಾತಿಗಳ ಜಮೀನ್ದಾರರೂ, ಶ್ರೀಮಂತರು ಪೈಪೋಟಿ ನಡೆಸುತ್ತಿರುವುದು ಅಧಿಕಾರದಲ್ಲಿ ಪಾಲಿಗೆ. ಆದರೆ ಇವರೆಲ್ಲರ ರಾಜಕೀಯ-ಸಾಮಾಜಿಕ ಹಿತಾಸಕ್ತಿ ಒಂದೇ. ಅದು ಜಮೀನ್ದಾರಿ ಬಂಡವಾಳಶಾಹಿ ವ್ಯವಸ್ಥೆಯನ್ನು ರಕ್ಷಿಸುವುದು.

ಬಂಗಾರಪ್ಪ, ಹೆಗಡೆ, ಜಾಫರ್ ಶರೀಫ್, ಗುತ್ತೇದಾರ್ ತಮ್ಮ ಸ್ವಂತ ಆರ್ಥಿಕ ಹಿತಾಸಕ್ತಿ ಕಾಪಾಡಲು ರಾಜಕೀಯದಲ್ಲಿದ್ದಾರೆ. ತಮ್ಮ ಜಾತಿ ಇಡೀ ಜನರ ರಾಜಕೀಯ-ಸಮಸ್ಯೆ ಬಗೆಹರಿಸಲು ಅಲ್ಲ. ಅವರೆಲ್ಲರಿಗೂ ಬಂಡವಾಳಶಾಹಿ- ಜಮೀನ್ದಾರಿ ವ್ಯವಸ್ಥೆ ಕಾಪಾಡುವುದು ಅಗತ್ಯ. ಅವರೇ ಬಂಡವಾಳಶಾಹಿ-ಜಮೀನ್ದಾರಿ ವರ್ಗಕ್ಕೆ ಸೇರಿರುತ್ತಾರೆ. ಇಲ್ಲವೇ ಆ ವರ್ಗದ ಬೆಂಗಾವಲಿಗೆ ಇರುತ್ತಾರೆ. ಆ ವರ್ಗದ ಹಿತಾಸಕ್ತಿಗಳೊಂದಿಗೆ ತಳುಕು ಹಾಕಿಕೊಂಡಿರುತ್ತಾರೆ.

ಆಳುವ ವರ್ಗ ರಾಜಕೀಯ ಮರೆ ಮಾಚಲು ಜಾತಿ-ರಾಜಕೀಯ

ಹಾಗಾದರೆ ರಾಜಕೀಯದಲ್ಲಿ, ಚುನಾವಣೆಯಲ್ಲಿ, ಜನರಲ್ಲಿ ಜಾತಿ ಪ್ರಭಾವಶಾಲಿಯಾಗಿಲ್ಲ ಎಂದೆ? ಅದು ಒಂದು ಗಮನಾರ್ಹ ಅಂಶ ಅಲ್ಲವೆಂದೆ? ಜಾತಿ ಪ್ರಭಾವಶಾಲಿ, ಗಮನಾರ್ಹ ಅಂಶ ನಿಜ. ಆದರೆ ಹೇಗೆ? ಎಲ್ಲಾ ಜಾತಿಯ ಜಮೀನ್ದಾರರು, ಬಂಡವಾಳಶಾಹಿಗಳು, ಅವರ ಬೆಂಗಾವಲಿನವರು ತಮ್ಮ ವರ್ಗ-ರಾಜಕೀಯ ಮುಚ್ಚಿಡಲು ಈ ಜಾತಿ-ಕಾರ್ಡು ಬಳಸುತ್ತಾರೆ. ಜಾತಿಗಳ ನಡುವಿನ ಸಾಮಾಜಿಕ ಅಂತರ, ಜಾತಿಗಳೊಳಗಿನ ವರ್ಗಬೇಧ ಮರೆಮಾಚಲು ತಮ್ಮ ಜಾತಿಯ ಜನರ ಬೆಂಬಲ ಪಡೆಯಲು ಪ್ರಯತ್ನಿಸುತ್ತಾರೆ. ಸಾರ್ವತ್ರಿಕ ಮತದಾನ ಇರುವ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅವರ ಪಟ್ಟಭದ್ರ ಹಿತಾಸಕ್ತಿ ಕಾಪಾಡಿಕೊಳ್ಳಲು ಇದು ಅತ್ಯಗತ್ಯ ಕೂಡಾ. ಜಾತಿಯ ಜನರ ಬೆಂಬಲ ಗಳಿಸಲಿಕ್ಕೆ 'ಸಾಮಾಜಿಕ ಸೇವೆ' ಮಾಡಬೇಕಾಗುತ್ತದೆ. ಶಿಕ್ಷಣ, ಉದ್ಯೋಗಗಳಲ್ಲಿ ಅಲ್ಲೊಂದು ಇಲ್ಲೊಂದು ಆಮಿಷ ತೋರಿಸಿ ಭರವಸೆ ಹುಟ್ಟಿಸಬೇಕಾಗುತ್ತದೆ. ಜಾತಿ ಸಂಘಟನೆಗಳ ಮೂಲಕ ಜಾತಿಯ ಜನರ ಮೇಲೆ ಹಿಡಿತ ಇರಬೇಕಾಗುತ್ತದೆ. ಪಾಳೆಯಗಾರಿ ವ್ಯವಸ್ಥೆಯ ಪಳೆಯುಳಿಕೆಯಾದ ಬಂಡವಾಳಶಾಹಿ ಬೆಳೆದಂತೆ, ದುಡಿಯುವವರ ವರ್ಗ ಜಾಗೃತಿ ಬೆಳೆದಂತೆ ನಶಿಸಿ ಹೋಗಬೇಕಾದ ಜಾತಿ ಪ್ರಜ್ಞೆಯನ್ನು ಕಷ್ಟಪಟ್ಟು ಗಟ್ಟಿಗೊಳಿಸುವತ್ತ ಪಾಳೆಯಗಾರಿ ಪದ್ಧತಿ ಇನ್ನೂ ಪ್ರಬಲವಾಗಿಯೂ, ಇನ್ನೂ ಪ್ರಬಲವಾಗಿ ಜಾತಿ-ಪ್ರಜ್ಞೆಯನ್ನೂ ಬಳಸುತ್ತಾರೆ. ಆದರೆ ಇದರಲ್ಲಿ ಆದರೂ ಪೂರ್ಣವಾಗಿ ಸಫಲರಾಗುತ್ತಾರೆ ಎಂದೇನಿಲ್ಲ.

ಜನ ಯಾವತ್ತೂ ಜಾತಿ-ರಾಜಕೀಯ ಮೀರಿ ನಿಂತಿದ್ದಾರೆ!

ಬೇರೆ ಯಾವುದೇ ರಾಜಕೀಯ-ಸಾಮಾಜಿಕ ವಿಷಯಗಳು ಜನರನ್ನು ತಟ್ಟುವುದಿಲ್ಲ ಎಂದಲ್ಲ. ಇಂದಿರಾ ಕಾಂಗ್ರೆಸ್ಸಿಗೆ 70 ರ ದಶಕದಲ್ಲಿ ಬೆಂಬಲ ನೀಡಿದ್ದು ಹಿಂದುಳಿದ ಜಾತಿಗಳ ಜನ ಮಾತ್ರವಲ್ಲ. ಮುಂದುವರೆದ ಜಾತಿಗಳ ಬಡವರೂ ಸೇರಿದಂತೆ ಎಲ್ಲಾ ಜಾತಿಗಳ ಬಡವರೂ ಸೇರದೆ ಇಂದಿರಾ ಕಾಂಗ್ರೆಸ್ಸಿಗೆ ಅಂತಹ ಜಯಭೇರಿ ಸಿಗುತ್ತಿರಲಿಲ್ಲ. ಆಗ ಜನರ ಮನಸ್ಸು ಮುಟ್ಟಿದ್ದು 'ಹಿಂದುಳಿದ ಜಾತಿ'ಗಳ ರಾಜಕಾರಣ ಅಲ್ಲ. ಭೂಸುಧಾರಣೆಯ ಘೋಷಣೆ(ಅದು ಹುಸಿ ಎಂಬುದು ಬೇರೆ ಮಾತು). 1983 ರಲ್ಲಿ ಜನತಾಪಕ್ಷವನ್ನು ತಂದದ್ದು ಕಾಂಗ್ರೆಸ್‌ನ ಜನ-ವಿರೋಧಿ ನೀತಿಗಳು (ಜಮೀನ್ದಾರ-ಬಂಡವಾಳಶಾಹಿ ಪರ) ಗುಂಡೂರಾಯರ ದಯೆಯಿಂದ ಬಯಲಾದಾಗ ಅದು 'ಒಕ್ಕಲಿಗ-ಲಿಂಗಾಯತ'ರು 'ಹಿಂದುಳಿದವರ' ಮೇಲೆ ಸಾಧಿಸಿದ ಜಯ ಅಲ್ಲ.

1989 ರಲ್ಲಿ ಪುನಃ ಕಾಂಗ್ರೆಸ್ ತಂದಿದ್ದು ಜನತಾದ 'ಪ್ರಬಲ ಕೋಮುಗಳನ್ನು ಅಧಿಕಾರ'ದಿಂದ ಇಳಿಸಿದ್ದು ಅಲ್ಲ. ಜನತಾದಳದ ಜಮೀನ್ದಾರಿ-ಬಂಡವಾಳಶಾಹಿ ಧೋರಣೆ ಸ್ಪಷ್ಟವಾಗಿ ಗೋಚರಿಸತೊಡಗಿದಾಗ 1994 ರಲ್ಲಿ ಕಾಂಗ್ರೆಸ್ಸನ್ನು ಕಿತ್ತು ಬಿಸಾಕಿ ಜನತಾದಳವನ್ನು ವಾಪಸು ತಂದಿದ್ದು 'ಮುಂದುವರಿದ ಜಾತಿಗಳೇ! ಹೆಗಡೆ-ಬೊಮ್ಮಾಯಿ-ಗೌಡರೆ! ಪುನಃ ಆಳಿ' ಎಂದಲ್ಲ. ಕಾಂಗ್ರೆಸ್‌ನ ಬಡವರ-ವಿರೋಧಿ, ಜಾಗತೀಕರಣ-ಉದಾರೀಕರಣದ ನೀತಿಗೆ ಜನತಾದಳ ವಿರೋಧವಾಗಿದ್ದರಿಂದ. ಬದಲಿಯ ಭರವಸೆ ಕೊಟ್ಟಿದ್ದರಿಂದ. ಹೀಗೆ ಹಲವು ಉದಾಹರಣೆಗಳನ್ನು ಕೊಡಬಹುದು. ಆ **ಕಾಲಘಟ್ಟದ ಪ್ರಮುಖ ರಾಜಕೀಯ ಆಯ್ಕೆಯನ್ನು ಕರ್ನಾಟಕದ ಜನತೆ ಯಾವತ್ತೂ ಮಾಡಿದ್ದಾರೆ. ಜಮೀನ್ದಾರಿ-ಬಂಡವಾಳಶಾಹಿ ರಾಜಕಾರಣಿಗಳ ಜಾತಿ-ರಾಜಕೀಯವನ್ನು ಮೀರಿ ನಿಂತಿದ್ದಾರೆ.**

ಬಿಕ್ಕಟ್ಟು ಮರೆಸಲು ಜಾತಿ-ಪ್ರಜ್ಞೆಗೆ ಕುಮ್ಮಕ್ಕು


ಈಗ ಜನತಾದಳ-ಕಾಂಗ್ರೆಸ್-ಬಿಜೆಪಿಗಳ ನಡುವೆ ರಾಜಕಾರಣಿಗಳ ಖೋ-ಖೋ ಆಟ ಜಾತಿ ಆಧಾರಿತ ಅಲ್ಲ. ಈ ಮೂರು ಪಕ್ಷಗಳು ಈಗ ಜಮೀನ್ದಾರಿ - ಬಂಡವಾಳಶಾಹಿ ಹಿತಾಸಕ್ತಿ ಎತ್ತಿ ಹಿಡಿಯುವವು ಎಂದು ಜನರಿಗೆ ಸಾಕಷ್ಟು ಮನದಟ್ಟಾಗಿದೆ. ಕಾಂಗ್ರೆಸ್ ಮತ್ತು ಜನತಾದಳದ ಕೋಮುವಾದಿ-ವಿರೋಧಿ ಜಾತ್ಯಾತೀತತೆ ಬದ್ಧತೆ ಬಗ್ಗೆ ಜನರಿಗೆ ತೀವ್ರ ಅನುಮಾನ ಇದೆ ಎಂದು ಗೊತ್ತು. ಆದ್ದರಿಂದ ಈ ರಾಜಕಾರಣಿಗಳು ಉಳಿಯಲು ಒಂದೇ ದಾರಿ. ಬಿಜೆಪಿ ಬ್ರಾಹ್ಮಣರ, ಲಿಂಗಾಯತರ ಪಕ್ಷ ಕಾಂಗ್ರೆಸ್ ಹಿಂದುಳಿದವರ ಮುಸ್ಲಿಮರ ಪಕ್ಷ. ಜನತಾದಳ ಕುರುಬರ-ಒಕ್ಕಲಿಗರ ಪಕ್ಷ ಎಂದೆಲ್ಲಾ ಬಿಂಬಿಸುವುದು ಇನ್ನೊಂದು ಕಡೆ ಇತರ ಜಾತಿಗಳಿಗೂ ಪ್ರಾಧಾನ್ಯ ಕೊಡುತ್ತೇವೆ ಎಂದು ತೋರಿಸಲು ಹೆಣಗುವುದು. ಜನ ಜಾತಿ-ಪ್ರಜ್ಞೆ ಜಾಸ್ತಿ ಆಗಿಲ್ಲ. ಜಮೀನ್ದಾರಿ-ಬಂಡವಾಳಶಾಹಿ ಪಕ್ಷಗಳ ರಾಜಕಾರಣಿಗಳಿಗೆ ಜಾತಿ-ರಾಜಕಾರಣವಿಲ್ಲದೆ ಬೇರೆ ಏನೂ ದಾರಿ ಉಳಿದಿಲ್ಲ ಅಷ್ಟೆ.

'ಲಂಕೇಶ್ ಪತ್ರಿಕೆ' ಮತ್ತು ಇತರ ಪತ್ರಿಕೆಗಳ ಇಂತ ವರದಿಗಳು, ವಿಶ್ಲೇಷಣೆಗಳು ಈ ರಾಜಕಾರಣಿಗ ಕೆಲಸವನ್ನು ಸುಲಭ ಮಾಡುತ್ತವೆ. ಜಾತಿ-ಪ್ರ ಗಟ್ಟಿಗೊಳಿಸುವ, ಆಳುವ ವರ್ಗದ ರಾಜಕೀಯ ಮ ಮಾಚುವ, 'ಸೇವೆ'ಯನ್ನು ಆಳುವ ವರ್ಗದ ಪಕ್ಷಗ ಮಾಡುತ್ತವೆ. ಆದ್ದರಿಂದಲೇ ಅವರ ವಿಶ್ಲೇಷಣೆಗಳ ಎಡಪಕ್ಷಗಳು, ದಲಿತ ಸಂಘರ್ಷ ಸಮಿತಿಯ ಸಾಮಾ ಚಳುವಳಿಗಳ 'ಅಡ್ರೆಸ್ಸೇ' ಇರುವುದಿಲ್ಲ. ಅವು ಚಟುವಟಿಕೆಗಳನ್ನು 'ಜಾತಿ-ವಿಶ್ಲೇಷಣೆ'ಯ ಅ ಚೌಕಟ್ಟಿನೊಳಗೆ ತುರುಕಲು ಆಗುವುದಿಲ್ಲವಲ್ಲ! ಚುನಾ ವಿಶ್ಲೇಷಣೆಗಳ ಪರ್ವ ಹತ್ತಿರ ಬಂದಿದೆ. ಜಾತಿ-ಆಧಾರಿತ ವಿಶ್ಲೇಷಣೆಗಳ ಬಗ್ಗೆ ಎಚ್ಚರ.

1946 ಆಗಸ್ಟ್‌ನ ಅತ್ಯಂತ ಭೀಕರ ಭ್ರಾತೃಹತ್ಯೆಯಿಂದ 'ಕಲ್ಕತ್ತ ಉರಿಯುತ್ತಿದ್ದ' ದಿನಗಳ ಬಗ್ಗೆ ಕಳೆದ ಸಂಚಿಕೆಯಲ್ಲಿ ಓದಿರುವಿರಿ.

ಈ ದಿನಗಳ ಬಗ್ಗೆ ಇನ್ನಷ್ಟು ....

ಮಾಸದ ನೆನಪುಗಳು
(ಒಂದು ರಾಜಕೀಯ ಆತ್ಮಕಥನ)



ಜ್ಯೋತಿಬಸು ಆತ್ಮಕಥನ
ಕನ್ನಡಕ್ಕೆ: ವಿಶ್ವಕುಂದಾಪುರ

ಮಾಲಿಕೆ-12

ಭೀಕರ ಕೋಮು ಹಿಂಸಾಚಾರದ ನಡುವೆ........

ಲೋವರ್ ಸರ್ಕ್ಯುಲರ್ ರಸ್ತೆಯ ಕಛೇರಿಯಲ್ಲಿದ್ದಾಗ ತುಂಬಾ ತೊಂದರೆ ಪಟ್ಟೆವು. ಆಗಾಗ ನಮಗೆ ಊಟವೂ ಇರುತ್ತಿರಲಿಲ್ಲ. ಹೇಗೋ ಪ್ರಾಂತ ಸಮಿತಿ ಕಛೇರಿಗೆ ಸುದ್ದಿ ಮುಟ್ಟಿತು. ನೃಪೇನ್ ಸೇನ್ ಮತ್ತು ಸರೋಜ್ ಬಾಬು ಮೊದಲಾದ ನಾಯಕರು 'ಜನತಾ ಪರಿಹಾರ ಸಮಿತಿ'ಯ ವ್ಯಾನನ್ನು ಕಲ್ಕತ್ತ ಜಿಲ್ಲಾ ಸಮಿತಿ ಕಛೇರಿಗೆ ತಂದರು. ಸೂಕ್ಷ್ಮ ಪ್ರದೇಶಗಳಿಂದ ಕೆಲವು ಕಾಂಗ್ರೆಸ್ ಹಾಗೂ ಕಮ್ಯುನಿಸ್ಟ್ ಬೆಂಬಲಿಗರನ್ನು ಪಾರು ಮಾಡಲು ಇದೇ ವ್ಯಾನನ್ನು ಬಳಸಲಾಯಿತು ಎಂದು ಅವರು ನಮಗೆ ತಿಳಿಸಿದರು. ವಾಸ್ತವವಾಗಿ ಅವರು ಕೆಲವು ಗಾಯಾಳುಗಳನ್ನು ವ್ಯಾನಿನಲ್ಲಿ ಕರೆತಂದು ಚಿಕಿತ್ಸೆಗಾಗಿ ಮೆಡಿಕಲ್ ಕಾಲೇಜ್‌ಗೆ ದಾಖಲಿಸಿದರು.

ನಾವು ಡಕ್ರೆಸ್ ಲೇನ್ ತಲುಪಿದೆವು. ಖೋಕಾ ರೇ, ಪ್ರೇಮದ್ ದಾಸ್ ಗುಪ್ತಾ ಮತ್ತು ದಿನೇಶ್ ರಾಯ್ ಅಲ್ಲಿದ್ದರು. ನಾಯಕಾರದ ಬಂಕಿಮ್ ಮುಖರ್ಜಿ, ನಿರೋಧ್ ಚಕ್ರವರ್ತಿ ಮತ್ತು ಅಬ್ದುಲ್ ಮೊಮೆನ್ ಹಾಗೂ ಅವರ ಪತ್ನಿ ಒಂದು ಹೋಟೆಲ್‌ನಲ್ಲಿ ಸಿಕ್ಕಿಹಾಕಿ ಕೊಂಡಿದ್ದರು. ಆ ಕಟ್ಟಡವನ್ನು ಸುತ್ತುವರಿಯಲಾಗಿತ್ತು. ಅವರ ಜೀವಕ್ಕೆ ಅಪಾಯವಿತ್ತು. ಸ್ನೇಹಾಂಶು ಆಚಾರ್ಯ ಪಾರು ಮಾಡುವ ಕಾರ್ಯಾಚರಣೆಯಲ್ಲಿ ಸಮಯ ಪರಿವೆಯಿಲ್ಲದೆ ದುಡಿಯುತ್ತಿದ್ದರು.

ಮೈದಾನದಲ್ಲಿ ಸ್ಥಾಪಿಸಲಾಗಿದ್ದ ಪರಿಹಾರ ಶಿಬಿರದ ಉಸ್ತುವಾರಿಯನ್ನು ಐಸಿಎಸ್ ಅಧಿಕಾರಿ ಆರ್.ಗುಪ್ತಾ ನೋಡಿಕೊಳ್ಳುತ್ತಿದ್ದರು. ಅಪಾಯಕ್ಕೆ ಸಿಲುಕಿರುವ ನಮ್ಮ ಸಂಗಾತಿಗಳ ಬಗ್ಗೆ ಈ ಶಿಬಿರವನ್ನು ಎಚ್ಚರಿಸಲಾಯಿತು. ತಕ್ಷಣವೇ ಏನಾದರೂ ಕ್ರಮ ಕೈಗೊಳ್ಳುವುದನ್ನು ಖಾತರಿ ಪಡಿಸುವಂತೆ ಹೋಗಲು ನನಗೆ ಸೂಚಿಸಲಾಯಿತು.

ಮಹಮದ್ ಇಸ್ಮಾಯಿಲ್ ಜತೆ ಒಂದು ಕಾರಿನಲ್ಲಿ ನಾನು ಮೈದಾನಕ್ಕೆ ಹೋದೆ. ಅಲ್ಲಿ ಗುಪ್ತಾ ಸಿಗಲಿಲ್ಲ. ಒಬ್ಬ ಸಿಪಾಯಿ ಜತೆ ಬಂದ ಬ್ರಿಟಿಷ್ ಯುವಕ ನಮ್ಮನ್ನು ವಿಚಾರಿಸಿದ. ಆ ಮೇಲೆ ಅವರು ಒಂದು ಲಾರಿಯನ್ನು ತರಿಸಿದರು. ಚಿತ್ತರಂಜನ್ ಅವೆನ್ಯೂದಲ್ಲಿ ಜಮಾಯಿಸಿರುವ ಹತ್ತಾರು ಸಾವಿರ ಉದ್ರಿಕ್ತ ಜನರನ್ನು ಎದುರಿಸುವ ವಿಶ್ವಾಸವಿದೆಯೇ ಎಂದು ನಾನು ಯುವಕನಿಗೆ ಕೇಳಿದೆ. "ನಾನು ಎರಡನೇ ವಿಶ್ವಯುದ್ಧದಲ್ಲಿ ಹೋರಾಡಿದವನು ಎಂಬುದು ನಿಮಗೆ ಗೊತ್ತಿದೆಯೇ?" ಎಂಬುದಷ್ಟೇ ಅವನ ಉತ್ತರವಾಗಿತ್ತು.

ಇದು ಸುಮ್ಮನೆ ಆಗುವ ಹೋಗುವ ಕೆಲಸವಲ್ಲ ಎಂದು ನನಗೆ ಗೊತಾಯಿತು. ಬೇರೆ ದಾರಿಯಿಲ್ಲದೆ ನಾವಿಬ್ಬರೂ ಕಾರಿನಲ್ಲಿ ಅವರ ಲಾರಿ ಹಿಂಬಾಲಿಸಿ ಹೋದೆವು.

ಹೋಟೆಲ್ ಸಮೀಪವಿದ್ದ ಇಸ್ಲಾಮಿಯಾ ಆಸ್ಪತ್ರೆಗ ನಾವು ಹೋಗಲಿಲ್ಲ. ಚೌಬಜಾರ್ ರಸ್ತೆ ಮತ್ತು ಚಿತ್ತರಂಜನ್ ಅವೆನ್ಯೂದ ಕ್ರಾಸಿಂಗ್‌ನಲ್ಲಿ ಕಾರನ್ನು ನಿಲ್ಲಿಸಲಾಯಿತು. ನಾವು ಕಾರಿನಲ್ಲಿ ಕಾಯುತ್ತಾ ಕುಳಿತೆವು.

ಆಶ್ಚರ್ಯ..... ವಿನಾಶ್ಚರ್ಯ!!

ಆ ಇಂಗ್ಲೀಷ್ ಯುವಕ ಕೈಯಲ್ಲಿ ರಿವಾಲ್ವರ್ ಹಿಡಿದು ಲಾರಿಯಿಂದ ಕೆಳಗಿಳಿಯುತ್ತಿದ್ದಂತೆಯೇ ದೊಂಬಿಕೋರರು ಕಾಲಿಗೆ ಬುದ್ಧಿ ಹೇಳಿದರು. ಬಂಕಿಮ್ ಮುಖರ್ಜಿ, ಅಬ್ದುಲ್ ಮೊಮೆನ್, ನಿರೋಧ್ ಚಕ್ರವರ್ತಿ ಮತ್ತು ಪ್ರಮೋದ್ ದಾಸಗುಪ್ತರನ್ನು ಪಾರು ಮಾಡಲಾಯಿತು. ನಾವು ನಿಂತಲ್ಲಿಂದ ಎಲ್ಲವೂ ಕಾಣಿಸುತ್ತಿತ್ತು. ಅವರನ್ನು ಕ್ರೆಸ್‌ಲೇನ್‌ಗೆ ಕರೆತರಲಾಯಿತು. ನಾವು ಇನ್ನೂ ಒಂದು ಅರ್ಧ ಗಂಟೆ ಕಾದು ವಿಳಂಬ ಮಾಡಿದ್ದರೆ ಈ ಮುಖಂಡರು ಮರುದಿನದ ಸೂರ್ಯಕಿರಣ ಕಾಣುವುದು ಅನುಮಾನವಿತ್ತು.

ರಕ್ಷಣೆಯ ನಿಜವಾದ ಕಾರ್ಯಾಚರಣೆಯಲ್ಲಿ ಕಮಲ್ ಸರ್ಕಾರ್ ಮತ್ತು ಸ್ನೇಹಾಂಶು ಆಚಾರ್ಯ ಪಾಲ್ಗೊಂಡಿದ್ದು ಹಾಗೂ ಮಿಲಿಟರಿ ಮಹಾಸಭೆಯೊಂದರಲ್ಲಿ ಸಂಗಾತಿಗಳನ್ನು ಕರೆದುಕೊಂಡು ಹೋಗಿದ್ದರು. ನಾವು ಹಾದಿಯಲ್ಲಿ ಅವರನ್ನು ಹಿಂಬಾಲಿಸಿದೆವು. ಅದಕ್ಕೂ ಮುಂಚೆ ಬೌಬಜಾರ್ ಕ್ರಾಸಿಂಗ್‌ನಲ್ಲಿ ಇರಲು ನಮಗೆ ಸೂಚಿಸಲಾಗಿತ್ತು.

ಅಬ್ದುಲ್ ಮೊಮಿನ್ ನಮಗೆ ಪೂರ್ಣ ಕತೆ ವಿವರಿಸಿದರು. ಅವರು ಹೋಟೆಲ್‌ನಲ್ಲಿ ಸಿಕ್ಕಿಹಾಕಿ ಕೊಂಡಿದ್ದರು. ಮುಸ್ಲಿಂ ದ್ವಾರಪಾಲಕ ಅವರನ್ನು ಉಳಿಸಲು ಕೊನೆಕ್ಷಣದವರೆಗೂ ಪ್ರಯತ್ನಿಸಿದ. ಗಲಭೆಕೋರರು ಅನೇಕಸಲ ಮೊಮಿನ್‌ರ ರೂಮನ್ನು ಬಡಿದು ಒಳಗಿರುವ ಹಿಂದೂಗಳ ಬಗ್ಗೆ ವಿಚಾರಿಸಿದರು. ಆದರೆ ದ್ವಾರಪಾಲಕ ಅವರನ್ನು ದೂರವಿರಿಸಿದ.

ಬಂಕಿಮ್ ಬಾಬು ಅವರ ಕೋಣೆಗೆ ಹೊರಗಿನಿಂದ ಚಿಲಕಹಾಕಲಾಗಿತ್ತು. ಆದರೂ ಒಳಗಡೆ ಹಿಂದೂಗಳು ಇದ್ದಾರೆ ಎಂದು ದಂಗೆಕೋರರು ವಾದಿಸಿದರು. ಎರಡು ದಿನ ಹೀಗೆಯೇ ಮುಂದುವರೆಯಿತು.

ಗಾಯಾಳುಗಳನ್ನು ಇಸ್ಲಾಮಿಯಾ ಆಸ್ಪತ್ರೆಗೆ ತಂದಾಗ ಭಾವನೆ ಉಕ್ಕಿಹರಿಯಿತು. ಉದ್ವಿಗ್ನತೆ ಎದ್ದು ಕಾಣುತ್ತಿತ್ತು. ಪರಿಸ್ಥಿತಿ ಕೈಮೀರುತ್ತಿತ್ತು. ಪಾಪ ಹೋಟೆಲ್ ನ ಆ ಸಿಬ್ಬಂದಿ (ದ್ವಾರಪಾಲಕ) ಕೂಡ ಏನು ಮಾಡಿಯಾನು? ಅವನೂ ದಂಗೆಕೋರರ ಒತ್ತಡಕ್ಕೆ ಮಣಿಯಲಿದ್ದ. ಆ ಹಂತದಲ್ಲಿ ನಾವು ಅಲ್ಲಿಗೆ ತಲುಪಿದೆವು.

ಪರಿಸ್ಥಿತಿ ತಿಳಿಯಾಗುವವರೆಗೆ ನಮ್ಮ ಪಕ್ಷ ರಕ್ಷಣಾ ಕೆಲಸ ಕಾರ್ಯಗಳನ್ನು ಕೈಗೆತ್ತಿಕೊಂಡಿತು. ನಮ್ಮ ಪ್ರಾಂತ ಸಮಿತಿ ಕಛೇರಿ, ಜಿಲ್ಲಾ ಸಮಿತಿ ಕಛೇರಿ ಮತ್ತು ಇತರ ಘಟಕಗಳಲ್ಲಿ ಹಿಂದೂ ಮತ್ತು ಮುಸ್ಲಿಮರಿಬ್ಬರೂ ಆಶ್ರಯಪಡೆದರು. 'ಜನತಾ ಪರಿಹಾರ ಸಮಿತಿ'ಯ ಸ್ವಯಂಸೇವಕರು ತಮ್ಮ ಸಂಗಾತಿಗಳ ರಕ್ಷಣೆಗಾಗಿ ತಮ್ಮ ಪ್ರಾಣ ತ್ಯಾಗಕ್ಕೂ ಸನ್ನದ್ಧರಾಗಿರುತ್ತಿದ್ದರು.

ಆಗಿನ ಅಂದಾಜಿನ ಪ್ರಕಾರ 1946 ರ ಕಲ್ಕತ್ತ ಹತ್ಯಾಕಾಂಡದಲ್ಲಿ 20 ಸಾವಿರಕ್ಕೆ ಕಡಿಮೆಯಲ್ಲದಷ್ಟು ಜನರು ಹತರಾದರು. ಬ್ರಿಟಿಷ್ ಸಾಮ್ರಾಜ್ಯಶಾಹಿಗಳು ಜನಸಾಮಾನ್ಯರನ್ನು ಕೋಮು ಆಧಾರದಲ್ಲಿ ವಿಭಜಿಸಿದರು. ಕೋಮುವಾದಿ ಅಂಶ ಸಾರ್ವಜನಿಕರ ಬಹುಭಾಗವನ್ನು ಉದ್ರೇಕಿಸುವಲ್ಲಿ ಸಮರ್ಥವಾಗಿತ್ತು ಎಂಬುದರಲ್ಲಿ ಅನುಮಾನವಿಲ್ಲ. ಆದರೆ ಇದು ಕತೆಯ ಒಂದು ಮುಖ ಮಾತ್ರ.

ಹಿಂದೂ ಜನ ಬಹಳವಿರುವ ಪ್ರದೇಶಗಳಲ್ಲಿ ಅನೇಕ ಜನರು ಗಲಭೆಯ ವಾತಾವರಣವಿದ್ದರೂ ಮುಸ್ಲಿಮರ ರಕ್ಷಣೆಗಾಗಿ ತಮ್ಮ ಪ್ರಾಣತ್ಯಾಗಕ್ಕೂ ಹಿಂದೆ ಮುಂದೆ ನೋಡಲಿಲ್ಲ; ಇದೇ ರೀತಿಯಲ್ಲಿ ಮುಸ್ಲಿಮರಲ್ಲೂ ಅನೇಕ ಮಂದಿ ತಮ್ಮ ಹಿಂದೂ ಭಾಂದವರ ರಕ್ಷಣೆಗಾಗಿ ಯಾವ ತ್ಯಾಗಕ್ಕೂ ಸಿದ್ದರಾಗಿದ್ದರು. ಒಂದು ಉದಾಹರಣೆ ಕೊಡುತ್ತೇನೆ.

ಪಕ್ಷದ ಆಗಿನ ನಾಯಕ ಕೃಷ್ಣ ವಿನೋದ್ ರಾಯ್ ಪಾರ್ಕ್ ಸರ್ಕಲ್‌ನಲ್ಲಿ ವಾಸವಿದ್ದರು. ಅವರ ಮನೆಯ ಒಡೆಯ ಮುಸ್ಲಿಂ ಆಗಿದ್ದರು. ಆತ (ಮನೆ ಮಾಲಿಕ) ಬಹಳ ಪ್ರಯತ್ನ ಪಟ್ಟು ರಾಯ್‌ರನ್ನು ಪೋಲೀಸ್ ಠಾಣೆಗೆ ಕರೆದುಕೊಂಡು ಹೋಗಿ ಅವರ ಪ್ರಾಣ ಉಳಿಸಿದರು.

ಅದ್ಯತೆಯ ಕೆಲಸ

ಪುನರ್‌ವಸತಿ ಈಗ ಆದ್ಯತೆಯ ಕೆಲಸವಾಗಿತ್ತು. ಗಲಭೆಗಳು ನಿಂತಿದ್ದರೂ ಪರಿಸ್ಥಿತಿಯೇನೂ ಸಹಜ ವಾಗಿರಲಿಲ್ಲ. ಕೋಮುಸೌಹಾರ್ದವನ್ನು ಮರಳಿ ಸ್ಥಾಪಿಸುವುದು ಹಾಗೂ ಜನರ ಮನಸ್ಸಿನಿಂದ ಭಯದ ಮನೋಭಾವವನ್ನು ನಿವಾರಿಸುವುದು ನಮ್ಮ ಮುಂದಿದ್ದು ಪ್ರಮುಖ ಕಾರ್ಯಭಾಗಗಳಲ್ಲಿ ಸೇರಿದ್ದವು.

ಆ ಕಾಲದಲ್ಲಿ ನಮ್ಮ ಪಕ್ಷದ ಸಂಗಾತಿಗಳು ಪ್ರಮುಖ ಪಾತ್ರ ನಿರ್ವಹಿಸಿದರು. ಹಾಗೂ ಲೆಕ್ಕವಿಲ್ಲದಷ್ಟು ಶಾಂತಿ ಸಮಿತಿಗಳನ್ನು ರಚಿಸಿದರು ಎಂದು ಹೇಳಲು ನನಗೆ ಹೆಮ್ಮೆಯಾಗುತ್ತದೆ. ಶಾಂತಿ ಪ್ರಕ್ರಿಯೆಯಲ್ಲಿ ಕಮ್ಯೂನಿಸ್ಟ್ ಪಕ್ಷದ ಮುಂಚೂಣಿ ಪಾತ್ರ ವಹಿಸಿತು. ಸುಹ್ರವರ್ದಿ ಅವರೇ ಇದನ್ನು ಒಪ್ಪಿಕೊಂಡಿದ್ದಾರೆ.

ತಮ್ಮ ಸರಕಾರದ ವಿರುದ್ಧ ಮಂಡಿತವಾದ ಅವಿಶ್ವಾಸ ಗೊತ್ತುವಳಿಗೆ ಪ್ರತಿಕ್ರಿಯಿಸುತ್ತಾ 1946 ಸೆಪ್ಟೆಂಬರ್ 19 ರಂದು ಅವರು ಹೀಗೆ ಹೇಳಿದರು: " ನಮ್ಮ ಶಾಂತಿ ಪ್ರಯತ್ನದಲ್ಲಿ ನೆರವಾದ ಹಾಗೂ ನಮ್ಮ ರ‍್ಯಾಲಿಗಳಲ್ಲಿ ಪಾಲ್ಗೊಂಡ ಎಲ್ಲರಿಗೂ ನಾನು ಕೃತಜ್ಞತೆ ಅರ್ಪಿಸುತ್ತೇನೆ. ವಿಶೇಷವಾಗಿ, ಕಮ್ಯೂನಿಸ್ಟ್ ಪಕ್ಷದ ಕೆಲವು ಸದಸ್ಯರಿಗೆ ಕೃತಜ್ಞತೆ ಅರ್ಪಿಸಲು ನಾನು ಬಯಸುತ್ತೇನೆ ಯಾಕೆಂದರೆ, ಶಾಂತಿ ಸಮಿತಿಗಳನ್ನು ರಚಿಸಬೇಕೆಂದು ಆರಂಭದಿಂದಲೂ ಒತ್ತಾಯಿಸಿದರು ಅವರೇ. "

ಗಾಂಧೀಜಿ ಸಲಹೆ

ಗಲಭೆಗಳು ಆರಂಭವಾದ ನಂತರ ಸರ್ವಪಕ್ಷ ಕೇಂದ್ರ ಶಾಂತಿ ಸಮಿತಿಯೊಂದನ್ನು ರಚಿಸಬೇಕೆಂದು ಪಕ್ಷದ ನಾಯಕತ್ವ ಯೋಚಿಸುತ್ತಲೇ ಇತ್ತು. ಮಹಾತ್ಮ ಗಾಂಧೀಜಿ 1947ರಲ್ಲಿ ಬೇಲಿಘಾಟ್‌ನಲ್ಲಿ ತಂಗಿದ್ದಾಗ ವಿವಿಧ ಪಕ್ಷಗಳು ಮತ್ತು ಸಂಘಟನೆಗಳ ಪ್ರತಿನಿಧಿಗಳು ಅವರನ್ನು ಭೇಟಿ ಮಾಡಿದರು. ಈ ಭೇಟಿ ಮುಕ್ತಾಯ ಎಂಬುದೇ ಇರಲಿಲ್ಲ. ಭೂಪೇಶ್ ಗುಪ್ತರ ಜತೆ ಸೇರಿ ನಾನೂ ಗಾಂಧೀಜಿಯನ್ನು ಭೇಟಿ ಮಾಡಿ ಅವರ ಸಲಹೆ ಕೇಳಿದೆ. ಸರ್ವಪಕ್ಷ ಕೇಂದ್ರ ಸಮಿತಿಯೊಂದನ್ನು ರಚಿಸುವುದು ಹಾಗೂ ಸರ್ವಪಕ್ಷ ಏಕತಾ ಮೆರವಣಿಗೆಯೊಂದನ್ನು ಏರ್ಪಡಿಸುವುದು ಉತ್ತಮ ಶಾಂತಿ ಮಾರ್ಗ ಎಂದು ಗಾಂಧೀಜಿ ಹೇಳಿದರು. ಇದು ನಮ್ಮ ಮುಂದಿನ ಅತಿ ಪ್ರಮುಖ ಕಾರ್ಯಭಾರವಾಗಿರತಕ್ಕದ್ದು ಎಂದೂ ಅವರು ನುಡಿದರು.

(ಮುಂದುವರಿಯುವುದು)

ಭ್ರಷ್ಟ ವ್ಯವಸ್ಥೆಯಲ್ಲಿ ನ್ಯಾಯಕ್ಕಾಗಿ ಯಶಸ್ವಿ ಹೋರಾಟ

ಇದು ಮಂಗಳೂರು ತಾಲೂಕಿನಲ್ಲಿ ಡಿವೈಎಫ್‌ಐ ನಡೆಸಿರುವ ಹೋರಾಟದ ವರದಿ. ಕುಪ್ಪೆಪದವು ಪೇಟೆಗೆ ಹತ್ತಿರವಿರುವ ನೂದೊಟ್ಟು ಎಂಬಲ್ಲಿ ಶ್ರೀ ಮೊಹಮ್ಮದ್ ಎಂಬ ಶ್ರೀ ಮಂತರೋರ್ವರು ಸರ್ವೆ ನಂಬ್ರ 60/ 1 ರಲ್ಲಿ ನಾಲ್ಕು ಎಕರೆ ಜಮೀನು ಕೊಂಡುಕೊಂಡಿದ್ದರು. ಅದನ್ನು ಎ. ವಸಂತ ರಾವ್ ಎಂಬ ಉದ್ಯಮಿಗೆ ಕಲ್ಲಿನ ಕೋರೆ ಮಾಡಿ ಜಲ್ಲಿ ಕಲ್ಲನ್ನು ತಯಾರಿಸಲು ಲೀಸ್ ಗೆ ನೀಡಿರುತ್ತಾರೆ. ಆತ ಭೂ ಮತ್ತು ಫಣಿಗಾರಿಕೆ ಇಲಾಖೆಗೆ ಲಂಚ ರುಶುವತು ನೀಡಿ ಸ್ಫೋಟಕವನ್ನು ಉಪಯೋಗಿಸದೆ ಕಲ್ಲನ್ನು ಒಡೆದು ಜಲ್ಲಿ ಮಾಡಲಾಗುವುದು ಎಂಬ ಭರವಸೆ ನೀಡಿ ಪರವಾನಿಗೆ ಪಡೆದಿರುತ್ತಾರೆ. ಆದರೆ ಸ್ಫೋಟಕವನ್ನು ಉಪಯೋಗಿಸಿ ರಫ್ತು ಕಲ್ಲನ್ನು ಸ್ಫೋಟಿಸಲು ಪ್ರಾರಂಭಿಸಿದಾಗ ಸ್ಥಳೀಯ ಜನರು ಎಚ್ಚರಾದರು.

ಕಲ್ಲಿನ ಕೋರೆಯ ಜಮೀನಿಗೆ ತಾಗಿಕೊಂಡು ಹಲವಾರು ಮನೆಗಳಿದ್ದು, ಚಿಕ್ಕ ಚಿಕ್ಕ ಜಮೀನಿಗೆ ತಾಗಿಕೊಂಡು ಇನ್ನೊಂದು ಬದಿಯಿಂದ ಕುಪ್ಪೆಪದವು- ಬಿ.ಸಿ.ರೋಡ್ ರಸ್ತೆ ಹಾದು ಹೋಗುತ್ತಿದ್ದು ದಿನಾ ಬಸ್ಸು, ಕಾರು, ಆಟೋರಿಕ್ಷಾ, ಲಾರಿ, ದ್ವಿಚಕ್ರ ವಾಹನಗಳು ಸಂಚರಿಸುತ್ತಿವೆ. ಶಾಲಾ- ಮಕ್ಕಳು, ದನಕರುಗಳು, ಸಾರ್ವಜನಿಕರು ಈ ರಸ್ತೆಯಲ್ಲಿ ನಡೆದುಕೊಂಡು ಹೋಗುವವರಿದ್ದು ಕಲ್ಲು ಸ್ಫೋಟದಿಂದ ಜೀವಕ್ಕೆ ಅಪಾಯವಿದೆ. ಇದರಿಂದ ಭಯಬೀತರಾದ ಜಮೀನಿನ ಪರಿಸರದ ನಿವಾಸಿಗಳು ಊರಿನ ಗಣ್ಯ-ವ್ಯಕ್ತಿಗಳ ನೇತೃತ್ವದಲ್ಲಿ ಸಂಘಟಿತರಾಗಿ ಹೋರಾಟ ಸಮಿತಿಯೊಂದನ್ನು ರಚಿಸಿಕೊಂಡರು ಮಾತ್ರವಲ್ಲ ಕಲ್ಲಿನ ಕೋರೆಯನ್ನು ಪ್ರತಿಭಟಿಸಿ ಸಾರ್ವಜನಿಕ ಸಭೆ ಯೊಂದನ್ನು ನಡೆಸಿದರು. ಗಣ್ಯ ವ್ಯಕ್ತಿಗಳು ಮಾತನಾಡುತ್ತಾ ಕಲ್ಲಿನ ಕೋರೆ ನಮ್ಮನ್ನೆಲ್ಲ ಕೊಲ್ಲಲಿದೆ ಆದುದರಿಂದ ಯಾವುದೇ ಬೆಲೆ ತೆತ್ತಾದರೂ ಕಲ್ಲಿನ ಕೋರೆ ನಡೆಸಲು ಬಿಡಲಾರೆವು ಎಂದು ಭರವಸೆಯ ಮಾತುಗಳನ್ನಾಡಿದರು. ಸ್ಥಳೀಯ ಬಜಪೆ ಪೋಲೀಸ್ ಠಾಣೆಯ ಅಧಿಕಾರಿಯವರು ಕೂಡಾ ಜನಪರ ಕಾಳಜಿಯಿಂದ ಆ ಸಭೆಯಲ್ಲಿ ಮಾತನಾಡಿದರು.

ದುಡ್ಡಿಗೆ ಎಂಜಲು ಸುರಿಸುವ ಖಧೀಮರು

ಕೊರೆಯ ಮಾಲಕರು, ಜಮೀನಿನ ಮಾಲಕರು ಕೂಡಲೇ ಕಾರ‍್ಯ ಪ್ರವೃತ್ತರಾದರು.ಹೋರಾಟ ಸಮಿತಿಯ ಗಣ್ಯವ್ಯಕ್ತಿಗಳನ್ನು ಖಾಸಗಿಯಾಗಿ ಭೇಟಿಯಾಗಿ ವಿಚಾರ ವಿನಿಮಯ ನಡೆಸಿದರು. ಆ ಪ್ರಕಾರ ತಲಾ ರೂಪಾಯಿ 10,000 ಓರ್ವರಿಗೆ, ಇನ್ನೋರ್ವರಿಗೆ ಬೆಲೆಬಾಳುವ ಮೊಬೈಲ್ ಫೋನನ್ನು ನೀಡಿದರು. ಹಸ್ತ ಲಾಘವ ಚಾಚಿದರು. ಹೀಗೆ ಹೋರಾಟದ ಕಿಡಿಯ ತೀಕ್ಷ್ಣತೆಯ ಕಿಡಿ ತಣ್ಣಗಾಯಿತು. ಹೋರಾಟ ಸಮಿತಿಯ ಮುಖಂಡರು ಇದರಿಂದ ನಿಮಗೇನು ತೊಂದರೆಯಾಗುವುದಿಲ್ಲ, ನಾವು ಹೇಳಿದಂತೆ ಕೇಳಿ ಹಾಗೂ ನೀವು ಮುಂದುವರಿದರೆ ಹೆಚ್ಚು ಕಮ್ಮಿಯಾದರೆ ನಮ್ಮನ್ನು ಕೇಳಬಾರದು ಎಂದು ನಿವಾಸಿಗಳನ್ನು ಗದರಿಸಿದರು. ಅಮಾಯಕ ಜನ ಇದರಿಂದ ಚಿಂತಾಜನಕರಾದರು. ಕಳ್ಳರನ್ನು ನಂಬಿಕಸ್ಥರೆಂದು ನಂಬಿ ಅವರ ಕೈಯಲ್ಲಿ ಮನೆಯ ಕೀಲಿ ಕೊಟ್ಟಂತಾಯಿತು ಅವರ ಸ್ಥಿತಿ.

ಡಿ.ವೈ.ಎಫ್.ಐ ಮಧ್ಯ ಪ್ರವೇಶ

ಕೊನೆಗೆ ಸಂತೃಪ್ತ ನಾಗರೀಕರು DYFI ಕುಪ್ಪೆಪದವು ಘಟಕದ ಮುಖಂಡರನ್ನು ಬೇಟಿಯಾಗಿ ತಮ್ಮ ಪರಿಸ್ಥಿತಿ ಬಗ್ಗೆ ದೂರಿತ್ತರು.

DYFI ಉನ್ನತ ಮಟ್ಟದ ನಿಯೋಗವು ಸ್ಥಳಕ್ಕೆ ಬೇಟಿ ನೀಡಿ ವಾಸ್ತವಿಕತೆಯನ್ನು ಅಧ್ಯಯನ ನಡೆಸಿತು. ಸ್ಥಳೀಯ ನಿವಾಸಿಗಳು ನಡೆಸಬೇಕಾದ ಕಾನೂನು, ಇನ್ನಿತರ ಹೋರಾಟದ ಬಗ್ಗೆ ತಿಳುವಳಿಕೆ ನೀಡಿ, ಅವರಿಗೆ ಪ್ರತ್ಯಕ್ಷ ಮತ್ತು ಪರೋಕ್ಷ ಸಹಕಾರ, ಬೆಂಬಲ ನೀಡಲಾಯಿತು.

ನ್ಯಾಯಾಲಯಕ್ಕೆ ಮೊರೆ

ಅಪಾಯಕಾರಿ ಕೋರೆಯ ವಿರುದ್ಧ ನ್ಯಾಯಾಲಯದಲ್ಲಿ ಕೋರೆ ತಡೆಗೆ ನಿರ್ದೇಶನ ಕೋರಿ ಅರ್ಜಿ ಹಾಕಲಾಯಿತು. ಆದರೆ ನ್ಯಾಯಾಲಯ ಕೂಡಲೇ ತಡೆ ನೀಡದೆ ಎರಡೂ ಕಡೆಯ ವಾದ-ವಿವಾದವನ್ನು ಅಲಿಸಲು ದಿನಾಂಕ ಗೊತ್ತುಪಡಿಸಿತು. ಆದರೂ ಪಟ್ಟು ಬಿಡದೆ ಜಿಲ್ಲಾ ಉಪವಿಭಾಗ ಸಹಾಯಕ ದಂಡಾಧಿಕಾರಿಯವರ ಮುಂದೆ ಕೇಸು ದಾಖಲಿಸಿ ನ್ಯಾಯವಾದಿಯೋರ್ವರ ಸಕ್ರಿಯ ಪ್ರಯತ್ನದಿಂದ ಸ್ಫೋಟಕ ಉಪಯೋಗಿಸಿ ಕಲ್ಲು ಸ್ಫೋಟಿಸುವುದಕ್ಕೆ ತಡೆ ಆಜ್ಞೆ ತರುವಲ್ಲಿ ಯಶಸ್ವಿಯಾಯಿತು.

ಈ ನಿರ್ದೇಶನವನ್ನು ರೆವಿನ್ಯೂ ಇನ್ಸ್ ಪೆಕ್ಟರ್ ರವರು ಸಂಬಂಧಪಟ್ಟವರಿಗೆ ಮುಟ್ಟಿಸಬೇಕಾಗಿತ್ತು. ಗುರುಪುರ ಫಿರ್ಕಾದ ರೆವಿನ್ಯೂ ಇನ್ಸ್ ಪೆಕ್ಟರ್ ಈ ನಿರ್ದೇಶನವನ್ನು ಹಸ್ತಾಂತರಿಸಲು ತಯಾರು ಇಲ್ಲ. ರಜೆ ಹಾಕುವುದು, ಬೇರೆ ಬೇರೆ ಕಾರಣ ನೀಡುವುದು ಹೀಗೆ ಹಲವಾರು ದಿನಗಳೇ ಇದರಿಂದ ದಾಟಿ ಹೋಯಿತು. ಈ ರೀತಿ ಯಾಕೆ ಎಂದು ಕೂಲಂಕುಶವಾಗಿ ತನಿಖೆ ನಡೆಸಿದಾಗ ರೆವಿನ್ಯೂ ಇನ್ಸ್‌ಪೆಕ್ಟರ್‌ರವರಿಗೆ ಮತ್ತು ವಿಲೇಜ್ ಅಕೌಂಟೆಂಟ್ಸ್ ಗೆ ತಲಾ ರೂಪಾಯಿ 8,000 ದಂತೆ ಲಂಚನೀಡಿ ಕೋರೆ ನಡೆಸುವರೇ ಸಲಹೆ-ಸೂಚನೆ ಪಡೆದಿರುವ ಬಗ್ಗೆ ಬೆಳಕಿಗೆ ಬಂತು. ಆದರೂ ಅವರಿಬ್ಬರ ಬೆನ್ನ ಬಿಡದೆ ಕೊನೆಗೆ "ತಡೆಯಾಜ್ಞೆ" ನಿರ್ದೇಶನ ಪತ್ರವನ್ನು ಕಲ್ಲಿನ ಕೋರೆ ಮಾಲೀಕರಿಗೆ ಮುಟ್ಟಿಸುವಲ್ಲಿ ಯಶಸ್ವಿಯಾಯಿತು.

ಪೋಲೀಸರ ಪಾತ್ರ

ರೆವಿನ್ಯೂ ಇನ್‌ಸ್ಪೆಕ್ಟರ್‌ರವರು " ತಡೆಯಾಜ್ಞೆ" ಯನ್ನು ಜಾರಿಗೊಳಿಸದಿರುವುದನ್ನು ಮನಗಂಡು dyfi ಮುಖಂಡರು ಬಜಪೆ ಪೋಲೀಸ್ ಠಾಣಾಧಿಕಾರಿಯವರಿಗೆ ಲಿಖಿತ ದೂರು ನೀಡಲು ಹೋದಾಗ ಆತ ದೂರು ಸ್ವೀಕರಿಸಲು ತಯಾರಿಲ್ಲ. ಆತ್ತ " ದೂರು ಅರ್ಜಿ ನೀಡಿ, ಆದರೆ ಸ್ಲಿಪ್ ಆಗಲಿ ಹಿಂಬರಹವಾಗಲೀ ನೀಡಲು ಸಾಧ್ಯವಿಲ್ಲ" ವೆಂದು ಗದರಿಸಿದರು. ಈ ಗದರಿಕೆಯ ಹಿಂದೆ ಮಾಲಿಕರಿಂದ ಪಡೆದಿರುವ ಸುಮಾರು ರೂಪಾಯಿ 5,000 ಕ್ಕೂ ಮಿಕ್ಕಿದ ಲಂಚದ ಪ್ರಭಾವ ಇದೆ ಎಂದು ಬೆಳಕಿಗೆ ಬಂತು. ಭ್ರಷ್ಟಾಚಾರ ಈ ರೀತಿ ಹಾಸು ಹೊಕ್ಕಾಗಿರುವಾಗ ಸರಕಾರಿ ಅಧಿಕಾರಿಗಳ ಕೈಯಲ್ಲಿ ಬಡಜನರ ಬದುಕುವ ಹಕ್ಕು ರಕ್ಷಿಸಲ್ಪಟ್ಟಿತೆ ಎಂಬ ಪ್ರಶ್ನೆ ನಮ್ಮ ಮುಂದೆ ಇದೆ.

ಅಂತೂ ಭ್ರಷ್ಟ ಅಧಿಕಾರಿಗಳ ಕಪಿ ಮುಷ್ಟಿಯಿಂದ ನ್ಯಾಯಾಲಯದ ಆಜ್ಞೆಯನ್ನು ಜಾರಿಗೊಳಿಸ ಬೇಕಾದರೆ ಹಲವಾರು ಹೋರಾಟವನ್ನೇ ಮಾಡಬೇಕಾಯಿತು.

ನಿವಾಸಿಗಳ ಶ್ಲಾಘನೆ

ಭ್ರಷ್ಟ ವ್ಯವಸ್ಥೆಯ ಮಧ್ಯೆಯು ನ್ಯಾಯಕ್ಕಾಗಿ, ಬಡಜನರಿಗಾಗಿ ಬೆನ್ನು ಬಿಡದೆ ಹೋರಾಡಿ ಜನರೊಂದಿಗೆ ಕೊನೆತನಕ ನಿಂತು ನ್ಯಾಯ ಒದಗಿಸಿ ಕೊಟ್ಟ DYFI ಸಂಘಟನೆಯನ್ನು ಸ್ಥಳೀಯ ನಿವಾಸಿಗಳು ಮುಕ್ತ ಕಂಠದಿಂದ ಶ್ಲಾಘಿಸುವಂತಾಗಿದೆ.

ವರದಿ: ವಸಂತ ಆಚಾರಿ, ಮಂಗಳೂರು.

ಈಗ ವಾಜಪೇಯಿ, ಸೋನಿಯಾ 'ಮಾರಲು' ಜಾಹೀರಾತು ಸ್ಪರ್ಧೆ

ಭಾರತೀಯ ಮತದಾರ ಕೇವಲ ಒಬ್ಬ ಬಳಕೆದಾರನೇ?

ಇವು 'ಮುಕ್ತ ಮಾರುಕಟ್ಟೆ'ಯ ದಿನಗಳು. ಉದಾರೀಕರಣದೊಂದಿಗೆ ಪ್ರತಿಯೊಂದು ಕೂಡಾ ಮಾರಾಟದ ಸರಕು ತಾನೆ-ಸಿದ್ಧಾಂತಗಳು, ನಿಲುವುಗಳು ಜತೆಗೆ ರಾಜಕೀಯ ಪಕ್ಷಗಳ ಮುಖಂಡರು ಕೂಡಾ ಮಾರಾಟದ ಸರಕುಗಳು. ಸಹಜವಾಗಿಯೇ 'ಮುಕ್ತ ಮಾರುಕಟ್ಟೆಯ' ಭಿನ್ನ ಭಾಗವಾದ ಜಾಹೀರಾತನ್ನು ಕೋಟ್ಯಾಂತರ ರೂಪಾಯಿಗಳ ಒಂದು ವ್ಯವಹಾರ ಮಾಡಿಕೊಂಡ 'ಜಾಹಿರಾತುದಾರರು'ಗಳಿಗೆ ಈಗ ರಾಜಕೀಯದಲ್ಲಿ ಭಾರೀ ಬೇಡಿಕೆ- ಬಂಡವಾಳಶಾಹಿ ಪಕ್ಷಗಳಿಂದ.

ಉದಾರೀಕರಣದ 'ಹರಿಕಾರ' ಎನಿಸಿದ ರಾಜೀವ್ ಗಾಂಧಿ ಇದರಲ್ಲೂ 'ಹರಿಕಾರ' ಎನಿಸಿದವರು - ಒಂದು ಪ್ರಖ್ಯಾತ ಜಾಹೀರಾತು ಸಂಸ್ಥೆಯನ್ನು ಚುನಾವಣಾ ಕೆಲಸಕ್ಕೆ ನೇಮಿಸಿದರು. 'ಉದಾರೀಕರಣ-ಜಾಗತೀಕರಣ-ಖಾಸಗೀಕರಣ' ದಲ್ಲಿ (ಹಾಗೂ ಅದರೊಂದಿಗೇ ಇರುವ ಭ್ರಷ್ಟಾಚಾರದಲ್ಲೂ) ಈಗ ಕಾಂಗ್ರೆಸ್ಸನ್ನೂ ಮೀರಲು ಹೆಣಗುತ್ತಿರುವ ಬಿಜೆಪಿ ಈ ಜಾಹೀರಾತು ರಂಗದಲ್ಲಿ ಹಿಂದೆ ಬೀಳಲು ಹೇಗೆ ಸಾಧ್ಯ? ಡಿಸೆಂಬರ್ 1997 ರಲ್ಲಿ ವಾಜಪೇಯಿಯವರ ಜನ್ಮದಿನದಂದು ದೇಶದ ಎಲ್ಲಾ ಇಂಗ್ಲೀಷ್ ಪತ್ರಿಕೆಗಳಲ್ಲಿ ವರ್ಣರಂಜಿತ ಪುರವಣಿ ಪ್ರಾಯೋಜಿಸಿ ವಾಜಪೇಯಿಯವರ 'ಮಾರಾಟ' ನಡೆಸಿದ್ದು ನಿಮಗೆ ನೆನಪಿರಬಹುದು. 'ಭಾರತ ಕಾದಿರುವ ವ್ಯಕ್ತಿ' ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದ ಬಗ್ಗೆ ನೀಡಿದ್ದ ಸುಳ್ಳು ಮಾಹಿತಿ ನಂತರ ದೊಡ್ಡ ಸುದ್ದಿಯಾದದ್ದು ನೆನಪಿದೆ ತಾನೆ? ಜಾಹಿರಾತು ಎಂದ ಮೇಲೆ ಅದರಲ್ಲಿ ಇರುವುದೆಲ್ಲಾ ನಿಜ ಎಂದು ಏಕೆ ನಂಬುತ್ತೀರಿ ಎಂಬ ಕಟು ವಾಸ್ತವ ಆಗ ಹಲವರ ಅರಿವಿಗೆ ಬಂತು. ವಾಜಪೇಯಿ ಸರಕಾರ ಲೋಕಸಭೆಯಲ್ಲಿ ವಿಶ್ವಾಸಮತ ಕಳಕೊಂಡ ಮರುದಿನ ದೇಶದ ಎಲ್ಲಾ ಪತ್ರಿಕೆಗಳಲ್ಲಿ ಒಂದು ಪೂರ್ಣಪುಟದ ಜಾಹೀರಾತು 'ಈ ವ್ಯಕ್ತಿ ಮಾಡಿದ ತಪ್ಪಾದರೂ ಏನು?"- ಇಂತಹ ಇನ್ನೊಂದು ಜಾಹೀರಾತು.

ಈಗ 13ನೇ ಲೋಕಸಭೆಯ ಚುನಾವಣೆಗಳಲ್ಲಿ ಜಾಹೀರಾತಿಗೆಂದು 15 ಕೋಟಿ ರೂಪಾಯಿಗಳನ್ನು ಅದು ಮೀಸಲಿಟ್ಟಿದೆ ಯಂತೆ. ಅಧಿಕಾರ ದಲ್ಲಿಲ್ಲದಿದ್ದರೂ ಬಂಡವಾಳಶಾಹಿಗಳ ಇನ್ನೊಂದು ಪಕ್ಷ ಈ ಸ್ಪರ್ಧೆಯಲ್ಲಿ ಹಿಂದೆ ಬೀಳಲು ಹೇಗೆ ಸಾಧ್ಯ?

ಬಿಜೆಪಿ ಈ ಬಾರಿ ಜಾಹೀರಾತು ವಲಯದ ದೊಡ್ಡ-ದೊಡ್ಡ ಕುಳಗಳನ್ನೇ 'ಬಾಡಿಗೆ'ಗೆ ಪಡೆಯಲು ಯಶಸ್ವಿಯಾಗಿದೆಯಂತೆ. ಹಿಂದೂಸ್ತಾನ್ ಲೀವರ್ ಕಂಪನಿಯ ಮಾರುಕಟ್ಟೆ ವಿಭಾಗಗಳ ಮಾಜಿ ಮುಖ್ಯಸ್ಥ ಸಿದ್ಧಾರ್ಥ ಸೆನ್, ಕ್ಲಾರಿಯನ್ ಜಾಹೀರಾತು ಕಂಪನಿಯ ಮುಖ್ಯಸ್ಥೆಯಾಗಿದ್ದ ಈಗ ತನ್ನದೇ ಜಾಹೀರಾತು ಸಂಸ್ಥೆ ನಡೆಸುತ್ತಿರುವ ತಾರಾಸಿನ್ಹಾ, ಇಕ್ವಸ್ ಅಡ್ವರ್ಟೈಸಿಂಗ್‌ನ ಮುಖ್ಯಸ್ಥ ಸುಹೆಲ್ ಸೇಠ್ ಹಾಗೂ ಬಿ.ಪಿ.ಎಲ್. ಗಾಗಿ ಅಮಿತಾಬ್ ಬಚ್ಚನ್‌ರ ಬೃಹತ್ ಜಾಹಿರಾತುಗಳನ್ನು ಸೃಷ್ಟಿಸಿದ ಧರ್ ಅಂಡ್ ಮಾನ್ ಕಂಪನಿಯವರು, ದಿಲ್ಲಿಯ ಕಾಂಟ್ರಾಕ್ಟ್ ಅಡ್ವರ್ಟೈಸಿಂಗ್‌ನ ಮುಖ್ಯಸ್ಥ ಸುಶೀಲ್ ಪಂಡಿತ್-ಇವರೆಲ್ಲರಿಗೆ ಸಲಹೆ ನೀಡಲು ಇಂಡಿಯನ್ ಎಕ್ಸ್‌ಪ್ರೆಸ್‌ನ ಆರ್.ಪಿ.ಸಿಂಗ್-ಇವರೆಲ್ಲರ ಉಸ್ತುವಾರಿ ವಾರ್ತಾ ಮತ್ತು ಪ್ರಸಾರ ಮಂತ್ರಿ ಪ್ರಮೋದ್ ಮಹಾಜನ್ ಹಾಗೂ ಬಿಜೆಪಿ ವಕೀಲ-ವಕ್ತಾರ ಅರುಣ್ ಜೆಟ್ಲೆ.

ಕಾಂಗ್ರೆಸ್‌ನ ಜಾಹೀರಾತು ತಂಡದ ಭಾರೀ ಕುಳಗಳೆಂದರೆ ಇಪಾನ್ ಜಾಹಿರಾತು ಸಂಸ್ಥೆಯ ಮುಖ್ಯಸ್ಥ ರಾಜೀವ್ ದೇಸಾಯಿ, ಮ್ಯಾಡಿಸನ್ ಜಾಹೀರಾತು ಸಂಸ್ಥೆಯ ಸಾಮ್ ಬಲ್ಸಾರಾ. ಮಾಧ್ಯಮ ಮತ್ತು ಸೋನಿ ಅಂಡ್ ಕನ್ಸೆಪ್ಟ್‌ಸಂಸ್ಥೆಗಳು. ಪ್ರಣಬ್ ಮುಖರ್ಜಿ, ಮನಮೋಹನ್ ಸಿಂಗ್ ಹಾಗೂ ಇನ್ನೊಬ್ಬ ಖ್ಯಾತ ವಕೀಲ ಕಪಿಲ್ ಸಿಬಾಲ್ ರಾಜಕೀಯ ಉಸ್ತುವಾರಿ ವಹಿಸಿದ್ದಾರಂತೆ.


ಹೊಸ ದಿಲ್ಲಿಯ ಅಶೋಕ ರಸ್ತೆಯಲ್ಲಿರುವ ಬಿಜೆಪಿಯ ಮುಖ್ಯ ಕಛೇರಿಯಲ್ಲಿ ಮಾಧ್ಯಮ ಮತ್ತು ಜಾಹಿರಾತು ಕೊಠಡಿಗಳನ್ನು ಹೊಸದಾಗಿ ಸುಸಜ್ಜಿತಗೊಳಿಸಲಾಗಿದೆಯಂತೆ- ಹೊಸ ಪೇಂಟ್ಸ್, ಅಮೃತಶಿಲೆಯ ನೆಲ, ಆಧುನಿಕ ಕುರ್ಚಿಗಳು ಹಾಗೂ 16 ಏರ್‌ಕಂಡಿಶನರ್‌ಗಳು. ಬೇರೆ ಯಾವುದೇ ಪಕ್ಷಕ್ಕಿಲ್ಲದ ಆಸ್ತಿಯಿದು. ಆಳುವ ಪಕ್ಷವಾಗಿರುವ ಫಲ ಎಂದು 'ಇಂಡಿಯಾ ಟುಡೇ' ಕೂಡಾ ಹೇಳಿದೆ.

ತಮಾಷೆಯ ಸಂಗತಿಯೆಂದರೆ '96 ರ ಚುನಾವಣೆಗಳಲ್ಲಿ ಕಾಂಗ್ರೆಸ್‌ಗಾಗಿ ಆರ್ಥಿಕ ಸುಧಾರಣೆ ಕುರಿತಾದ ಜಾಹಿರಾತುಗಳನ್ನು ನಿರ್ಮಿಸಿದ (ಆದರೆ ಅದನ್ನು ಕಾಂಗ್ರೆಸ್ ಬಳಸಿ ಕೊಳ್ಳಲಿಲ್ಲವಂತೆ) ಚೈತ್ರ ಜಾಹೀರಾತು ಸಂಸ್ಥೆ ಈ ಬಾರಿ ಬಿಜೆಪಿಯ ಜಾಹೀರಾತು ಕಾಂಟ್ರಾಕ್ಟ್ ಪಡೆಯಲು ಅರ್ಜಿ ಹಾಕಿತ್ತಂತೆ! ಆದರೆ ಅದಕ್ಕೆ ಕಾಂಟ್ರಾಕ್ಟ್ ಸಿಗಲಿಲ್ಲ. ಕಾಂಗ್ರೆಸ್ಸಿಗೆಂದು ತಯಾರಿಸಿದ್ದ ನರಸಿಂಹರಾಯ್ ಆರ್ಥಿಕ ಸುಧಾರಣೆಗಳನ್ನು ಹೊಗಳುವ ಜಾಹೀರಾತುಗಳು ಬಿಜೆಪಿಗೂ ಪ್ರಯೋಜನಕ್ಕೆ ಬರಬಹುದೆಂದು ಆ ಸಂಸ್ಥೆಯವರು ಭಾವಿಸಿದ್ದಾರೋ ಏನೋ? ಇನ್ನೊಂದು ಗಮನಿಸಬೇಕಾದ ಸಂಗತಿಯೆಂದರೆ ಕಳೆದ ಬಾರಿ 'ಇನ್ನುಮುಂದೆ ನಾವು ರಾಜಕೀಯ ದವರೊಂದಿಗೆ ವ್ಯವಹಾರ ನಡೆಸುವುದಿಲ್ಲ' ಎಂದು ಈ ಸಂಸ್ಥೆಯ ಮುಖ್ಯಸ್ಥರು ಹೇಳಿದ್ದರಂತೆ - ಕಾರಣ ತಮ್ಮ ಜಾಹೀರಾತಿನ ಬಾಡಿಗೆ ಹಣದ ಕೆಲವಂಶ 'ಬಿಳಿ'ಹಣವಾಗಿ, ಇನ್ನೂ ಕೆಲವಂಶ 'ಕಪ್ಪು'ಹಣವಾಗಿ ಪಡೆಯಬೇಕಾಗುತ್ತದೆಯಂತೆ!

ಇರಲಿ, ಈ ಎರಡು ಬಂಡವಾಳಶಾಹಿ ಪಕ್ಷಗಳ ಜಾಹೀರಾತಿಗೆ ವಿಷಯಗಳೇನಿರುತ್ತವೆ? ಈ ಬಗ್ಗೆಯೂ ಈ ಪಕ್ಷಗಳ ಜಾಹೀರಾತು ವಕ್ತಾರರು ಈಗಾಗಲೇ ಪತ್ರಿಕೆಗಳವರಿಗೆ ತಿಳಿಸಿದ್ದಾರೆ.


ಬಿಜೆಪಿಯ ಪ್ರಚಾರದಲ್ಲಿ ಈ ಬಾರಿ ಹಿಂದುತ್ವ, ಸ್ವದೇಶಿ ಇರುವುದಿಲ್ಲವಂತೆ.(ಇದು ಅನಿರೀಕ್ಷಿತವೇನಲ್ಲ) ಅದರ ಬದಲು `Comfort Factor' ಎಂದರೆ ಬಿಜೆಪಿ ನೇತೃತ್ವದ ಆಳ್ವಿಕೆಯಿಂದ ದೇಶದ ಜನಕ್ಕೆ ಎಷ್ಟೊಂದು ಸಮಾಧಾನವಾಗಿದೆ ಎಂಬುದೇ ಅವರ ಜಾಹೀರಾತುಗಳ ಮುಖ್ಯ ಅಂಶವಾಗಿರುತ್ತದೆ ಜತೆಗೆ ವಾಜಪೇಯಿಯವರ 'ಅಭೂತಪೂರ್ವ' ನಾಯಕತ್ವ, ಆರ್ಥಿಕ ಮುನ್ನಡೆ ಹಾಗೂ ಆಹಾರ ಧಾನ್ಯಗಳ ಉತ್ತಮ ದಾಸ್ತಾನು! ಇನ್ನು ಕಾರ್ಗಿಲ್ ಕೂಡಾ ಸೇರುತ್ತದೆಯಂತೆ. ಬಿಜೆಪಿಗೆ ಪರ್ಯಾಯವೆಂದರೆ ಸೋನಿಯಾ, ಜಯಲಲಿತಾ, ಲಾಲೂರವರ ಕಸಮಿಶ್ರಣ ಎಂಬುದು ಕೂಡಾ ಬಿಜೆಪಿಯ 15 ಕೋಟಿ ರೂ. ಜಾಹೀರಾತು ಕಾರ್ಯಕ್ರಮದ ಇನ್ನೊಂದು ಅಂಶವಂತೆ.






ಬಿಜೆಪಿ ಜಾಹೀರಾತಿನ ಮಹಾಕುಳಗಳು
ಧರ್-ಹೂನ್ ಮತ್ತು ತಾರಾ ಸಿನ್ಹಾ

'ಮುಕ್ತ ಮಾರುಕಟ್ಟೆಯ' ಭಿನ್ನ ಭಾಗವಾದ ಜಾಹೀರಾತನ್ನು ಕೋಟ್ಯಾಂತರ ರೂಪಾಯಿಗಳ ಒಂದು ವ್ಯವಹಾರ ಮಾಡಿಕೊಂಡ 'ಜಾಹಿರಾತುದಾರರು'ಗಳಿಗೆ ಈಗ ರಾಜಕೀಯದಲ್ಲಿ ಭಾರೀ ಬೇಡಿಕೆ- ಬಂಡವಾಳಶಾಹಿ ಪಕ್ಷಗಳಿಂದ.





ಕಾಂಗ್ರೆಸ್ ಜಾಹೀರಾತಿನ ಮಹಾಕುಳಗಳು
ರಾಜೀವ್ ದೇಸಾಯಿ ಮತ್ತು ಸಾಮ್ ಬಲ್ಸಾರಾ

ಅತ್ತ ಕಾಂಗ್ರೆಸ್ ಹರಡಿಸಬೇಕೆಂದಿರುವ ಭ್ರಮೆಗಳೂ ಇವಕ್ಕಿಂತ ಬಹಳ ಭಿನ್ನವಾಗಿಲ್ಲ-ಮುಖ್ಯ ಭ್ರಮೆಯೆಂದರೆ ಏಕ ಪಕ್ಷ ಸ್ಥಿರ ಸರ್ಕಾರ! 'ಈ ಸಲ ಗೆಲ್ಲುವುದು ಕಾಂಗ್ರೆಸ್ ಪಕ್ಷವೇ' ಎಂದು ಜನ ನಂಬುವಂತೆ ಮಾಡುವುದು ಈ ಜಾಹೀರಾತುಗಳ ಮುಖ್ಯ ಅಂಶವಂತೆ. ಸಹಜವಾಗಿಯೇ ಕಾರ್ಗಿಲ್‌ನ ಬಿಜೆಪಿ ಅಪಪ್ರಚಾರಕ್ಕೆ ಪ್ರತಿ ಸವಾಲು ಕಾಂಗ್ರೆಸ್ಸಿನಿಂದ ಇರಬೇಕಾಗುತ್ತದೆ. ಆದರೆ 50 ಸಾವಿರ ಕೋಟಿ ರೂಪಾಯಿಗಳ ಟೆಲಿಕಾಂ ಹಗರಣ ಇದುವರೆಗೆ ಕಾಂಗ್ರೆಸ್ಸಿನ ಜಾಹೀರಾತು ಪಟ್ಟಿಗೆ ಬಂದಂತಿಲ್ಲ. ಪ್ರಚಾರ ಕಾರ್ಯ ಮುಗಿಲು ಮುಟ್ಟಿದಾಗ ಬಹುಶಃ ಅದನ್ನು ಸೇರಿಸಿಕೊಳ್ಳಬೇಕಾದೀತು. ಆಗ 60 ಕೋಟಿ ರೂಪಾಯಿಗಳ ಬೋಫೋರ್ಸ್ ಹಗರಣದಿಂದ 50 ಸಾವಿರ ಕೋಟಿ ರೂಪಾಯಿಗಳ ಟೆಲಿಫೋನ್ ಹಗರಣದವರೆಗೂ ಎಲ್ಲವೂ ಸಾರ್ವಜನಿಕ ಚರ್ಚೆಯ ವಿಷಯವಾಗುತ್ತವೆಯೇ? ಲಾಲೂ ಯಾದವ್‌ರ 1000 ಕೋಟಿ ರೂಪಾಯಿಗಳ ಮೇವು ಹಗರಣ, ಜಯಲಲಿತಾರ ಹಗರಣಗಳ ಬಗ್ಗೆ ಭಾರೀ ಗದ್ದಲ ಎಬ್ಬಿಸಿದ ಪತ್ರಿಕೆಗಳವರು ಅವಕ್ಕೆಲ್ಲಾ ಕಳಸವಿಟ್ಟಂತೆ ಬಂದಿರುವ ವಾಜಪೇಯಿಯವರ 50 ಸಾವಿರ ಕೋಟಿ ರೂಪಾಯಿಗಳ ಟೆಲಿಕಾಂ ಹಗರಣದ ಬಗ್ಗೆ ಮೌನವಾಗಿರುವುದನ್ನು ಕಂಡರೆ ಇಂತಹ ಸಾರ್ವಜನಿಕ ಚರ್ಚೆ ನಡೆಯಲು ನಮ್ಮ ಬಂಡವಾಳಶಾಹಿ ಮಾಧ್ಯಮಗಳು ಬಿಡುತ್ತಾರೆಯೇ ಎಂದು ಕಾದು ನೋಡಬೇಕು.

ಈ ಸಂದರ್ಭದಲ್ಲಿ ಹಿರಿಯ ಮುತ್ಸದ್ಧಿ ಜ್ಯೋತಿ ಬಸು ಅವರು ನೀಡಿರುವ ಎಚ್ಚರ ನಮಗೆ ನೆನಪಿರಬೇಕು - 'ಚುನಾವಣೆಗಳು ಬಂತೆಂದರೆ ಹಸಿ ಸುಳ್ಳುಗಳು, ಅರೆಸತ್ಯಗಳ ಪ್ರಚಾರ ನಡೆಯುತ್ತದೆ. ನಿಜ, ಕೊನೆಗೆ ಸತ್ಯಕ್ಕೇ ಜಯ, ಆದರೆ ಈ ಸತ್ಯವನ್ನು ನಾವು ಮನೆ ಮನೆಗೆ, ವ್ಯಕ್ತಿ-ವ್ಯಕ್ತಿಗೆ ಕೊಂಡೊಯ್ಯಬೇಕು, ನಿಜ ಸಂಗತಿಯೇನು, ಸತ್ಯದ ತಲೆಗೆ ಹೊಡೆಯುವ ಸುಳ್ಳುಗಳು ಎಂತವು ಎಂದು ತಿಳಿಸಬೇಕು. ಪಕ್ಷದ ಸಾಹಿತ್ಯದ ಮತ್ತು ಪ್ರಕಟಣೆಗಳ ಪ್ರಚಾರ ಮತ್ತಷ್ಟು ಹೆಚ್ಚಬೇಕು. ಜನರೊಡನೆ, ಜನರ ಮಧ್ಯೆ ಇರುವಂತಹ ಹೋರಾಟ ನಡೆಸಬೇಕು"

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ತಮ್ಮ ಪ್ರತಿನಿಧಿಗಳನ್ನು ಆರಿಸುವ ಮತದಾರರನ್ನು ಕೇವಲ ಮಾರುಕಟ್ಟೆಯ ಬಳಕೆದಾರರಂತೆ ಕಾಣುವವರನ್ನು ಬಯಲಿಗೆಳೆಯಲು ದುಡಿವ ಜನರ ಸಂಘಟನೆಗಳ ಮುಂದಿರುವ ದಾರಿ ಇದೊಂದೆ ಅಲ್ಲವೇ?

- ಕೆ.ವಿ.

ಬಿಜೆಪಿಯ ಬಂಡವಾಳ

"................ವಿದೇಶಿ ಹೂಡಿಕೆದಾರರು, ಅನಿವಾಸಿ ಹೂಡಿಕೆದಾರರು ಹಾಗೂ ದೇಶಿ ದೊಡ್ಡ ಬಂಡವಾಳಿಗರು - ಹೀಗೆ ಭಾರತದಲ್ಲಿ ಆರ್ಥಿಕ ಹಿತಾಸಕ್ತಿ ಹೊಂದಿರುವ ಎಲ್ಲಾ ದೊಡ್ಡ ಬಂಡವಾಳಿಗರ ವಿಭಾಗಗಳನ್ನು ಗೆದ್ದುಕೊಳ್ಳಲು ಬಿಜೆಪಿಗೆ ಈಗ ಸಾಧ್ಯವಾಗಿದೆ. ನಿಜ, ಇದರಿಂದ ಬಿಜೆಪಿಯ ಚುನಾವಣಾ ಖಜಾನೆ ಬಹಿರಂಗ ಹಾಗೂ ಗುಪ್ತ ಖಾಸಗಿ ಕೊಡುಗೆಗಳಿಂದ ಇನ್ನಷ್ಟು ಭರ್ತಿಯಾಗುತ್ತದೆ. ಆದ್ದರಿಂದ ಇತ್ತೀಚಿನ ವರ್ಷಗಳಲ್ಲಿ ಭಾರೀ ಹಣ ಖರ್ಚು ಮಾಡುವ ಅವರ ಚುನಾವಣಾ ಪ್ರಚಾರ ವೈಖರಿ ಈ ಬಾರಿ ಇನ್ನಷ್ಟು ಬಲಗೊಳ್ಳುವುದು ಸಾಧ್ಯ. ಆದರೆ ಆ ಮೂಲಕ ತಮಗೆ ಒಂದು ಸ್ಪಷ್ಟ ಬಹುಮತ ನೀಡುವಂತೆ ಮತದಾರರ ಮನಸ್ಸನ್ನು ವಿಚಲಿತಗೊಳಿಸ ಬಲ್ಲದೇ ಎಂಬುದು ಇನ್ನೂ ಸ್ಪಷ್ಟವಾಗಿಲ್ಲ"

- ಪ್ರಖ್ಯಾತ ಅರ್ಥಶಾಸ್ತ್ರಜ್ಞ
ಡಾ. ಸಿ.ಪಿ.ಚಂದ್ರಶೇಖರ್



ಕೋಟ್ಯಾಂತರ ಮಂದಿ ವೀಕ್ಷಿಸಿದ ಶತಮಾನದ ಕೊನೆಯ ಸೂರ್ಯಗ್ರಹಣ

ಆಗಸ್ಟ್ 11 ರಂದು ಅಟ್ಲಾಂಟಿಕ್ ಸಾಗರದಿಂದ ಹಿಡಿದು ಬಂಗಾಳಕೊಲ್ಲಿಯ ವರೆಗಿನ ಪ್ರದೇಶದಲ್ಲಿ ಕೋಟ್ಯಾಂತರ ಮಂದಿ ಈ ಸಹಸ್ರಮಾನದ ಕೊನೆಯ ಸೂರ್ಯಗ್ರಹಣವನ್ನು ವೀಕ್ಷಿಸಿದರು. ಆದರೆ 20ನೇ ಶತಮಾನದ ಅಂತ್ಯದಲ್ಲೂ ಗ್ರಹಣಕ್ಕೆ ಸಂಬಂಧಪಟ್ಟ ಹಲವು ಮೂಢನಂಬಿಕೆಗಳು ಇನ್ನೂ ತಮ್ಮ ಕಪಿಮುಷ್ಟಿ ಹೊಂದಿರುವುದೂ ಕಂಡು ಬಂತು. ಕಳೆದ ಬಾರಿಯಂತೆ ಈ ಬಾರಿಯೂ ಬೀದಿಗಳು ಗ್ರಹಣದ ವೇಳೆಗೆ ನಿರ್ಜನವಾದವು. ಮನೆ ಬಾಗಿಲು-ಕಿಟಕಿಗಳನ್ನು ಮುಚ್ಚಿ ಮಕ್ಕಳಲ್ಲಿ ಎದ್ದ ಸಹಜ ಕುತೂಹಲವನ್ನು ದಬಾಯಿಸಿದವರ ಸಂಖ್ಯೆಯೂ ಸಾಕಷ್ಟಿತ್ತು.ಭಾರತ ಜನವಿಜ್ಞಾನ ಸಮಿತಿಯಂತಹ ಸಂಘಟನೆಗಳ ಪ್ರಯತ್ನದಿಂದ ರಾಜ್ಯದಲ್ಲಿ ಹಲವೆಡೆ, ಬೆಂಗಳೂರಿನಲ್ಲಿ ನೆಹರೂ ತಾರಾಲಯದಲ್ಲಿ ಮತ್ತಿತರ ಹಲವೆಡೆ ಖಗ್ರಾಸ ಸೂರ್ಯಗ್ರಹಣವನ್ನು ಸಾಕಷ್ಟು ಸಂಖ್ಯೆಯ ಜನ ವೀಕ್ಷಿಸಿದರು. ಮೋಡ ಕವಿದ ಆಕಾಶ ಹಲವರಿಗೆ ನಿರಾಸೆಯನ್ನು ಉಂಟು ಮಾಡಿತು. ಬಿ.ಜಿ.ವಿ.ಎಸ್. ರಾಜ್ಯಾದ್ಯಂತ ಸುಮಾರು ಒಂದು ಸಾವಿರ ಚರ್ಚಾಗೋಷ್ಠಿಗಳನ್ನು ಏರ್ಪಡಿಸಿ, ಸುರಕ್ಷಿತ ಫಿಲ್ಟರುಗಳನ್ನು ಮಾರಾಟ ಮಾಡಿ ಜನ ಗ್ರಹಣ ವೀಕ್ಷಿಸುವಂತೆ ಪ್ರೋತ್ಸಾಹಿಸುವ ಕಾರ್ಯವನ್ನು ಈ ಸಂದರ್ಭದಲ್ಲಿ ಹಾಕಿಕೊಂಡಿತು. ಈ ಬಗ್ಗೆ ಒಂದು ಕಿರುಪುಸ್ತಕವನ್ನು ಅದು ಪ್ರಕಟಿಸಿದ್ದು ಸಾಕಷ್ಟು ಸಂಖ್ಯೆಯಲ್ಲಿ ಅದು ಮಾರಾಟವಾಗಿದೆ.



Reg. No. 17015/64 KRNM/BGS-405 MAG(2) PRB DECR 319-79/79 AIKYARANGA WEEKLY
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಜಿ.ಎನ್ ನಾಗರಾಜ್, ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು - 27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1
Printed & Published by Communist Party of India(Marxist), Karnataka State Committee. Editor : G.N. NAGARAJ